
ವಾರ್ಷಿಕ ಚಂದಾ ರೂ.25/-

# ಮಾರ್ಚ್ ಜನಪದ


ಸಂಪುಟ–06 • ಸಂಚಿಕೆ–05 • ಮಾರ್ಚ್ 2022



## ಹೆಣ್ಣುಮಕ್ಕಳಿಗೆ ಓಬವ್ವ ಆತ್ಮರಕ್ಷಣೆ ಕಲೆ ತರಬೇತಿ

Downloaded From: www.kpscvaani.com





ಜನವರಿ 28 ರಂದು ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಆರು ತಿಂಗಳು ಪೂರೈಸಿದ ನಿಮಿತ್ತ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊರತಂದ "ಭವ್ಯ ಭವಿಷ್ಯಕ್ಕಾಗಿ ಭರವಸೆಯ ಹೆಜ್ಜೆಗಳು" ಎಂಬ ಸಾಧನೆಯ ಪುಸ್ತಕವನ್ನು ಮತ್ತು ವಾರ್ತಾ ಜನಪದ ಸಂಚಿಕೆಯನ್ನು ಬಿಡುಗಡೆಗೊಳಿಸಿದ ಸಂದರ್ಭ.

Downloaded From: www.kpscvaani.com

ವಾರ್ಷಿಕ ಚಂದಾ ರೂ.25/–

# ವಾರ್ತಾ ಜನಪದ

ಸಂಪುಟ–06 • ಸಂಚಿಕೆ–05 • ಮಾರ್ಚ್ 2022





**06** ಗ್ರಾಮೀಣ ಜನರ ಸೇವೆಗಾಗಿ ಗ್ರಾಮ ಒನ್
• ಬಿ.ಜಿ.ಪೂರ್ಣಿಮ

**10** ರೈತ ಸವಲತ್ತು ವಿತರಣೆಗೆ ಸಹಕಾರಿ: ಫ್ರೂಟ್ಸ್ ತಂತ್ರಾಂಶ
• ಸಂಧ್ಯಾ ಸೊರಬ

**14** ಕೋವಿಡ್ ನಿರ್ವಹಣೆಯಲ್ಲಿ ರಾಜ್ಯಕ್ಕೆ ಜನಮನ್ನಣೆ: ರಾಜ್ಯಪಾಲರ ಇಂಗಿತ
• ಆರ್. ರಂಜಿತಾ



**17** ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳ ಮಾರಾಟಕ್ಕೆ ಅಮೆಜಾನ್‌ನೊಂದಿಗೆ ಒಪ್ಪಂದ
• ಡಾ. ಸಿ. ಎನ್. ಅಶ್ವತ್ಥನಾರಾಯಣ್

**20** ಸರ್ಕಾರದಿಂದ ಹೆಣ್ಣುಮಕ್ಕಳಿಗೆ ಓಬವ್ವ ಆತ್ಮರಕ್ಷಣೆ ಕಲೆ ತರಬೇತಿ
• ಶ್ರೀನಿಕಾ



**22** ಲತಾ ಮಂಗೇಶ್ಕರ್ : ಮೌನಕ್ಕೆ ಶರಣಾದ ಗಂಧರ್ವ ಲೋಕದ ಧ್ವನಿ
• ಡಿ.ಪಿ.ಮುರಳೀಧರ್

**26** ಭಾವೈಕ್ಯದ ಶರಣ: ಇಬ್ರಾಹಿಂ ಸುತಾರ್
• ಸಂಗಮೇಶ್ ಎನ್ ಜವಾದಿ

**28** ರಾಜ್ಯದ ಐವರು ಸಾಧಕರಿಗೆ ಪದ್ಮಶ್ರೀ

**32** ದ್ವಿತೀಯ ಬಹುಮಾನ ಪಡೆದ ಕರ್ನಾಟಕ ರಾಜ್ಯದ ಸ್ತಬ್ಧಚಿತ್ರ

**34** ಅಸಾಂಕ್ರಾಮಿಕ ರೋಗಗಳ ತಪಾಸಣೆ ಪೂರ್ಣಗೊಳಿಸಿದ ದೇಶದ ಮೊದಲ ಜಿಲ್ಲೆ:ಚಿಕ್ಕಮಗಳೂರು
• ಬಿ.ಎ.ಖಾದರ್ ಶಾ

**36** ಕೋವಿಡ್ ಪರೀಕ್ಷೆಯಲ್ಲಿ ಕರ್ನಾಟಕ ಮೂರನೇ ಸ್ಥಾನ
• ಶುಭಾ

**38** ಲೋಕಾರ್ಪಣೆಗೊಂಡ ನವೀಕೃತ ಸರ್ಕಾರಿ ವೈಮಾನಿಕ ತರಬೇತಿ ಶಾಲೆ
• ಶಾರ್ವಿ

**40** ಬಿಳಿಯರ ವಿರುದ್ಧ ಸೆಣಸಿದ ನರಗುಂದದ ಬಾಬಾ ಸಾಹೇಬ
• ಎನ್. ಜಗನ್ನಾಥ ಪ್ರಕಾಶ್

**42** ಕೆ.ಟಿ.ಪಿ.ಪಿ. ಕಾಯಿದೆ ನಿಬಂಧನೆ ವಿನಾಯಿತಿಯಿಂದ ನವೋದ್ಯಮಗಳಿಗೆ ಅವಕಾಶ
• ಬಿ.ಎಸ್.ವೆಂಕಟೇಶ ಪ್ರಸಾದ್

**46** ಕಾಂಡ್ಲಾವನದೊಳಗೆ ಕಯಾಕಿಂಗ್ ಸಾಹಸ ಯಾನ
• ಡಾ. ಪಿ. ವಿ. ರಾವ್

**48** ನಿರಂತರ ಆದಾಯ ನೀಡಲಿರುವ ಕುಕ್ಕಟ ಉದ್ಯಮ
• ಮಂಜುನಾಥ್ ನಾಯ್ಕ್

**50** ಪದಬಂಧ-28



**ಪ್ರಧಾನ ಸಂಪಾದಕರು**
**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ, ಬನಶಂಕರಿ 1ನೇ ಹಂತ, ಬೆಂಗಳೂರು–50


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Downloaded From: www.kpscvaani.com

# ನಿಮ್ಮ ಅನಿಸಿಕೆ

ಫೆಬ್ರವರಿ 2022 ರ ವಾರ್ತಾ ಜನಪದ ಮಾಸ ಪತ್ರಿಕೆಯಲ್ಲಿ ಅಚ್ಚಾಗಿರುವ ಎಲ್ಲಾ ಬರಹಗಳು ಹೊಸ ವರುಷದ ಹೊಸತನದಿಂದ ಕೂಡಿವೆ. ನವಕರ್ನಾಟಕ, ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳ ಮಾಹಿತಿಯು ವಿಪುಲವಾಗಿತ್ತು. ತ್ರಿವಿದ ದಾಸೋಹಿ ಶಿವಕುಮಾರ ಶ್ರೀಗಳ 'ದಾಸೋಹ ದಿನ'ದ ಸಂದರ್ಭಚಿತ್ತ ಬರಹ ಸೂಕ್ತವಾಗಿತ್ತು. ಶಿವಪುರ ಸತ್ಯಾಗ್ರಹದ ಲೇಖನವು ಇತಿಹಾಸವನ್ನು ಮೆಲುಕು ಹಾಕುತ್ತಿತ್ತು. ಹೀಗೆ ಹತ್ತಾರು ಉಪಯುಕ್ತ ಬರಹಗಳೊಂದಿಗೆ ಪ್ರತಿಕೆಯನ್ನು ಓದುಗರ ಮನೆ ಬಾಗಿಲಿಗೆ ತಲುಪಿಸುವಂತೆ ಮಾಡಿರುವ ಪತ್ರಿಕೆಯ ಪ್ರಕಟಣಾ ಮಂಡಳಿಗೆ ತುಂಬು ಹೃದಯದ ಧನ್ಯವಾದಗಳು.

**–ಡಾ. ಶಿವರಾಜ ಯತಗಲ್,**
**ಲಿಂಗಸೂಗೂರು**

* * *

ವಾರ್ತಾ ಜನಪದ ಫೆಬ್ರವರಿ ಸಂಚಿಕೆಯ ಮುಖಪುಟ ಮನವನ್ನು ಮುದಗೊಳಿಸಿತು. ಮುಖ್ಯಮಂತ್ರಿಗಳಾದ ಬಸವರಾಜ ಎಸ್ ಬೊಮ್ಮಾಯಿ ಅವರು ಅರ್ಧ ವರ್ಷದಲ್ಲಿ ಕರ್ನಾಟಕದಲ್ಲಿ ಕೈಗೊಂಡ ಅನೇಕ ಜನೋಪಯೋಗಿ ಕಾರ್ಯಕ್ರಮಗಳ ಮಾಹಿತಿಯನ್ನು ಮನಮುಟ್ಟುವಂತೆ ಸಮರ್ಪಕವಾದ ಚಿತ್ರಗಳೊಂದಿಗೆ ತಿಳಿಸಿದ ಈ ಲೇಖನ ಸಂಗ್ರಹ ಯೋಗ್ಯವಾಗಿತ್ತು.


**–ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

ದಾಸೋಹ ದಿನಾಚರಣೆ ಅಂಗವಾಗಿ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದ್ದ ಸಿದ್ಧಗಂಗಾ ಮಠದಲ್ಲಿನ ದಾಸೋಹ ಕುರಿತ ಲೇಖನ ಮತ್ತು ಛಾಯಾಚಿತ್ರಗಳು ಸೊಗಸಾಗಿದೆ. ಮುಖ್ಯಮಂತ್ರಿ ಅವರು ಈ ಆರು ತಿಂಗಳಿನಲ್ಲಿ ಅಮೃತ ಯೋಜನೆ, ಜನಸೇವಕ, ಜನಸ್ಪಂದನಾ, ರೈತ ವಿದ್ಯಾ ನಿಧಿ ಇವೇ ಮುಂತಾದ ಜನಪ್ರಿಯ ಯೋಜನೆಗಳನ್ನು ನೀಡಿರುವುದು ಹೆಮ್ಮೆಯ ವಿಷಯವೇ ಸರಿ.

ಸಿದ್ಧಗಂಗಾ ಶಿವಕುಮಾರ ಶ್ರೀಗಳು ಈಗಿನ ನವಯುಕರಿಗೆ ಪ್ರೇರಣಾದಾಯಕ ರಾಗಿದ್ದಾರೆ. ಓಮಿಕ್ರಾನ್ ರೂಪಾಂತರಿ ವೈರಸ್‌ನಿಂದ ರಕ್ಷಿಸಿಕೊಳ್ಳಲು ಜನರು ಪಾಲಿಸಬೇಕಾದ ನಿಯಮಗಳ ಕುರಿತು ಪ್ರಕಟಿಸಲಾಗಿರುವ ಲೇಖನ ಉಪಯುಕ್ತವಾಗಿದೆ. ಒಟ್ಟಾರೆ ಪತ್ರಿಕೆಯು ಬಣ್ಣಬಣ್ಣದ ಚಿತ್ರಗಳೊಂದಿಗೆ ಒಳ್ಳೆಯ ವಿಚಾರಗಳಿಂದ ಕೂಡಿದೆ. ಸಂಪಾದಕರಿಗೆ ಧನ್ಯವಾದಗಳು.

**–ಎಲ್.ಶಾಂತಾ ಬಾಯಿ,**
**ಬೆಂಗಳೂರು**

* * *



ಮುಖ್ಯಮಂತ್ರಿಗಳು ರೈತರ ಪರವಾಗಿದ್ದಾರೆ ಎಂಬುದಕ್ಕೆ ಅವರು ರೈತರ ಆದಾಯವನ್ನು ಹೆಚ್ಚಿಸಲು ಸೆಕೆಂಡರಿ ಅಗ್ರಿಕಲ್ಚರ್ ನಿರ್ದೇಶನಾಲಯವನ್ನು ಸ್ಥಾಪಿಸಿ ಆದೇಶ ಹೊರಡಿಸಿರುವುದೇ ಸಾಕ್ಷಿಯಾಗಿದೆ. ರೈತ ಕುಟುಂಬದ ಸದಸ್ಯನಾದ ನನಗೆ ವಾರ್ತಾ ಜನಪದ ಪತ್ರಿಕೆಯಲ್ಲಿ ಈ ನಿರ್ದೇಶನಾಲಯ ಸ್ಥಾಪನೆ ಕುರಿತು ಪ್ರಕಟಿಸಲಾಗಿರುವ ಲೇಖನ ಓದಿ ತುಂಬಾ ಸಂತೋಷವಾಯಿತು. ಇದುವರೆವಿಗೆ ರೈತ ಬಿತ್ತಿದ ಬೆಳೆಯಿಂದ ಬರುವ ಆದಾಯವನ್ನು ಮಾತ್ರ ಪಡೆಯುತ್ತಿದ್ದ, ಇದರಿಂದಾಗಿ ಇನ್ನು ಮುಂದೆ ಬಿತ್ತನೆಯಿಂದ ಹಿಡಿದು ಮಾರಾಟದ ಪೂರೈಕೆಯ ಲಾಭದವರೆಗೂ ದುಡಿಯುವ ಅವಕಾಶವನ್ನು ಪಡೆಯಲಿದ್ದಾನೆ.

**–ಸೋಮೇಗೌಡ, ಅರಸೀಕೆರೆ**

* * *

'ಸ್ವಾತಂತ್ರ್ಯ ಸಮರಕ್ಕೆ ಹಾದಿಕೊಟ್ಟ ಶಿವಪುರ ಧ್ವಜ ಸತ್ಯಾಗ್ರಹ' ಲೇಖನ ಓದಿ ಪುಳಕಿತಗೊಂಡೆ. ಸತ್ಯಾಗ್ರಹ ಸೌಧವಿರುವ ಜಿಲ್ಲೆಯವಳಾದ ನನಗೆ ಶಿವಪುರದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟದ ಕುರಿತು ಸರಿಯಾದ ಮಾಹಿತಿ ಇರಲಿಲ್ಲ. ಉಪ್ಪಿನ ಸತ್ಯಾಗ್ರಹದಂತೆ ಧ್ವಜ ಸತ್ಯಾಗ್ರಹವು ಸ್ವಾತಂತ್ರ್ಯ ಹೋರಾಟದ ಅಸ್ತ್ರವಾಗಿತ್ತು ಎಂಬುದು ಈ ಲೇಖದಿಂದ ತಿಳಿಯಿತು. ಕರ್ನಾಟಕದಲ್ಲಿ ಧ್ವಜ ಸತ್ಯಾಗ್ರಹಕ್ಕೆ ನಾಂದಿ ಹಾಕಿದ್ದು ಮದ್ದೂರು ಬಳಿಯ ಶಿವಪುರದ ಧ್ವಜ ಸತ್ಯಾಗ್ರಹ ಎಂದು ತಿಳಿದು ನಮ್ಮ ಊರಿನ ಬಗ್ಗೆ ಹೆಮ್ಮೆ ಎನಿಸಿತು. ಇಂತಹ ಮಾಹಿತಿಗಳಿಂದ ನಮ್ಮಂತಹ ಯುವ ಜನರಿಗೆ ಇತಿಹಾಸವನ್ನು ತಿಳಿಯುವಂತಾಗುತ್ತದೆ. ಹಾಗೆಯೇ ದೇಶ ಪ್ರೇಮವನ್ನು ಬೆಳೆಸುತ್ತದೆ.

**–ಎಂ. ಜೆ. ದೇವಿಕರಾಣಿ,**
**ಮಂಡ್ಯ**

ಫೆಬ್ರವರಿ ವಾರ್ತಾ ಜನಪದದ ಮುಖಪುಟವು ಮುಖ್ಯಮಂತ್ರಿ ಅವರ ಭಾವಚಿತ್ರದೊಂದಿಗೆ ತುಂಬಾ ಸೊಗಸಾಗಿ ಮೂಡಿಬಂದಿದೆ. 'ನವ ಕರ್ನಾಟಕ ನಿರ್ಮಾಣಕ್ಕೆ ಮುಖ್ಯಮಂತ್ರಿಗಳ ನಿರ್ಣಾಯಕ ಹೆಜ್ಜೆಗಳು' ಲೇಖನವು ಮುಖ್ಯಮಂತ್ರಿಗಳು ತಮ್ಮ ಆರು ತಿಂಗಳ ಆಡಳಿತದಲ್ಲಿ ಜನರ ಕಲ್ಯಾಣಕ್ಕಾಗಿ ಹಾಕಿಕೊಂಡಿರುವ ಹೊಸ ಹೊಸ ಯೋಜನೆ ಮತ್ತು ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯವನ್ನು ಒದಗಿಸಿದೆ. ಇನ್ನು ದಾಸೋಹ ದಿನದ ಆಚರಣೆ ನಿಮಿತ್ತ ಎನ್. ಭೃಂಗೀಶ್ ಅವರು ಶ್ರೀ ಅವರ ದಾಸೋಹ ಕಾಯಕದ ಕುರಿತು ಬರೆದಿರುವ ಲೇಖನ ಮನಮುಟ್ಟುವಂತಿದೆ. ಹೆಣ್ಣುಮಕ್ಕಳ ಬಾಲ್ಯವಿವಾಹ ತಡೆಗೆ ಬಾಗಲಕೋಟೆ ಜಿಲ್ಲಾ ಪಂಚಾಯತ್ ಸುರಕ್ಷಿಣಿ ಎಂಬ ವೆಬ್‌ಸೈಟ್ ಅನ್ನು ರೂಪಿಸಿರುವಂತೆ ಬಾಲ್ಯವಿವಾಹ ಹೆಚ್ಚಿರುವ ಜಿಲ್ಲೆಯವರೂ ಇಂತಹ ಮಾಹಿತಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಪ್ರೇರಣೆಯಾಗಲಿದೆ.

**–ಮಹೇಶ್ವರಪ್ಪ, ವಿಜಯನಗರ**

'ವಾರ್ತಾ ಜನಪದ' ಮಾಸಿಕ ಈಗ
**www.kanaja.inನಲ್ಲಿ ಲಭ್ಯ**

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಪಾವತಿಸಲು ಕಡ್ಡಾಯವಾಗಿ ಸೇವಾಸಿಂಧುವಿನ **https://sevasindhu.karnataka.gov.in** ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೇ,

ಗಣರಾಜ್ಯೋತ್ಸವದಂದು ದೆಹಲಿಯ ರಾಜಪಥ್‌ನಲ್ಲಿ ಭಾಗವಹಿಸಿದ್ದ ನಮ್ಮ ರಾಜ್ಯದ ಸ್ತಬ್ಧಚಿತ್ರಕ್ಕೆ ಎರಡನೇ ಬಹುಮಾನ ಬಂದಿರುವುದನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಸಂತೋಷವಾಗುತ್ತಿದೆ. ಈ ಬಾರಿ ಮೆರವಣಿಗೆಯಲ್ಲಿ ಭಾಗವಹಿಸಿದ 12 ರಾಜ್ಯಗಳಲ್ಲಿ ನಮ್ಮ ರಾಜ್ಯದ ಸ್ತಬ್ಧಚಿತ್ರವು ದಕ್ಷಿಣ ಭಾರತದಿಂದ ಆಯ್ಕೆಯಾದ ಏಕೈಕ ಸ್ತಬ್ಧಚಿತ್ರವಾಗಿತ್ತು. ಬಹುಮಾನ ಪ್ರಕಟವಾಗುತ್ತಿದಂತೆ ಮುಖ್ಯಮಂತ್ರಿಗಳು ಟ್ವೀಟ್ ಮಾಡುವ ಮೂಲಕ ಸಂತಸವನ್ನು ವ್ಯಕ್ತಪಡಿಸಿದರಲ್ಲದೆ, ಬಹುಮಾನ ಪಡೆಯುವಲ್ಲಿ ಯಶಸ್ವಿಯಾದ ನಮ್ಮ ಇಲಾಖೆಗೆ ಅಭಿನಂದನೆ ಸಲ್ಲಿಸಿದರು.

ಜನವರಿ 28 ರಂದು ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಯಶಸ್ವಿ ಆರು ತಿಂಗಳು ಪೂರೈಸಿತು. ಅಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಹೊರತಂದ "ಭವ್ಯ ಭವಿಷ್ಯಕ್ಕಾಗಿ ಭರವಸೆಯ ಹೆಜ್ಜೆಗಳು" ಎಂಬ ಸಾಧನೆಯ ಪುಸ್ತಕವನ್ನು ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದ ಸಹೋದ್ಯೋಗಿಗಳೊಂದಿಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಬಿಡುಗಡೆ ಮಾಡಿದರು.

ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ತಮ್ಮ ಸರ್ಕಾರದ ಯೋಜನೆಗಳ ಕುರಿತು ಅಧ್ಯಯನ ಮಾಡಿ, ಅದರ ಪರಿಣಾಮ, ಉತ್ತಮ ಅಂಶಗಳು ಹಾಗೂ ಯೋಜನೆಯ ಕೊರತೆಗಳನ್ನು ತಮಗೆ ತಿಳಿಸುವಂತೆ ಅವರು ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯ ನಿರ್ದೇಶಕರಿಗೆ ತಿಳಿಸಿದರು. ಇದು ಯೋಜನೆಗಳ ಮೇಲೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತದೆ.

ಕೇವಲ ಆರು ತಿಂಗಳಲ್ಲಿ ಸರ್ಕಾರವು ಹಲವು ನಿರ್ಣಾಯಕ ಯೋಜನೆಗಳನ್ನು, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಜನರ ವಿಶ್ವಾಸವನ್ನು ಗಳಿಸುತ್ತಾ ಮುಂದೆ ಸಾಗಿದೆ. ನಗರದಲ್ಲಿ ನಾಗರಿಕರ ಮನೆ ಬಾಗಿಲಿಗೆ 'ಜನಸೇವಕ' ಯೋಜನೆಯ ಮೂಲಕ ಸೇವೆ ನೀಡುತ್ತಿರುವಾಗ, ಗ್ರಾಮೀಣ ಜನರಿಗೂ ಸ್ಥಳೀಯವಾಗಿ ಸೇವೆಯನ್ನು ಒದಗಿಸಬೇಕೆಂದು ಮುಖ್ಯಮಂತ್ರಿಗಳು ತೀರ್ಮಾನಿಸಿದ್ದರು. ಅವರು ಅಂದುಕೊಂಡಂತೆಯೇ ಗ್ರಾಮೀಣ ಜನರ ಅನುಕೂಲಕ್ಕಾಗಿ 'ಗ್ರಾಮ ಒನ್' ಕೇಂದ್ರಗಳನ್ನು ಸ್ಥಾಪಿಸಿದ್ದಾರೆ.

ಸಧ್ಯ ಆರಂಭದಲ್ಲಿ 12 ಜಿಲ್ಲೆಗಳ 3026 ಗ್ರಾಮಪಂಚಾಯಿತಿಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗಿದ್ದು, ಉಳಿದ ಎಲ್ಲಾ ಜಿಲ್ಲೆಗಳಲ್ಲೂ ಕೇಂದ್ರವನ್ನು ತೆರೆಯಲು ಸಿದ್ಧತೆಯನ್ನು ಮಾಡಿಕೊಳ್ಳಲಾಗುತ್ತಿದೆ. ಆ ಮೂಲಕ ಗ್ರಾಮೀಣ ಜನರ ಪಾಲಿಗೆ ತಮ್ಮ ಸರ್ಕಾರ ಇದೆ ಎಂಬುದನ್ನು ಸಾಬೀತು ಪಡಿಸಿದ್ದಾರೆ.

ಅದೇ ರೀತಿಯಲ್ಲಿ ಸರ್ಕಾರಿ ಸೌಲಭ್ಯ ಪಡೆಯಲು ರೈತರು ಪ್ರತೀ ಬಾರಿಯೂ ವಿವಿಧ ದಾಖಲೆಗಳನ್ನು ನೀಡಬೇಕಾಗಿತ್ತು. ಇದನ್ನು ಕೂಡ ಈಗ ಸರ್ಕಾರವು ತಪ್ಪಿಸಿದೆ. ಇನ್ನು ಮುಂದೆ ಪ್ರತಿ ಬಾರಿ ರೈತನು ಜಮೀನಿನ ಪಹಣಿ, ಆಧಾರ್, ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುವ ಅಗತ್ಯವಿಲ್ಲ. ಕೃಷಿ ಇಲಾಖೆಯೇ ಈಗ ರೈತರ ವಿವರಗಳನ್ನು ಸಂಗ್ರಹಿಸಿ, "ಫ್ರೂಟ್ಸ್" ತಂತ್ರಾಂಶದಲ್ಲಿ ದಾಖಲೀಕರಣ ಮಾಡಿಕೊಳ್ಳುತ್ತಿದೆ. ಇದರಿಂದಾಗಿ ರೈತರು ಬೆಳೆ ಸಾಲ ಪಡೆಯಲು ಕಚೇರಿಗಳಿಗೆ ಅಲೆದಾಡುವುದು ಕೂಡ ತಪ್ಪಲಿದೆ.

ಹಾಗೆಯೇ ಸರ್ಕಾರವು ಹೆಣ್ಣುಮಕ್ಕಳು ಮತ್ತು ಮಹಿಳೆಯ ಪರವಾಗಿಯು ಇದೆ ಎಂಬುದಕ್ಕೆ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ಕಲಿಸುವ ಸಲುವಾಗಿ 'ಓಬವ್ವ ಆತ್ಮರಕ್ಷಣೆ ಕಲೆ' ತರಬೇತಿಯನ್ನು ಆರಂಭಿಸಿರುವುದು, ಮತ್ತು ಮಹಿಳೆಯರು ಉತ್ಪಾದಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವ ಸಲುವಾಗಿ ಅಮೆಜಾನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದೇ ಸಾಕ್ಷಿ.

ಕೋವಿಡ್–19 ವೈರಾಣುವಿನ ವಿರುದ್ಧ ಲಸಿಕೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ. ಹಾಗಾಗಿ ಮೂರನೇ ಅಲೆಯಲ್ಲಿ ಆಸ್ಪತ್ರೆಗೆ ದಾಖಲಾದವರ ಸಂಖ್ಯೆ ಬಹಳ ಕಡಿಮೆ ಇತ್ತು. ಪ್ರಕರಣ ಸಂಖ್ಯೆ ಕಡಿಮೆಯಾಗಿದೆ ಎಂದು ಭಾವಿಸಿ ಮುನ್ನೆಚ್ಚರಿಕೆ ಡೋಸ್ ಪಡೆದುಕೊಳ್ಳದೇ ಇರಬಾರದು.

ಪ್ರತಿ ಬಾರಿಯಂತೆ, ಈ ಸಂಚಿಕೆಯಲ್ಲಿಯೂ ಕೂಡ ಸರ್ಕಾರವು ಇತ್ತೀಚೆಗೆ ಹಮ್ಮಿಕೊಂಡಿರುವ ಹೊಸ ಯೋಜನೆಗಳು ಮತ್ತು ಕಾರ್ಯಕ್ರಮಗಳ ಮಾಹಿತಿಯುಳ್ಳ ಲೇಖನಗಳನ್ನು ಪ್ರಕಟಿಸಲಾಗಿದೆ.

**ಓದುಗರೆಲ್ಲರಿಗೂ ಮಹಾಶಿವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳು,**

**ಡಾ|| ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001. email : feedbackjanapada@gmail.com



Downloaded From: www.kpscvaani.com

# ಗ್ರಾಮೀಣ ಜನರ ಸೇವೆಗಾಗಿ

## ಗ್ರಾಮ ಒನ್

ಒಂದು ಊರು ಸೇವೆಗಳು ಹಲವಾರು

ಬಿ.ಜಿ.ಪೂರ್ಣಿಮ

**ಸರ್ಕಾರದ ವಿವಿಧ ಇಲಾಖೆಗಳ ಸೇವೆಗಳನ್ನು ಗ್ರಾಮೀಣ ಭಾಗದ ಜನರಿಗೆ ಸಮರ್ಪಕವಾಗಿ ಮತ್ತು ಸುಲಭವಾಗಿ ಒದಗಿಸುವ ಸಲುವಾಗಿ ಸರ್ಕಾರವು ಬೆಂಗಳೂರು ಒನ್ ಮಾದರಿಯಲ್ಲಿ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ಪ್ರಾರಂಭಿಸಿದೆ.**



ನಗರದವರಿಗೆ ಮಾತ್ರ ಸರ್ಕಾರದ ಎಲ್ಲಾ ಸೇವಾಸೌಲಭ್ಯಗಳು, ನಮ್ಮ ಕಷ್ಟ ಕೇಳುವವರು ಯಾರು ಎಂಬುದು ಸಾಮಾನ್ಯವಾಗಿ ಗ್ರಾಮೀಣ ಭಾಗದ ಜನರ ಅಭಿಪ್ರಾಯ. ಆದರೆ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರ ಗ್ರಾಮೀಣ ಭಾಗದ ಜನರ ಸಂಕಷ್ಟಗಳನ್ನು ದೂರ ಮಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಅವರು ಅಧಿಕಾರ ವಹಿಸಿಕೊಂಡ ಕೂಡಲೇ ರೈತ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕಾಗಿ ಶಿಷ್ಯವೇತನ ನೀಡುವ ರೈತ ವಿದ್ಯಾ ನಿಧಿ ಯೋಜನೆ, ಸುವರ್ಣ ಸ್ವಾತಂತ್ರ್ಯೋತ್ಸವದ ಆಚರಣೆಯ ಹಿನ್ನೆಲೆಯಲ್ಲಿ 750 ಗ್ರಾಮಗಳ ಅಭಿವೃದ್ಧಿಗಾಗಿ ಅಮೃತ ಗ್ರಾಮ ಯೋಜನೆ ಇವೇ ಮುಂತಾದ ಹೊಸ ಹೊಸ ಯೋಜನೆಗಳನ್ನು ಹಾಕಿಕೊಳ್ಳುವ ಮೂಲಕ ತಮ್ಮ ಸರ್ಕಾರ ಗ್ರಾಮೀಣ ಜನರ ಪಾಲಿಗೆ ಇದೆ ಎಂಬುದನ್ನು ಸಾಬೀತು ಪಡಿಸಿದ್ದಾರೆ.

ನಗರ ವಾಸಿಗರ ಮನೆ ಬಾಗಿಲಿಗೆ ಸೇವೆ ನೀಡುವಂತಹ ಜನಸೇವಕ ಯೋಜನೆಯನ್ನು ಕಲ್ಪಿಸಿರುವಾಗ, ಗ್ರಾಮೀಣ ಭಾಗದ ಜನರಿಗೂ ಅವರ ಗ್ರಾಮಗಳ ಸಮೀಪವೇ ಸರ್ಕಾರದ ಸೇವೆಗಳು ದೊರಕುವಂತೆ ಮಾಡಬೇಕು ಎಂಬುದು ಸರ್ಕಾರದ ಆಶಯವಾಗಿತ್ತು. ಹಾಗಾಗಿ ಗ್ರಾಮೀಣ ಜನರಿಗೆ ಸೇವೆಗಳನ್ನು ನೀಡಲು ಅನುಕೂಲವಾಗುವಂತೆ ಬೆಂಗಳೂರು ಒನ್ ಕೇಂದ್ರಗಳಂತೆ ಕೆಲಸ ಮಾಡುವಂತಹ **"ಗ್ರಾಮ ಒನ್"** ಕೇಂದ್ರಗಳನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾರಂಭಿಸಲು ಕ್ರಮಕೈಗೊಳ್ಳಲಾಗಿದೆ.

ಸರ್ಕಾರದ ಈ ಮಹತ್ವಾಕಾಂಕ್ಷಿ **"ಗ್ರಾಮ ಒನ್"** ಯೋಜನೆಯನ್ನು ಜನವರಿ 26 ರಂದು ಮುಖ್ಯಮಂತ್ರಿ ಅವರು ಚಾಲನೆ ನೀಡಿದರು. ಮೊದಲ ಹಂತದಲ್ಲಿ 12 ಜಿಲ್ಲೆಗಳ 3026 ಗ್ರಾಮ ಪಂಚಾಯಿತಿಗಳಲ್ಲಿ **"ಗ್ರಾಮ ಒನ್"** ಕೇಂದ್ರಗಳನ್ನು



Downloaded From: www.kpscvaani.com



ಸ್ಥಾಪಿಸಲಾಗಿದೆ. ಫೆಬ್ರವರಿ ಅಂತ್ಯದೊಳಗೆ ಉಳಿದ ಎಲ್ಲಾ ಜಿಲ್ಲೆಗಳ ಗ್ರಾಮಪಂಚಾಯತಿಗಳಲ್ಲಿ ಕೇಂದ್ರಗಳನ್ನು ತೆರೆಯಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಕುರಿತು ಈಗಾಗಲೇ ಮುಖ್ಯಮಂತ್ರಿಗಳು ಇ-ಆಡಳಿತ, ಆರ್‌ಡಿಪಿಆರ್, ಕಂದಾಯ ಇಲಾಖೆಗಳ ಅಧಿಕಾರಿಗಳು ಮತ್ತು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಪತ್ರ ಮುಖೇನ ಸೂಚನೆಯನ್ನು ನೀಡಿದ್ದಾರೆ. ಆ ಮೂಲಕ ಅವರು ರಾಜ್ಯದಲ್ಲಿ ಸರ್ಕಾರಿ ಸೇವೆಗಳು ಸ್ಥಳೀಯವಾಗಿ, ಸುಲಭವಾಗಿ ಮತ್ತು ಅಲ್ಪ ಸಮಯದಲ್ಲಿ ದೊರಕಿಸಿಕೊಡುವ ಮೂಲಕ ಸರ್ಕಾರದಲ್ಲಿ ಮಹತ್ತರ ಕಾಂತ್ರಿಯನ್ನು ಮಾಡುವತ್ತ ಹೆಜ್ಜೆ ಇರಿಸಿದ್ದಾರೆ.

### ಉತ್ತಮ ಆಪರೇಟರ್‌ಗಳಿಗೆ ಬಹುಮಾನ

ಗ್ರಾಮ ಒನ್ ಕೇಂದ್ರದ ಕಂಪ್ಯೂಟರ್ ಆಪರೇಟರ್‌ಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವಂತೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸರ್ಕಾರವು ಮುಂದಿನ 12 ತಿಂಗಳು, ಪ್ರತಿ ವಾರದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಮೂವರು ಆಪರೇಟರ್‌ಗಳನ್ನು ಬಹುಮಾನಕ್ಕಾಗಿ ಆಯ್ಕೆ ಮಾಡುವುದಾಗಿ ಘೋಷಣೆ ಮಾಡಿದೆ. ಹೀಗೆ ಆಯ್ಕೆಯಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನ ವಿಜೇತರಿಗೆ ಕ್ರಮವಾಗಿ 10, 7, ಮತ್ತು 5 ಸಾವಿರ ರೂಗಳನ್ನು ಹಾಗೆಯೇ ತಿಂಗಳಿಗೊಮ್ಮೆ ಉತ್ತಮ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿದ ಜಿಲ್ಲೆಗೆ 1 ಲಕ್ಷ ರೂ ಬಹುಮಾನವನ್ನು ನೀಡಲಾಗುವುದು.

ಮೊದಲ ಹಂತದಲ್ಲಿ ಬೀದರ್, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಹಾವೇರಿ, ವಿಜಯಪುರ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿಕ್ಕಮಗಳೂರು, ಉಡುಪಿ ಹಾಗೂ ಕೊಡಗು ಸೇರಿದಂತೆ 12 ಜಿಲ್ಲೆಗಳಲ್ಲಿ ಗ್ರಾಮ ಒನ್ ಕೇಂದ್ರಗಳಿಂದ ಜನರು ಸೇವೆಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಇದಕ್ಕೂ ಮೊದಲು ಗ್ರಾಮೀಣ ಭಾಗದ ಜನರು ವಿವಿಧ ಇಲಾಖೆಗಳ ಸೇವಾಸೌಲಭ್ಯವನ್ನು ಪಡೆಯುವ ಸಲುವಾಗಿ ತಮ್ಮ ಕೆಲಸವನ್ನು ಬಿಟ್ಟು, ತಾಲ್ಲೂಕು, ಜಿಲ್ಲಾ ಕಚೇರಿಗಳಿಗೆ ಎರಡ್ಮೂರು ಬಾರಿಯಾದರೂ ಅಲೆದಾಡಬೇಕಾಗಿತ್ತು. ಆದರೆ ಈಗ ವಿವಿಧ ಇಲಾಖೆಗಳ ಸೇವೆಗಳನ್ನು ಗ್ರಾಮ ಒನ್ ಕೇಂದ್ರಗಳಲ್ಲೇ ಪಡೆದುಕೊಳ್ಳುವಂತೆ ಸರ್ಕಾರವು ಅನುಕೂಲ ಒದಗಿಸಿರುವುದಕ್ಕೆ

> **ಗ್ರಾಮೀಣ ಜನತೆಗೆ ಪ್ರಯಾಣ ಮತ್ತು ಇತರೆ ವೆಚ್ಚದಲ್ಲಿ ಉಳಿತಾಯವಾಗುತ್ತದೆ. ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. ಸಕಾಲದಲ್ಲಿ ಸೇವೆ ವಿತರಣೆಯನ್ನು ಖಚಿತಪಡಿಸಿಕೊಳ್ಳಲು ಸಕಾಲ ತಂತ್ರಾಂಶದೊಂದಿಗೆ ಏಕೀಕರಣ. ಇದು ಗ್ರಾಮೀಣ ಯುವಕರಿಗೆ ಗ್ರಾಮ ಮಟ್ಟದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವುದಲ್ಲದೆ, ಆಡಳಿತ ವ್ಯವಸ್ಥೆಗೆ ವಿಕೇಂದ್ರೀಕೃತ ಸ್ವ-ಆಡಳಿತದ ಬೆನ್ನೆಲುಬನ್ನು ಸೃಷ್ಟಿಸುತ್ತದೆ.**





Downloaded From: www.kpscvaani.com

ಸಂತಸಗೊಂಡಿದ್ದಾರೆ. ಜಮೀನಿನ ಕೆಲಸ ಬಿಟ್ಟು, ಖರ್ಚು ಮಾಡಿಕೊಂಡು ಪದೇ ಪದೇ ಜಿಲ್ಲಾ ಕಚೇರಿಗಳಿಗೆ ಅಲೆದಾಡಬೇಕಾಗಿತ್ತು. ಅಲೆದಾಟದಿಂದ ತಪ್ಪಿಸಿಕೊಳ್ಳಲು ಮಧ್ಯವರ್ತಿಗಳಿಗೆ ಹಣ ನೀಡಿ ನಮಗೆ ಬೇಕಾದ ಸೇವೆಯನ್ನು ಪಡೆದುಕೊಳ್ಳುತ್ತಿದ್ದೆವು. ಆದರೆ ನಮಗೆ ಸ್ಥಳೀಯವಾಗಿ ಕನಿಷ್ಠ ಶುಲ್ಕ ಪಡೆದು ವಿವಿಧ ಇಲಾಖೆಗಳ ಸೇವೆಯನ್ನು ನೀಡಲು ಸರ್ಕಾರವೇ ಮುಂದಾಗಿರುವುದು ನಮಗೆ ಹೆಚ್ಚು ಅನುಕೂಲವಾಗಿದೆ ಎಂದು ಗ್ರಾಮೀಣ ಭಾಗದ ಜನರು ಅಭಿಪ್ರಾಯ ಪಡುತ್ತಿದ್ದಾರೆ.

ಈ ಯೋಜನೆಯನ್ನು ಹೆಚ್ಚು ಜನಪ್ರಿಯ ಮತ್ತು ಜನಸ್ನೇಹಿಯಾಗಿಸುವ ದಿಟ್ಟಿನಲ್ಲಿ ಗ್ರಾಮ ಒನ್ ಆಪರೇಟರ್‌ಗಳಿಗೆ ಇ–ಆಡಳಿತ ಇಲಾಖೆಯಿಂದ ನೀತಿ ಸಂಹಿತೆ, ತಾಂತ್ರಿಕ, ಆಡಳಿತಾತ್ಮಕ ಮತ್ತು ಕಾನೂನು ಸಮಸ್ಯೆಗಳ ಬಗ್ಗೆ ತರಬೇತಿ ನೀಡಲಾಗಿದೆ. ತಂತ್ರಜ್ಞಾನ ಆಧಾರಿತ ಈ ಸೌಕರ್ಯದಿಂದಾಗಿ ಗ್ರಾಮೀಣ ಭಾಗದ ಜನರ ಹಣ, ಶ್ರಮ ಮತ್ತು ಸಮಯ ಉಳಿತಾಯವಾಗಲಿದೆ. ಈ ಕೇಂದ್ರದಲ್ಲಿ ಇಂಟರ್ನೆಟ್‌ನ ಸಹಾಯದಿಂದ ಎಲೆಕ್ಟ್ರಾನಿಕ್ ರೂಪದಲ್ಲಿ ನೀಡಲಾಗುವ ಈ ಸೇವೆಗಳನ್ನು ಕನಿಷ್ಠ ಅರ್ಜಿ ಶುಲ್ಕವನ್ನು ಪಾವತಿಸಿ ಒದಗಿಸಲಾಗುವುದು. ಈ ಕೇಂದ್ರವು ಬೆಳಿಗ್ಗೆ 8 ರಿಂದ ರಾತ್ರಿ 8 ರವರೆವಿಗೂ ಕಾರ್ಯನಿರ್ವಹಿಸುವುದರಿಂದ ಕೃಷಿ ಕೆಲಸ ಮಾಡುವ ಗ್ರಾಮೀಣ ಭಾಗದ ಜನರಿಗೆ ಕೃಷಿ ಕೆಲಸಕ್ಕೆ ಹೊರಡುವುದಕ್ಕೆ ಮುಂಚಿತವಾಗಿ, ಅಥವಾ ಕೃಷಿ ಕೆಲಸ ಮುಗಿಸಿಕೊಂಡು ಮನೆಗೆ ಮರಳಿದ ನಂತರ ರಾತ್ರಿ 8 ಗಂಟೆಯ ಒಳಗೆ ತಮಗೆ ಬೇಕಾದ ಸೇವೆಯನ್ನು ಗ್ರಾಮ ಒನ್ ನಿಂದ ಪಡೆಯಲು ಅನುಕೂಲವಾಗಿದೆ. ಸರ್ಕಾರವು ಗ್ರಾಮೀಣ ಭಾಗದ ಕಾರ್ಯಚಟುವಟಿಕೆಗೆ ಅನುಗುಣವಾಗಿಯೇ ಕೇಂದ್ರದ ಕಾರ್ಯಚಟುವಟಿಕೆಯ ಸಮಯವನ್ನು ನಿಗದಿಪಡಿಸಿದೆ.

ಅಧಿಕಾರಿಗಳು ಖುದ್ದಾಗಿ ಪರಿಶೀಲಿಸಿ ನೀಡಬೇಕಾದ ಸೇವೆಗಳನ್ನು ಹೊರತುಪಡಿಸಿ, ಕಾಗದಪತ್ರದಲ್ಲಿ ನಡೆಯಬಹುದಾದ ಬಹುತೇಕ ಅರ್ಜಿಗಳು ಇನ್ನು ಮುಂದೆ ಗ್ರಾಮ ಒನ್ ಮೂಲಕವೇ ವಿಲೇವಾರಿಯಾಗಲಿದೆ. ಸೇವಾಸಿಂಧು ಕಾರ್ಯಕ್ರಮದ ಎಲ್ಲಾ 750 ಸೇವೆಗಳು, ಸಕಾಲ ಸೇವೆಗಳು, ಆರ್‌ಟಿಐ ಸೇವೆಗಳು, ಸಿಎಂಆರ್‌ಎಫ್ ಸೇವೆಗಳು ಹಾಗೂ ಮೈಕ್ರೊ ಬ್ಯಾಂಕಿಂಗ್ ಸೇವೆಗಳು, ಬ್ಯಾಂಕಿಂಗ್ ಸೇವೆಗಳು, ಆಧಾರ್ ತಿದ್ದುಪಡಿ ಇತ್ಯಾದಿ ಸೇವೆಗಳನ್ನು ಈ ಗ್ರಾಮ ಒನ್ ಕೇಂದ್ರಗಳಲ್ಲಿ ಒದಗಿಸಲಾಗುತ್ತದೆ. ಇದಲ್ಲದೆ ಜಮೀನಿನ ದಾಖಲೆ ಪಡೆಯಬೇಕಿದ್ದರೆ, ಕಂದಾಯ ಇಲಾಖೆಗೆ ತೀರುವೆ (ತೆರಿಗೆ) ಪಾವತಿಸಬೇಕಿದ್ದರೆ, ಪಿಂಚಣಿ, ಮಾಸಾಶನಕ್ಕೆ ಅರ್ಜಿ, ಶಿಕ್ಷಣ ಇಲಾಖೆಯಿಂದ ಮರು ಮೌಲ್ಯಮಾಪನ, ಸಾರಿಗೆ, ಕೃಷಿ, ತೋಟಗಾರಿಕೆ, ಕಂದಾಯ, ಆಹಾರ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ವಿವಿಧ ಸೇವೆಗಳು, ಸರ್ಕಾರದಿಂದ ಸಹಾಯಧನಕ್ಕೆ ಅರ್ಜಿ, ಇವೇ ಮುಂತಾದ ಸೇವೆಗಳನ್ನು ಪಡೆದುಕೊಳ್ಳಬಹುದು. ಸೇವೆಗಳನ್ನು ಪಡೆಯಲು ಅರ್ಜಿ ಸಲ್ಲಿಸಿದ ನಂತರ ಅದರ ಸ್ಥಿತಿಗತಿಗಳ ಬಗ್ಗೆ ಮೊಬೈಲ್ ಸಂದೇಶದ ಮೂಲಕ ಮಾಹಿತಿ ನೀಡಲಾಗುತ್ತದೆ. ಕೋರಿದ ಸೇವೆ ಲಭ್ಯವಾದಾಗ ಕೇಂದ್ರಕ್ಕೆ ಭೇಟಿ ನೀಡಿ ಪಡೆದುಕೊಳ್ಳಬಹುದು.

ವಿದ್ಯುತ್ ಬಿಲ್ ಮತ್ತು ನೀರಿನ ಬಿಲ್ ಪಾವತಿ ಇವೇ ಮುಂತಾದ ಸೇವೆಗಳನ್ನು ಗ್ರಾಮಪಂಚಾಯಿತಿಯ ಬಾಪೂಜಿ ಕೇಂದ್ರದಿಂದಲೇ ಮಾಡಲಾಗುತ್ತದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಮೀರಿದ ಬೇರೆ ಬೇರೆ ಇಲಾಖೆಯ ಸೇವೆಗಳನ್ನು ಮಾತ್ರವೇ ಗ್ರಾಮ ಒನ್ ಕೇಂದ್ರಗಳಲ್ಲಿ ನೀಡಲಾಗುವುದು. ಇನ್ನು ಮುಂದೆ

## ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉನ್ನತೀಕರಿಸಲು ಸಹಕಾರಿ

ಸರ್ಕಾರದ ಸೇವೆಗಳು ಸುಲಭವಾಗಿ ಗ್ರಾಮೀಣ ಭಾಗದ ಜನರಿಗೆ ಲಭ್ಯವಾಗುವಂತೆ ಮಾಡುವ ಜೊತೆಗೆ ಗ್ರಾಮೀಣ ಜನರ ಜೀವನದ ಗುಣಮಟ್ಟವನ್ನು ಉನ್ನತೀಕರಿಸಲು ಗ್ರಾಮ ಒನ್ ಯೋಜನೆ ಸಹಕಾರಿ ಆಗಲಿದೆ. ಈ ಯೋಜನೆಯ ಸೌಕರ್ಯದಿಂದ ಸರ್ಕಾರದ ಕಾರ್ಯನಿರ್ವಹಣೆಯ ಮೇಲೆ ಗ್ರಾಮೀಣ ಭಾಗದ ಜನರಿಗೆ ವಿಶ್ವಾಸ ಮೂಡಲಿದೆ.

ಈ ಕೇಂದ್ರಗಳ ಮೂಲಕ ಮನೆ, ಹೊಲದ ಹಕ್ಕು ಪತ್ರಗಳು, ಸಂಧ್ಯಾ ಸುರಕ್ಷಾ, ಅಂಗವಿಕಲರ ಮಾಸಾಶನ, ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಹೀಗೆ ಜನರ ನೂರಾರು ಸೇವೆಗಳ ಅವಶ್ಯಕತೆಗಳನ್ನು ಪೂರೈಸಲಾಗುತ್ತದೆ. ಸದ್ಯ ಪ್ರಮುಖ ಸೇವೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದ್ದು, ಮುಂದಿನ ದಿನಗಳಲ್ಲಿ ಈ ವ್ಯವಸ್ಥೆಯನ್ನು ನಿರಂತರವಾಗಿ ಸುಧಾರಿಸುವ ಮೂಲಕ ಜನರಿಗೆ ಸಮರ್ಪಕವಾಗಿ ಸೇವೆಗಳನ್ನು ಒದಗಿಸಬೇಕೆಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ.

ಆದಷ್ಟು ಶೀಘ್ರವಾಗಿ ಸೇವೆಯನ್ನು ನೀಡುವಂತೆ ಮಾಡುವ ಉದ್ದೇಶದಿಂದ ಜಿಲ್ಲಾಧಿಕಾರಿಗಳಿಗೆ ಯೋಜನೆಯ ಅನುಷ್ಠಾನಕ್ಕೆ ಜವಾಬ್ದಾರಿ ಹಾಗೂ ನಾಯಕತ್ವವನ್ನು ವಹಿಸಲಾಗಿದೆ. ತಹಶೀಲ್ದಾರರು ಹಾಗೂ ಸಹಾಯಕ ಆಯುಕ್ತರ ಸಹಕಾರ ಕೂಡ ಬಹಳ ಮುಖ್ಯವಾಗಿರುತ್ತದೆ. ಹಾಗಾಗಿ ಅವರು ಗ್ರಾಮಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಗ್ರಾಮ ಒನ್ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲಿಸುತ್ತಿರುವಂತೆ ಸೂಚಿಸಲಾಗಿದೆ.

ಗ್ರಾಮೀಣ ಜನರ ಜೀವನಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಸರ್ಕಾರದ ಸೇವೆಗಳನ್ನು ಸುಲಭವಾಗಿ ದೊರಕಿಸಿಕೊಟ್ಟು ಗ್ರಾಮ ಒನ್ ವ್ಯವಸ್ಥೆಯ ಪರಿಕಲ್ಪನೆಯನ್ನು ಸಾಕಾರಗೊಳಿಸುವ ಹಾಗೂ ಜನಮನದಲ್ಲಿ ಉಳಿಯುವಂತೆ ಮಾಡಬೇಕು ಎನ್ನುವುದೇ ನಮ್ಮ ಸರ್ಕಾರದ ಆಶಯ.

**–ಬಸವರಾಜ ಎಸ್ ಬೊಮ್ಮಾಯಿ**
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

**ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿರುವ ನಾನು ಗ್ರಾಮೀಣ ಜನರು ಸರ್ಕಾರದ ಸೇವೆಗಳನ್ನು ಪಡೆಯಲು ಹರಸಾಹಸ ಪಡುತಿದ್ದುದನ್ನು ಬಹಳ ಹತ್ತಿರದಿಂದ ನೋಡಿದ್ದೇನೆ. ಹಾಗಾಗಿ ಸರ್ಕಾರದ ಈ ಗ್ರಾಮ ಒನ್ ಯೋಜನೆ ಗ್ರಾಮೀಣ ಜನರ ಸಮಸ್ಯೆಗೆ ಪರಿಹಾರ ಒದಗಿಸಲಿದೆ. ಈಗ ನಾನು ಗ್ರಾಮ ಒನ್ ಆಪರೇಟರ್ ಆಗಿ ಕಾರ್ಯನಿರ್ವಹಿಸುತ್ತಿರುವುದು ನನಗೆ ಬಹಳ ಸಂತೋಷ ತಂದಿದೆ.**

**–ಶ್ರೀನಿವಾಸ ನಾಯಕ್**, ಗ್ರಾಮ ಒನ್ ಆಪರೇಟರ್



Downloaded From: www.kpscvaani.com









ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳನ್ನು ಗ್ರಾಮ ಒನ್ ಕೇಂದ್ರಗಳ ಮೂಲಕವೇ ವಿತರಿಸಲು ಕ್ರಮವಹಿಸಲಾಗುತ್ತಿದೆ.

ಈ ಯೋಜನೆ ಅನುಷ್ಠಾನಗೊಂಡ ಎರಡು ವಾರಗಳಲ್ಲೇ ಸ್ವತಃ ಮುಖ್ಯಮಂತ್ರಿಗಳೇ ಜಿಲ್ಲಾಧಿಕಾರಿಗಳು ಮತ್ತು ಗ್ರಾಮ ಒನ್ ಆಪರೇಟರುಗಳೊಂದಿಗೆ ಸಂವಾದ ನಡೆಸಿ ಆಪರೇಟರುಗಳ ಅನುಭವ, ಅವರ ಕಾರ್ಯನಿರ್ವಹಣೆ, ಕಾರ್ಯನಿರ್ವಹಣೆಯಲ್ಲಿ ಎದುರಾಗಿರುವ ತೊಡಕುಗಳು, ಇವೇ ಮುಂತಾದ ಕುರಿತು ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ನಿರುದ್ಯೋಗಿಯಾಗಿದ್ದ ಅದೇ ಗ್ರಾಮದ ಯುವಕರು ತಮ್ಮ ಸಂತ ಊರಿನಲ್ಲೇ ಗ್ರಾಮ ಒನ್ ಆಪರೇಟರ್ ಆಗಿ ಕಾರ್ಯನಿರ್ವಹಿಸಲು ಅವಕಾಶ ದೊರಕಿರುವುದಕ್ಕೆ ಸಂತಸವಾಗಿದೆ ಎಂದು ಮುಖ್ಯಮಂತ್ರಿ ಅವರೊಂದಿಗೆ ಹರ್ಷ ವ್ಯಕ್ತಪಡಿಸಿದರು. ಗ್ರಾಮ ಒನ್ ಕೇಂದ್ರ ಅಧಿಕಾರದ ಕೇಂದ್ರವಲ್ಲ, ಅದು ಸೇವಾ ಕೇಂದ್ರ. ಹಾಗಾಗಿ ಸೇವಾ ಮನೋಭಾವದಿಂದ ಕೆಲಸ ಮಾಡುವಂತೆ ಅವರು ಎಲ್ಲಾ ಆಪರೇಟರುಗಳಿಗೆ ಸೂಚಿಸಿದ್ದಾರೆ.

ರಾಜ್ಯ ಸರ್ಕಾರವು ಆಡಳಿತದಲ್ಲಿ ಕ್ರಾಂತಿಕಾರಿ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುವುದರಿಂದಲೇ ಜನರ ಬಳಿಗೆ ಸರ್ಕಾರವನ್ನು ಕೊಂಡೊಯ್ಯುವಂತಹ ಈ ಮಹಾತ್ವಾಕಾಂಕ್ಷಿ ಗ್ರಾಮ ಒನ್ ಯೋಜನೆಯನ್ನು ಜಾರಿಗೊಳಿಸಿದೆ. ಒಟ್ಟಿನಲ್ಲಿ ಈ ಯೋಜನೆಯಿಂದ ಗ್ರಾಮೀಣ ಜನರ ಹಣ, ಶ್ರಮ, ಸಮಯ ಉಳಿಯುವುದರ ಜೊತೆಗೆ ಸರ್ಕಾರದ ಆಡಳಿತದಲ್ಲಿ ದಕ್ಷತೆ ಹಾಗೂ ಪಾರದರ್ಶಕತೆ ಹೆಚ್ಚಲಿದೆ.

### ಗ್ರಾಮ ಒನ್ ಅನುಷ್ಠಾನಕ್ಕಾಗಿ ತೆಗೆದುಕೊಳ್ಳಲಾಗಿರುವ ಕೆಲವು ಕ್ರಮಗಳು:

ಮುಖ್ಯಮಂತ್ರಿ ಅವರ ಕನಸಿನ ಈ ಯೋಜನೆಯನ್ನು ಪಾರದರ್ಶಕವಾಗಿ ಕಾರ್ಯನಿರ್ವಹಿಸುವಂತೆ ಮಾಡುವ ಉದ್ದೇಶದಿಂದ ಇ-ಆಡಳಿತ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಕನಿಷ್ಠ ಮುಂದಿನ 2 ತಿಂಗಳವರೆಗೆ ಪ್ರತಿ ವಾರ ಸಭೆಯನ್ನು ಆಯೋಜಿಸಿ ಪ್ರಗತಿ ಪರಿಶೀಲನೆ ನಡೆಸಲಿದ್ದಾರೆ.

ಎಲ್ಲಾ ಗ್ರಾಮ ಒನ್ ಆಪರೇಟರ್‌ಗಳಿಗೆ ಅನ್ವಯಿಸುವಂತೆ ಇ-ಆಡಳಿತ ಇಲಾಖೆಯಿಂದ ನೀತಿ ಸಂಹಿತೆ ಪ್ರಕಟಿಸಲಾಗಿದ್ದು, ನೀತಿ ಸಂಹಿತೆ ಪಾಲನೆಯನ್ನು ಜಿಲ್ಲಾಧಿಕಾರಿಗಳು ಖಚಿತಪಡಿಸಿಕೊಳ್ಳುವರು.

ಇನ್ನು ಗ್ರಾಮ ಒನ್ ಆಪರೇಟರ್‌ಗಳಿಗೆ ತಾಂತ್ರಿಕ, ಆಡಳಿತಾತ್ಮಕ ಮತ್ತು ಕಾನೂನು ಸಮಸ್ಯೆಗಳ ಕುರಿತಂತೆ ಕಾಲಕಾಲಕ್ಕೆ ತರಬೇತಿಯನ್ನು ನೀಡುವ ಮೂಲಕ, ಅವರ ಪ್ರಾವಿಣ್ಯತೆಯನ್ನು ನಿಯಮಿತವಾಗಿ ಪರೀಕ್ಷಿಸಲಾಗುವುದು. ಹಾಗೆಯೇ ಅಸಮರ್ಥ ಆಪರೇಟರ್‌ಗಳೆಂದು ಕಂಡುಬರುವವರ ಪರವಾನಗಿಯನ್ನು ರದ್ದುಗೊಳಿಸಲಾಗುವುದು.

ಗ್ರಾಮ ಒನ್‌ನಿಂದ ಸ್ವೀಕರಿಸಿದ ಅರ್ಜಿಗಳ ಶೀಘ್ರ ವಿಲೇವಾರಿ, ಅರ್ಜಿಗಳ ತಿರಸ್ಕಾರಕ್ಕೆ ಕಾರಣಗಳನ್ನು ಎಲ್ಲಾ ಇಲಾಖೆಗಳ ಡ್ರಾಪ್ ಡೌನ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗುತ್ತದೆ. ತಪ್ಪಾಗಿ ತಿರಸ್ಕೃತ ಮಾಡುತ್ತಿರುವ ಅಧಿಕಾರಿ/ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಅಲ್ಲದೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯುವ ಎಂಪಿಕ್/ಕೆಡಿಪಿ ಸಭೆಯಲ್ಲಿ ಕೂಡ ಈ ಯೋಜನೆಯ ಕಾರ್ಯವೈಖರಿ ಮತ್ತು ಪ್ರಗತಿಯನ್ನು ಪರಿಶೀಲಿಸಲಾಗುವುದು.

ಜಿಲ್ಲಾ ಮಟ್ಟದಲ್ಲಿ ವಾರಕ್ಕೆ ಒಮ್ಮೆ ಜಿಲ್ಲಾಧಿಕಾರಿಗಳು ತಹಶೀಲ್ದಾರರು ಮತ್ತು ಗ್ರಾಮ ಒನ್ ಆಪರೇಟರ್‌ಗಳೊಂದಿಗೆ ಪರಿಶೀಲನಾ ಸಭೆಯನ್ನು ನಡೆಸುವರು.



Downloaded From: www.kpscvaani.com

## ರೈತರ ಸವಲತ್ತು ವಿತರಣೆಗೆ ಸಹಕಾರಿ:

# ಫ್ರೂಟ್ಸ್ ತಂತ್ರಾಂಶ






**ವಿವಿಧ ಇಲಾಖೆಗಳ ಸವಲತ್ತುಗಳನ್ನು ರೈತರಿಗೆ ವಿತರಿಸಲು ಅನುಕೂಲವಾಗುವಂತೆ ರೈತರ ಎಲ್ಲಾ ದಾಖಲೆಗಳನ್ನು ಒಂದು ಕಡೆ ದಾಖಲಿಸಿ ಇಡಲು ಫ್ರೂಟ್ಸ್ ತಂತ್ರಾಂಶವು ಸಹಕಾರಿಯಾಗಿದೆ.**

ಸಂಧ್ಯಾ ಸೊರಬ

ಕರ್ನಾಟಕ ರಾಜ್ಯವು ರೈತರ ಅನುಕೂಲಕ್ಕಾಗಿ ಹಲವಾರು ಯೋಜನೆಗಳನ್ನು ಜಾರಿಗೆ ತರುತ್ತಿದೆ. ಕೃಷಿ ಬೆಳೆಗಳು, ತೋಟಗಾರಿಕೆ ಬೆಳೆಗಳು, ರೇಷ್ಮೆ ಕೃಷಿ, ಡೈರಿ, ಕೋಳಿ, ಮೀನುಗಾರಿಕೆ ಮುಂತಾದ ವಿವಿಧ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳನ್ನು ರೈತರು ಕೈಗೊಳ್ಳುತ್ತಾರೆ. ಈ ಪ್ರತಿಯೊಂದು ಚಟುವಟಿಕೆಗಳಿಗೆ ವಿಶೇಷ ಜ್ಞಾನ ಮತ್ತು ಅನುಭವದ ಅಗತ್ಯವಿದೆ. ಆದ್ದರಿಂದ, ಕೃಷಿ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಅನ್ನದಾತರಿಗೆ ಸಹಾಯ ಮಾಡಲು ಕರ್ನಾಟಕ ರಾಜ್ಯ ಸರ್ಕಾರ ವಿಶೇಷ ಮತ್ತು ನಿರ್ದಿಷ್ಟ ಇಲಾಖೆಯನ್ನು ಸ್ಥಾಪಿಸಿದೆ.

ಈ ವಿಶೇಷ ಇಲಾಖೆಗಳ ಸ್ಥಾಪನೆಯು ಪ್ರತಿಯೊಂದು ಚಟುವಟಿಕೆಗಳ ಅಭಿವೃದ್ಧಿಗೆ ಕೇಂದ್ರೀಕೃತ ವಿಧಾನವನ್ನು ನೀಡುತ್ತಿದ್ದು, ಇದರ ಪ್ರಮುಖ ಭಾಗವಾಗಿ "ಫ್ರೂಟ್ಸ್" ತಂತ್ರಾಂಶ ಅರ್ಥಾತ್ ರೈತರ ನೋಂದಣಿ ಮತ್ತು ಏಕೀಕೃತ ಫಲಾನುಭವಿ ಮಾಹಿತಿ ವ್ಯವಸ್ಥೆಯನ್ನು ಜಾರಿಗೊಳಿಸಿದೆ.

ಸರ್ಕಾರಿ ಸೌಲಭ್ಯ ಪಡೆಯಲು ರೈತರು ಇನ್ನು ಮುಂದೆ ಪ್ರತಿ ಬಾರಿ ಜಮೀನಿನ ಪಹಣಿ, ಆಧಾರ್, ಬ್ಯಾಂಕ್ ಖಾತೆ ವಿವರಗಳನ್ನು ಒದಗಿಸುವ ಅಗತ್ಯವಿಲ್ಲ. ಕೃಷಿ ಇಲಾಖೆಯೇ ಈಗ ರೈತರ ವಿವರಗಳನ್ನು ಸಂಗ್ರಹಿಸಿ, "ಫ್ರೂಟ್ಸ್" ತಂತ್ರಾಂಶದಲ್ಲಿ ದಾಖಲೀಕರಣ ಮಾಡಿಕೊಳ್ಳುತ್ತಿದೆ.

ಪ್ರತಿಯೊಬ್ಬ ರೈತರು ಮುಂಗಾರು ಹಂಗಾಮಿನ ಸಹಾಯಧನದಲ್ಲಿ ಕೃಷಿ ಸೌಲಭ್ಯ ಪಡೆಯಲು, "ಫ್ರೂಟ್ಸ್" (ಫಾರ್ಮರ್ ರಿಜಿಸ್ಟ್ರೇಷನ್ ಅಂಡ್ ಯೂನಿಫೈಡ್ ಬೆನಿಫಿಷಿಯರಿ ಇನ್ಫಾರ್ಮೇಷನ್ ಸಿಸ್ಟಂ) ತಂತ್ರಾಂಶದಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಸಬೇಕು.

"ಫ್ರೂಟ್ಸ್" ತಂತ್ರಾಂಶದ ಮೂಲಕ ಬಿತ್ತನೆ ಬೀಜ, ಕೀಟನಾಶಕ, ಸಾವಯವಗೊಬ್ಬರ, ಕೃಷಿ ಉಪಕರಣ, ಸಸ್ಯ ಸಂರಕ್ಷಣಾ ಉಪಕರಣ ಇವೇ ಮುಂತಾದವುಗಳಿಗಾಗಿ ನೀಡಲಾಗುವ ಸಹಾಯಧನವನ್ನು ಪಡೆಯಬಹುದು. ಇನ್ನು ಮುಂದೆ ಈ ತಂತ್ರಾಂಶದಲ್ಲಿ ನೋಂದಾಯಿಸಿಕೊಳ್ಳದ ರೈತರಿಗೆ ಇಲಾಖೆಯಿಂದ ಯಾವುದೇ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ನೀಡಲು ಅವಕಾಶ ಇರುವುದಿಲ್ಲ.



Downloaded From: www.kpscvaani.com

## ಬೆಳೆ ಸಾಲಕ್ಕೆ ಫ್ರೂಟ್ಸ್ ತಂತ್ರಾಂಶ

**ಈ ತಂತ್ರಾಂಶವನ್ನು ರೈತರು ಬೆಳೆ ಸಾಲ ಪಡೆಯಲು ಅನುಕೂಲವಾಗುವಂತೆ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳೊಂದಿಗೆ ಹಾಗೂ ಭೂದಾಖಲೆಗಳನ್ನು ಪಡೆಯಲು ಅನುಕೂಲವಾಗುವಂತೆ ಕಾವೇರಿ ಮತ್ತು ಭೂಮಿ ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿದೆ. ಇದರಿಂದ ರೈತರು ಕಚೇರಿಗಳಿಗೆ ಅಲೆದಾಡುವುದು ತಪ್ಪಿದೆ.**

"ಫ್ರೂಟ್ಸ್" ತಂತ್ರಾಂಶವು ಕೃಷಿ ಸಂಬಂಧಿತ ಎಲ್ಲಾ ಇಲಾಖೆಗಳಿಂದ ವಿವಿಧ ರೀತಿಯ ಸವಲತ್ತುಗಳನ್ನು ವಿತರಿಸಲು ಅನುಕೂಲವಾಗುವಂತೆ ರೈತರು ನೋಂದಾಯಿಸಿಕೊಳ್ಳಲು ಸಹಕರಿಸುತ್ತದೆ. ಈ ತಂತ್ರಾಂಶವನ್ನು ರೈತರು ಬೆಳೆ ಸಾಲ ಪಡೆಯಲು ಅನುಕೂಲವಾಗುವಂತೆ ಬ್ಯಾಂಕುಗಳು ಮತ್ತು ಸಹಕಾರಿ ಸಂಸ್ಥೆಗಳೊಂದಿಗೆ ಹಾಗೂ ಭೂದಾಖಲೆಗಳನ್ನು ಪಡೆಯಲು ಅನುಕೂಲವಾಗುವಂತೆ ಕಾವೇರಿ ಮತ್ತು ಭೂಮಿ ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿದೆ. ಇದರಿಂದ ರೈತರು ಬೆಳೆ ಸಾಲ ಪಡೆಯಲು ಕಚೇರಿಗಳಿಗೆ ಅಲೆದಾಡುವುದು ತಪ್ಪಲಿದೆ.

**ಯೂನಿಕ್ ನಂಬರ್ ಕಾರ್ಡ್:**
ತಂತ್ರಾಂಶದಲ್ಲಿ ಹೆಸರು ನೋಂದಣಿಯಾದ ನಂತರ ರೈತರಿಗೆ ಯೂನಿಕ್ ನಂಬರ್ ಇರುವ ಕಾರ್ಡ್ ನೀಡಲಾಗುತ್ತದೆ. ಈ ಯೂನಿಕ್ ನಂಬರ್‌ನಲ್ಲಿ ಎಲ್ಲಾ ವಿವರಗಳು ಸಿಗುತ್ತದೆ. ಇಲಾಖೆಯಿಂದ ನೀಡಿರುವ ಎಲ್ಲಾ ಸೌಲಭ್ಯಗಳ ಮಾಹಿತಿ ಇಲ್ಲಿ ಲಭ್ಯವಿರುವುದರಿಂದ ಸೌಲಭ್ಯಗಳ ದುರುಪಯೋಗ ತಪ್ಪಲಿದೆ.

ರೈತರು ಆಯಾ ಹೋಬಳಿಯ ರೈತ ಸಂಪರ್ಕ ಕೇಂದ್ರಗಳಲ್ಲಿ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿ, ಪಾಸ್ಪೋರ್ಟ್ ಅಳತೆಯ ಫೋಟೋ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿ ಸೇರಿದಂತೆ ಸೂಕ್ತ ದಾಖಲೆ ನೀಡಿ ತಮ್ಮ ಹೆಸರು ನೋಂದಾಯಿಸಿಕೊಳ್ಳಬೇಕು.

ಕೃಷಿ, ಕಂದಾಯ, ರೇಷ್ಮೆ, ತೋಟಗಾರಿಕೆ, ಹೈನುಗಾರಿಕೆ ಇಲಾಖೆಯ ಯೋಜನೆಯಡಿ, ಬೆಂಬಲ ಬೆಲೆ ಮತ್ತು ಇತರೆ ಸವಲತ್ತುಗಳನ್ನು ಪಡೆಯಲು ರೈತರು 'ಈಖಗಖಖಿಖ' ತಂತ್ರಾಂಶದಲ್ಲಿ ನೋಂದಾಯಿಸಿಕೊಂಡು, ನೋಂದಣಿ ಸಂಖ್ಯೆ ಪಡೆಯುವುದು ಕಡ್ಡಾಯವಾಗಿದೆ. ರೈತರು ತಮ್ಮ ಜಮೀನಿನ ವಿವರಗಳನ್ನು ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರಗಳೊಂದಿಗೆ ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಿಸಿ ನೋಂದಣಿ ಸಂಖ್ಯೆ ಪಡೆಯಬೇಕು. ಈಗಾಗಲೇ ನೋಂದಣಿಯಾಗಿರುವ ರೈತರು ತಮ್ಮ ಎಲ್ಲಾ ಸರ್ವೇ ನಂಬರ್‌ಗಳನ್ನು ಕೂಡಲೇ ಕೃಷಿ, ಕಂದಾಯ, ರೇಷ್ಮೆ, ತೋಟಗಾರಿಕೆ, ಹೈನುಗಾರಿಕೆ ಇಲಾಖೆಗಳಲ್ಲಿ ಸೇರ್ಪಡೆ ಮಾಡಬೇಕು. ಹೆಚ್ಚಿನ ಮಾಹಿತಿಗೆ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ಸಹಾಯಕ ಕೃಷಿ ನಿರ್ದೇಶಕರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.

### ಬೆಳೆ ಸಮೀಕ್ಷೆ

**ಕರ್ನಾಟಕ ರಾಜ್ಯವು ಮೂರು ಋತುಗಳಲ್ಲಿ GIS ಆಧಾರಿತ ಮೊಬೈಲ್ ಅಪ್ಲಿಕೇಶನ್ ಬಳಸಿ ಪ್ರತಿ ಪ್ಲಾಟ್‌ನ ಬೆಳೆ ಸಮೀಕ್ಷೆಯನ್ನು ನಡೆಸುತ್ತದೆ. ಈ ತಂತ್ರಾಂಶವನ್ನು ಬೆಳೆಗಳ ಸಮೀಕ್ಷೆಯೊಂದಿಗೆ ವಿದ್ಯುನ್ಮಾನವಾಗಿ ಸಂಯೋಜಿಸಲಾಗಿರುವುದರಿಂದ ಪ್ರತಿ ರೈತರಿಗೆ ಸೇರಿದ ಭೂಮಿಯ ಬೆಳೆ ವಿವರಗಳನ್ನು ಪಡೆದು ಅನುಷ್ಠಾನ ಇಲಾಖೆಗಳಿಗೆ ಒದಗಿಸಲಾಗುತ್ತಿದೆ.**

https://fruits.karnataka.gov.in ಈ ಲಿಂಕ್ ಮೇಲೆ ಕ್ಲಿಕ್ ಮಾಡಿ, ನಿಮ್ಮ ಆಧಾರ್ ನಂಬರ್ ನಮೂದಿಸಿ ತಮ್ಮ ಹೆಸರು FID (ರೈತನ ಗುರುತು) ಆಗಿದನ್ನು ಹಾಗೂ ಯಾವ್ಯಾವ ಸರ್ವೇ ನಂಬರ್ ಲಿಂಕ್ ಆಗಿದೆ ಎಂಬುದನ್ನು ಚೆಕ್ ಮಾಡಿಕೊಳ್ಳಬಹುದು. ಹಾಗೆಯೆ ನಿಮ್ಮ ಆಧಾರ್ ನಂಬರ್ ಬಳಸಿ ನಿಮ್ಮ ಹೆಸರಿನಲ್ಲಿ FID ಆಗಿದ್ದನ್ನು ತಿಳಿಯಬಹುದು. ಹಾಗೂ ನಿಮ್ಮ ಎಲ್ಲಾ ಸರ್ವೇ ನಂಬರ್‌ಗಳು ಲಿಂಕ್ ಆಗಿದೆಯೋ ಇಲ್ಲವೋ ಎಂಬುದನ್ನು ಸಹ ನೋಡಿಕೊಳ್ಳಬಹುದು.

ಒಂದು ವೇಳೆ ಕೆಲವು ಸರ್ವೇ ನಂಬರ್ ಕೈ ಬಿಟ್ಟಿದ್ದರೆ ಆಧಾರ್ ಮತ್ತು ಆರ್. ಟಿ. ಸಿ (ಪಹಣಿ) ಯೊಂದಿಗೆ ಅಥವಾ FID ಆಗಿಲ್ಲದಿದ್ದಲ್ಲಿ ಆಧಾರ್ (ಒಪ್ಪಿಗೆಯೊಂದಿಗೆ), RTC (ಪಹಣಿ /ಉತ್ತಾರಿ), ಬ್ಯಾಂಕ್ ಪಾಸ್‌ಬುಕ್‌ನ ಮೊದಲನೇ ಪುಟದ ಜೆರಾಕ್ಸ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ (ಪ.ಪಂ & ಪ.ಜಾ), ಇತ್ತೀಚಿನ ಭಾವಚಿತ್ರದೊಂದಿಗೆ ಹತ್ತಿರದ ಗ್ರಾಮ ಲೆಕ್ಕಾಧಿಕಾರಿಗಳಲ್ಲಿ, ರೈತ ಸಂಪರ್ಕ ಕೇಂದ್ರಗಳಲ್ಲಿ, ತಾಲೂಕಿನ ತೋಟಗಾರಿಕೆ ಇಲಾಖೆಯ ಕಚೇರಿಗಳು, ರೇಷ್ಮೆ ಇಲಾಖೆಯ ಕಚೇರಿಗಳಲ್ಲಿ ಸಲ್ಲಿಸಬಹುದು.

ರೈತರು ಸರ್ಕಾರದಿಂದ ಯಾವುದೇ





Downloaded From: www.kpscvaani.com

ರೀತಿಯ ನೆರವು ಮತ್ತು ಪ್ರಯೋಜನಗಳನ್ನು ಪಡೆಯಲು ವಿವಿಧ ಇಲಾಖೆಗಳನ್ನು ಸಂಪರ್ಕಿಸಬೇಕಾಗುತ್ತದೆ. ಯಾವುದೇ ಯೋಜನೆಯಡಿ ಸವಲತ್ತುಗಳನ್ನು ನೀಡಲು ಎಲ್ಲಾ ಇಲಾಖೆಗಳು ರೈತರಿಂದ ದಾಖಲೆಗಳನ್ನು ಪಡೆಯುವುದು ವಾಡಿಕೆ. ರೈತರು ಪ್ರತಿ ವರ್ಷ ಒಂದೇ ರೀತಿಯ ದಾಖಲೆಗಳನ್ನು ವಿವಿಧ ಇಲಾಖೆಗಳಿಗೆ ಸಲ್ಲಿಸಬೇಕಾಗುತ್ತದೆ.

ಮತ್ತೊಂದೆಡೆ, ಪ್ರತಿ ಇಲಾಖೆಯ ಅಧಿಕಾರಿಗಳು ಪ್ರತಿ ಬಾರಿ ಯೋಜನೆಗಳನ್ನಾಗಲೀ ಅಥವಾ ಪ್ರಯೋಜನವನ್ನಾಗಲೀ ವಿಸ್ತರಿಸಿದಾಗ ಮತ್ತೆಮತ್ತೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಬೇಕಾಗುತ್ತದೆ. ಇದಲ್ಲದೇ, ಕೆಲವೊಮ್ಮೆ ಒಂದೇ ಇಲಾಖೆಯ ವಿವಿಧ ಯೋಜನೆಗೂ ಒಂದೊಂದು ಸೆಟ್ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಯಾರು ಯಾವ ಯೋಜನೆಯ ಪ್ರಯೋಜನ ಪಡೆದಿದ್ದಾರೆ?, ಪಡೆದಿಲ್ಲ? ಎಂಬ ಹುಡುಕಾಟ ಸೃಷ್ಟಿಯಾಗುತ್ತದೆ. ಯಾರು ಯಾವ ಯೋಜನೆಯ ಫಲಾನುಭವಿಗಳೆಂಬುದನ್ನು ತಿಳಿಯಲು ಸಿದ್ಧ ದಾಖಲೆಗಳೇ ಇರುವುದಿಲ್ಲ. ಆಗ ಅಸ್ತಿತ್ವದಲ್ಲಿರುವ ಕೈಪಿಡಿ ಅಥವಾ ಅರೆ ಗಣಕೀಕೃತ ಮತ್ತು ಪ್ರತ್ಯೇಕವಾದ ವ್ಯವಸ್ಥೆಗಳು ಸಮಸ್ಯೆಗಳಿಗೆ ಕಾರಣವಾಗಬಹುದು. ಉದಾಹರಣೆಗೆ ರೈತರು ವಿವಿಧ ಯೋಜನೆಗಳಿಗೆ ಹಲವು ಬಾರಿ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ. ಒಬ್ಬ ಫಲಾನುಭವಿ ಬಹು ಯೋಜನೆಗಳನ್ನು ಪಡೆಯುವ ಸಾಧ್ಯತೆಗಳಿಂದ ಇತರೆ ಫಲಾನುಭವಿಗಳು ಯೋಜನೆಯ ಸೌಲಭ್ಯ ಪಡೆಯುವಲ್ಲಿ ವಂಚಿತರಾಗುವ ಸಾಧ್ಯತೆ ಇರುತ್ತದೆ. ನಿಜವಾದ ಮತ್ತು ದುರ್ಬಲ ರೈತರು ಪ್ರಯೋಜನಗಳಿಂದ ವಂಚಿತರಾದಲ್ಲಿ ರೈತರ ಸಂಪೂರ್ಣ ಅಭಿವೃದ್ಧಿಯ ದೃಷ್ಟಿಕೋನವು ಕುಂಠಿತಗೊಳ್ಳುತ್ತದೆ.

ಈ ತಂತ್ರಾಂಶವು ಸುಸಂಘಟಿತ ಮತ್ತು ಕೂಲಂಕುಷವಾಗಿ ಪರಿಶೀಲಿಸಿದ ರೈತರ ಡೇಟಾಬೇಸ್ (ದತ್ತಾಂಶ) ಪ್ರಯೋಜನಗಳನ್ನು ಪಡೆಯಲು ರೈತರು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಅನಾವಶ್ಯಕವಾಗಿ ಕಂಬ ಸುತ್ತುವುದನ್ನು ತಪ್ಪಿಸುತ್ತದೆ. ಅಲ್ಲದೇ ಸಮಸ್ಯೆಗಳನ್ನು ನಿವಾರಿಸಲು ಇಲಾಖೆಗಳಿಗೆ ಸಹಾಯ ಮಾಡುತ್ತದೆ. ಇದರಲ್ಲಿ ರೈತರು ಒಮ್ಮೆ ದಾಖಲೆಗಳನ್ನು ಸಲ್ಲಿಸಿದರೆ ಸಾಕು, ಮತ್ತೆ ಮತ್ತೆ ದಾಖಲೆಗಳನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ನಿಯತಕಾಲಿಕವಾಗಿ ವಿವರಗಳನ್ನು ನವೀಕರಿಸಲು ಕೂಡ ಈ ತಂತ್ರಾಂಶದಲ್ಲಿ ಅವಕಾಶವಿದೆ. ಆಧಾರ್ ಸಂಖ್ಯೆಯನ್ನು ಎಚ್‌ಎಸ್‌ಎಂನಲ್ಲಿ ಎನ್‌ಕ್ರಿಪ್ಟ್ ಮಾಡಲಾಗಿದೆ, ಮತ್ತು ಸಂಗ್ರಹಿಸಲಾಗಿದ್ದು, ಸೋರಿಕೆ ಅಥವಾ ದುರುಪಯೋಗಕ್ಕೆ ಅವಕಾಶವಿರುವುದಿಲ್ಲ.

## ಹವಾಮಾನ ಡೇಟಾ

ಕರ್ನಾಟಕ ರಾಜ್ಯವು KSNDMC (ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ಮಾನಿಟರಿಂಗ್ ಸೆಂಟರ್) ಅನ್ನು ಸ್ಥಾಪಿಸಿದೆ, ಇದು AWS (ಸ್ವಯಂಚಾಲಿತ ಹವಾಮಾನ ಕೇಂದ್ರ) ಮತ್ತು TRG (ಟೆಲಿಮೆಟ್ರಿಕ್ ರೇನ್ ಗೇಜ್ ಸ್ಟೇಷನ್) ಅನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗಿದೆ. ಫ್ರೂಟ್ಸ್ ತಂತ್ರಾಂಶವನ್ನು KSNDMCಯೊಂದಿಗೆ ಸಂಯೋಜಿಸಿ–ರುವುದರಿಂದ ದೈನಂದಿನ ಹವಾಮಾನ ಮತ್ತು ಮಳೆಯ ಡೇಟಾವನ್ನು ಪಡೆದು ಭೂಮಿಯ ಸ್ಥಳವನ್ನು ಆಧರಿಸಿ ಬಳಕೆದಾರರಿಗೆ ಒದಗಿಸುತ್ತದೆ.

ರಾಜ್ಯ ಕೃಷಿ ಇಲಾಖೆ, SHM (ಮಣ್ಣಿನ ಆರೋಗ್ಯ ಮಿಷನ್) ಮತ್ತು ಇತರ ರಾಜ್ಯ ಯೋಜನೆಗಳ ಅಡಿಯಲ್ಲಿ ರಾಜ್ಯದಾದ್ಯಂತ ಮಣ್ಣಿನ ಮಾದರಿಯನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸುತ್ತದೆ. ಅದು ಕೂಡ ಈಗ ಫ್ರೂಟ್ಸ್ ತಂತ್ರಾಂಶದೊಂದಿಗೆ ಸಂಯೋಜಿಸಲ್ಪಟ್ಟಿದೆ.



ಆಧಾರ್‌ನಲ್ಲಿರುವ ರೈತನ ಹೆಸರನ್ನೇ ದತ್ತಾಂಶದಲ್ಲೂ ದಾಖಲಿಸಲಾಗಿರುತ್ತದೆ. ಜಮೀನಿನ ಸಂರಕ್ಷಣೆ, ಭೂದಾಖಲೆಗೆ ದತ್ತಾಂಶ, ಭೂ ಮಾಲೀಕತ್ವದ ದೃಢೀಕರಣ, ಜಮೀನಿನ ವಿಸ್ತಾರ, ಜಮೀನಿನ ಪತ್ರದಲ್ಲಿರುವಂತೆಯೇ ಆಧಾರ್ ಹೆಸರು (ಫಲಾನುಭವಿ ಹೆಸರು) ಭೂಮಾಲೀಕರ ಹೆಸರು ಭೂಮಿಯಲ್ಲಿರುವಂತೆ ಆಧಾರ್ ಹೆಸರು (ಫಲಾನುಭವಿ ಹೆಸರು) ಮತ್ತು ಭೂಮಾಲೀಕರ ಹೆಸರನ್ನು ಹೋಲಿಸಲು ಹೆಸರು ಹೋಲಿಕೆ ಸಾಧನವಾಗಿ ಫ್ರೂಟ್ಸ್ ತಂತ್ರಾಂಶ ಬಳಕೆಯಾಗುತ್ತದೆ. ಕಂದಾಯ ಇಲಾಖೆಯ AJSKUಗೆ ಸಂರಕ್ಷಿಸುತ್ತದೆ. ಜಾತಿ ಪ್ರಮಾಣಪತ್ರ ದೃಢೀಕರಣ, ಎಲೆಕ್ಟ್ರಾನಿಕ್ ನೀಡಿದ ಪ್ರಮಾಣಪತ್ರದ, SF/MF ಪ್ರಮಾಣಪತ್ರದ ದೃಢೀಕರಣ, ಆಹಾರ ಮತ್ತು ನಾಗರೀಕ ಪೂರೈಕೆ ಇಲಾಖೆಗೆ ಸಂಪರ್ಕ ಕಲ್ಪಿಸಲು, ಕುಟುಂಬದ ವಿವರ ಪಡೆಯಲು ಅಲ್ಲದೇ






Downloaded From: www.kpscvaani.com



ಚುನಾವಣಾ ಆಯೋಗದ ವೆಬ್‌ಸೈಟ್ ಸಂಪರ್ಕಿಸಲು, ಎಪಿಕ್ ವಿವರ ಪಡೆಯಲು, ಪ್ರತಿ ರೈತರಿಗೆ ವಿಶಿಷ್ಟ ಗುರುತು ನೀಡಲು ಅಲ್ಲದೇ ಇತರೆ ಇಲಾಖೆಗಳ ಅಪ್ಲಿಕೇಷನ್ ವೆಬ್ ಸೇವೆಗಳಾದ HASIRU, K-Kisan ಗೂ ಫ್ರೂಟ್ಸ್ ತಂತ್ರಾಂಶ ಸಹಾಯ ಮಾಡುತ್ತದೆ.

**ಫಲಾನುಭವಿಗಳ ಡೇಟಾ ಬೇಸ್ :-**

ಪ್ರತಿಯೊಂದು ಇಲಾಖೆಯು ತಮ್ಮದೇ ಆದ ಫಲಾನುಭವಿ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದ್ದು, ತೋಟಗಾರಿಕೆ ಇಲಾಖೆಯ HASIRU ಮತ್ತು ಕೃಷಿ ಇಲಾಖೆಯ, K-KISAN ಅಪ್ಲಿಕೇಶನ್ ಪಾವತಿಗೂ ಫ್ರೂಟ್ಸ್ ತಂತ್ರಾಂಶ ಸಂಪರ್ಕಿಸುತ್ತದೆ.

ರಾಜ್ಯದ ಡಿಬಿಟಿ ಪೋರ್ಟಲ್‌ಗೆ ಮತ್ತು ಅದರ ಮೂಲಕ ಖಜಾನೆ (ಖಜಾನೆ–II) ಅಥವಾ ಇಲಾಖೆಗಳ ಬ್ಯಾಂಕ್ ಖಾತೆಯಂತಹ ಹಣಕಾಸು ನಿರ್ವಹಣಾ ವ್ಯವಸ್ಥೆಗೆ ಸಂಪರ್ಕ ನೀಡಿ ಫಲಾನುಭವಿಗಳ ಖಾತೆಗೆ ನೇರವಾಗಿ ಪ್ರಯೋಜನಗಳನ್ನು ವಿತರಿಸಲು ಕೂಡ ಈ ತಂತ್ರಾಂಶ ಸಹಾಯ ಮಾಡುತ್ತದೆ.

ಬಹುಪಾಲು ಇಲಾಖೆಗಳ ವಿವಿಧ ಯೋಜನೆಗಳ ಅನುಷ್ಠಾನಕ್ಕೆ ಫ್ರೂಟ್ಸ್ ತಂತ್ರಾಂಶವನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ. ಸತತ ಬರಗಾಲದಿಂದ ತೆಂಗಿನಕಾಯಿ ಒಣಗಿರುವ ಅಥವಾ ಅನುತ್ಪಾದಕವಾಗಿರುವ ತೆಂಗು ರೈತರಿಗೆ ತೋಟಗಾರಿಕೆ ಇಲಾಖೆಯಿಂದ ಆರ್ಥಿಕ ನೆರವು ನೀಡಲು ಇದನ್ನು ಬಳಸಲಾಗುತ್ತಿದೆ. ಸುಮಾರು 1.50 ಲಕ್ಷ ರೈತರು ಇದರಿಂದ ಪ್ರಯೋಜನ ಪಡೆದಿದ್ದಾರೆ. ಅನರ್ಹ ಹಕ್ಕುಗಳನ್ನು ತೆಗೆದು ಹಾಕುವ ಮೂಲಕ ಮತ್ತು ನಕಲು ಮಾಡುವ ಮೂಲಕ ಸುಮಾರು 40 ಕೋಟಿ ರೂಗಳನ್ನು ಉಳಿಸಲಾಗಿದೆ.

ಕೃಷಿ ಇಲಾಖೆಯಿಂದ ಫ್ರೂಟ್ಸ್ ತಂತ್ರಾಂಶದೊಂದಿಗೆ PMKISAN ಯೋಜನೆಯನ್ನು ಸಹ ಜಾರಿಗೊಳಿಸಲಾಗಿದೆ. ಅಲ್ಲದೆ, ಹೆಚ್ಚುವರಿಯಾಗಿ ರಾಜ್ಯ ಯೋಜನೆಯಡಿ ರೈತರಿಗೆ ರೂ 4000.00 ಪಾವತಿಸಲಾಗಿದೆ. 55 ಲಕ್ಷಕ್ಕೂ ಹೆಚ್ಚು ರೈತರು ಇದರ ಪ್ರಯೋಜನ ಪಡೆದಿದ್ದಾರೆ. ಇಲಾಖೆಗಳಿಂದ ಭತ್ತ, ರಾಗಿ, ಜೋಳ, ತೊಗರಿ, ಕಡಲೆ, ನೆಲಗಡಲೆ, ಇತ್ಯಾದಿ ಬೆಳೆಗಳಿಗೆ MSP ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ.

ಫ್ರೂಟ್ಸ್ ತಂತ್ರಾಂಶದಿಂದ ಐದು ಲಕ್ಷಕ್ಕೂ ಹೆಚ್ಚು ರೈತರು ಪ್ರಯೋಜನ ಪಡೆದಿದ್ದು, ನೇರವಾಗಿ ರೈತರ ಖಾತೆಗೆ ಪಾವತಿ ಮಾಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಕೃಷಿ ಮತ್ತು ತೋಟಗಾರಿಕೆ ಇಲಾಖೆಯಿಂದ ಕೋವಿಡ್–19 ಸಂಬಂಧಿತ ಲಾಕ್‌ಡೌನ್‌ನಿಂದ ಹಾನಿಗೊಳಗಾದ ರೈತರಿಗೆ ಆರ್ಥಿಕ ಸಹಾಯವನ್ನು ಒದಗಿಸಲಾಗಿದೆ. ಇದುವರೆವಿಗೆ ಸುಮಾರು ಹತ್ತು ಲಕ್ಷ ರೈತರು ಇದರ ಪ್ರಯೋಜನ ಪಡೆದಿದ್ದಾರೆ.

ICAR NIVEDI ಯಿಂದ ಹೈನುಗಾರರಿಗೆ ಪ್ರಾಣಿಗಳ ಕಾಯಿಲೆ ಕುರಿತು ಮುನ್ನೆಚ್ಚರಿಕೆಯನ್ನು ಕಳುಹಿಸಲು, ಮತ್ತು ರೈತರಿಗೆ ಪಶುಗಳ ವ್ಯಾಕ್ಸಿನೇಷನ್ ಡ್ರೈವ್ ಬಗ್ಗೆ ಉದ್ದೇಶಿತ ಸಂದೇಶ ಕಳುಹಿಸಲು ಫ್ರೂಟ್ಸ್ ತಂತ್ರಾಂಶವನ್ನು ಬಳಸಲಾಗುತ್ತಿದೆ.

ಫೆಬ್ರವರಿ 5 ರವರೆಗೆ 77 ಲಕ್ಷಕ್ಕೂ ಹೆಚ್ಚು ರೈತರು ಫ್ರೂಟ್ಸ್‌ನಲ್ಲಿ ನೋಂದಾಯಿಸಿಕೊಂಡಿದ್ದು, ಈ ಪೈಕಿ 62 ಲಕ್ಷಕ್ಕೂ ಹೆಚ್ಚು ರೈತರು ತಮ್ಮ ಜಮೀನಿನೊಂದಿಗೆ ನೋಂದಾಯಿಸಿಕೊಂಡಿದ್ದಾರೆ. ಹೈನುಗಾರಿಕೆಯಂತಹ ಕಡಿಮೆ ಜಮೀನು ಕೃಷಿ ಚಟುವಟಿಕೆಗಳನ್ನು ಹೊಂದಿರುವವರು ಸಹ ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಾಯಿಸಿಕೊಂಡಿದ್ದಾರೆ.

ಒಟ್ಟಾರೆ ಈ ತಂತ್ರಾಂಶದಿಂದಾಗಿ ರೈತರು ಸರ್ಕಾರದ ಸವಲತ್ತುಗಳನ್ನು ಪಡೆಯುವ ಸಲುವಾಗಿ ಪ್ರತಿ ಬಾರಿಯು ದಾಖಲೆಯನ್ನು ಸಲ್ಲಿಸುವುದು ತಪ್ಪಲಿದೆ. ಹಾಗಾಗಿ ಇನ್ನು ಮುಂದೆ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕಾದರೆ ರೈತರು ಈ ತಂತ್ರಾಂಶದಲ್ಲಿ ನೋಂದಣಿ ಮಾಡಿಸಿಕೊಳ್ಳಲೇಬೇಕು.



Downloaded From: www.kpscvaani.com

# ಕೋವಿಡ್ ನಿರ್ವಹಣೆಯಲ್ಲಿ ರಾಜ್ಯಕ್ಕೆ ಜನಮನ್ನಣೆ: ರಾಜ್ಯಪಾಲರ ಇಂಗಿತ





**ಸಂಪ್ರದಾಯದಂತೆ ವರ್ಷದ ಮೊದಲ ಜಂಟಿ ಅಧಿವೇಶವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣದ ಸಂಕ್ಷಿಪ್ತ ನೋಟ.**

ಆರ್. ರಂಜಿತಾ

ಕಳೆದ ಎರಡು ಮುಕ್ಕಾಲು ವರ್ಷಗಳಿಂದ ಜಗತ್ತು ಕೋವಿಡ್ ಸಾಂಕ್ರಾಮಿಕ ಜಾಡ್ಯದಿಂದ ತತ್ತರಿಸಿದೆ. ಅಮೆರಿಕಾದಂತಹ ಅತಿ ಮುಂದುವರೆದ ದೇಶವೇ, ಪರಿಸ್ಥಿತಿಯನ್ನು ತಹಬಂದಿಗೆ ತರಲಾಗದೆ ಅತಿ ಹೆಚ್ಚು ಸಾವು-ನೋವಿಗೆ, ತೊಂದರೆಗೆ ಒಳಗಾದ ವಿಶ್ವದ ದೇಶಗಳ ಪಟ್ಟಿಯಲ್ಲಿ ಪ್ರಥಮ ಸ್ಥಾನದಲ್ಲಿದೆ.

ಕೋವಿಡ್ ಶತಮಾನದ ಮಹಾದುರಂತ. ಇದ್ದುದ್ದರಲ್ಲೇ ತಂತ್ರಜ್ಞಾನ ಮತ್ತು ಆಧುನಿಕ ಸಂವಹನವನ್ನು ಉಪಯೋಗ ಮಾಡಿಕೊಂಡು ನಿಯಂತ್ರಣ ಮಾಡುವಲ್ಲಿ ಮುಂದುವರೆದ ದೇಶಗಳಿಗಿಂತಲೂ ಕರ್ನಾಟಕವೇ ಹೆಚ್ಚು ಮುಂಚೂಣಿಯಲ್ಲಿದೆ. ಬದಲಾಗುತ್ತಿರುವ ಸನ್ನಿವೇಶದಲ್ಲಿ ಆಧುನಿಕ ತಂತ್ರಜ್ಞಾನದ ಮೂಲಕ ಜನರ ಜೀವನಮಟ್ಟ ಸುಧಾರಿಸಲು ಮತ್ತು ಜನತೆಯ ಮನೆಬಾಗಿಲಿಗೆ ಹಲವು ಸೌಲಭ್ಯ ಒದಗಿಸುವ ಸಂಕಲ್ಪವನ್ನು ಸರ್ಕಾರ ಮಾಡಿದೆ ಎಂದು ರಾಜ್ಯಪಾಲರು ತಮ್ಮ ಜಂಟಿ ಅಧಿವೇಶನದ ಭಾಷಣದಲ್ಲಿ ತಿಳಿಸಿದ್ದಾರೆ.

ಜಗತ್ತಿನಲ್ಲಿ ಕೋವಿಡ್‌ನಿಂದ ಬೇಕಾದಷ್ಟು ಸಾವು-ನೋವುಗಳಾಗಿವೆ. ವಿಶ್ವದ ಬಹುತೇಕ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ಅಯೋಮಯವಾಗಿದೆ. ಉದ್ಯೋಗ ನಷ್ಟದಿಂದ ಜನರ ಬದುಕು ತೀವ್ರ ಸಂಕಟಕ್ಕೆ ಒಳಗಾಗಿದೆ. ಭವಿಷ್ಯ ರೂಪಿಸಿಕೊಳ್ಳವುದೇ ದೊಡ್ಡ ಹೋರಾಟವಾಗಿದೆ. ಕೋವಿಡ್ ಜೊತೆ ಬದುಕು ಅನಿವಾರ್ಯ  ಎಂಬ ಸ್ಥಿತಿಗೆ ಬರಲಾಗಿದೆ.  ಇದೆಲ್ಲರ ನಡುವೆಯೂ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರ  ಭಾಷಣ ಹೊಸ ಆಶಯ-ಹೊಸ ಭರವಸೆ ಮೂಡಿಸಿದೆ.

ಕೋವಿಡ್ ನಿಯಂತ್ರಣ ಮಾಡುವಲ್ಲಿ ಸರ್ಕಾರ ಆಧುನಿಕ ತಂತ್ರಜ್ಞಾನ ಮತ್ತು ಆಧುನಿಕ ಸಂವಹನವನ್ನು ಬಹಳ ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು ಅದರ ಮೂಲಕ ಕೋವಿಡ್ ನಿಯಂತ್ರಣ ಮಾಡಿರುವ ಬಗ್ಗೆ ರಾಜಪಾಲರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದರ ಪರಿಣಾಮವಾಗಿ ಕೋವಿಡ್ ಮರಣ ಪ್ರಮಾಣವನ್ನು ಗಣನೀಯ ಮಟ್ಟದಲ್ಲಿ  ತಗ್ಗಿಸಲಾಗಿದೆ ಎಂಬುದು



Downloaded From: www.kpscvaani.com

ಪ್ರಮುಖ ಸಂಗತಿ. ಟೆಲಿಮೆಡಿಸಿನ್ ಸೌಲಭ್ಯ, 5–ಟಿ ಸೂತ್ರದ ಮೂಲಕ ಟೆಸ್ಟಿಂಗ್, ಟ್ರೇಸಿಂಗ್, ಟ್ರ್ಯಾಕಿಂಗ್, ಟ್ರೀಟ್ಮೆಂಟ್ ಎಂಬ ಕಾರ್ಯವಿಧಾನಗಳ ಮೂಲಕ ಸೋಂಕು ನಿಯಂತ್ರಣ ಮಾಡುವಲ್ಲಿ ಕರ್ನಾಟಕ ದೇಶಕ್ಕೆ ಮಾದರಿಯಾಗಿದೆ. ರಾಷ್ಟ್ರಮಟ್ಟದ ಗೌರವಕ್ಕೂ ಪಾತ್ರವಾಗಿದೆ.

ಆರು ಸಾವಿರ ಕೋವಿಡ್ ಲಸಿಕಾ ಕೇಂದ್ರಗಳು ದಿನನಿತ್ಯ ಕಾರ್ಯನಿರ್ವಹಿಸುತ್ತಿವೆ. ಜನವರಿ ಅಂತ್ಯದವರೆಗೆ 9 ಕೋಟಿ 33 ಲಕ್ಷ ಅರ್ಹರಿಗೆ ಮೊದಲ ಡೋಸ್ ಹಾಗೂ 4ಕೋಟಿ 89 ಲಕ್ಷ ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ. ಒಟ್ಟು ಜನಸಂಖ್ಯೆಯ ಶೇಕಡ ನೂರರಷ್ಟು ಜನರಿಗೆ ಮೊದಲ ಡೋಸ್, ಶೇಕಡ 85 ರಷ್ಟು ಜನರಿಗೆ ಎರಡನೇ ಡೋಸ್ ಲಸಿಕೆ ನೀಡಲಾಗಿದೆ.

ಕೋವಿಡ್‌ನಿಂದ ಉಂಟಾದ ಹೊಸ ರೂಪಾಂತರಿ ಸೋಂಕು ಪತ್ತೆಹಚ್ಚಲು ಜಿನೋಮ್ ಸಿಕ್ವೆನ್ಸಿಂಗ್ ನಡೆಸಲು 5 ಸುಸಜ್ಜಿತ ಪ್ರಯೋಗ ಕೇಂದ್ರಗಳನ್ನು ಆರಂಭಿಸಲಾಗಿದೆ. 540 ಟ್ರಯೇಜಿಂಗ್ ಸೆಂಟರ್‌ಗಳು ರಾಜ್ಯಾದ್ಯಂತ ಕಾರ್ಯನಿರ್ವಹಿಸುತ್ತಿವೆ. ಬೆಂಗಳೂರು ನಗರದಲ್ಲಿ 168 ಕೇಂದ್ರಗಳು, ಜಿಲ್ಲಾ ಕೇಂದ್ರಗಳಲ್ಲಿ 372 ಕೇಂದ್ರಗಳು ಸೇರಿದಂತೆ ಒಟ್ಟು 540 ಟ್ರಯೇಜಿಂಗ್ ಸೆಂಟರ್‌ಗಳು ಕೋವಿಡ್‌ನಿಂದ ಆರೈಕೆ ಪಡೆಯುತ್ತಿರುವವರನ್ನು ನಿಗದಿತವಾಗಿ ಟೆಲಿ ಕನ್ಸಲ್ಟೇಶನ್ ಮೂಲಕ ಸಂಪರ್ಕಿಸಿ ಅಗತ್ಯ ಸಲಹೆ ನೀಡಿ, ಮೇಲ್ವಿಚಾರಣೆ ನಡೆಸಲಾಗುತ್ತಿದೆ. ಆಧುನಿಕ ಸಂವಹನ ಮತ್ತು ತಂತ್ರಜ್ಞಾನದ ನೆರವು ಬಳಸಿಕೊಂಡು ಕೋವಿಡ್ ನಿಯಂತ್ರಣ ಮಾಡುವಲ್ಲಿ ಕರ್ನಾಟಕ ಮುಂಚೂಣಿ ಸ್ಥಾನದಲ್ಲಿದೆ.

ಈವರೆಗೆ ಹೋಂ ಐಸೋಲೇಷನ್‌ನಲ್ಲಿ ಆರೈಕೆ ಪಡೆದ ವಯಸ್ಕರು ಹಾಗೂ ಮಕ್ಕಳಿಗೆ ಸುಮಾರು 2.50 ಲಕ್ಷ ಹೋಂ ಐಸೋಲೇಷನ್ ಮೆಡಿಕಲ್ ಕಿಟ್‌ಗಳನ್ನು ವಿತರಿಸಲಾಗಿದೆ. ಕೋವಿಡ್ ನಂತರ ಹೊಸ–ಹೊಸ ಆರೋಗ್ಯ ಸಮಸ್ಯೆಗಳು ತಲೆದೋರುತ್ತಿದೆ. ಇದರಿಂದ ಬಡವರು ಮತ್ತು ಮಧ್ಯಮ ವರ್ಗದ ಜನ ಬಹಳ ತೊಂದರೆಗೆ ಒಳಗಾಗುತ್ತಿದ್ದಾರೆ. ಬಡವರು ಮತ್ತು ಮಧ್ಯಮ ವರ್ಗ ಜನರಿಗೆ ಕಡಿಮೆ ದರದಲ್ಲಿ ಪರಿಣಾಮಕಾರಿ ಮತ್ತು ಉತ್ತಮ ಗುಣಮಟ್ಟದ ಚಿಕಿತ್ಸೆ ದೊರಕಬೇಕು ಎಂಬ ಏಕೈಕ ಉದ್ದೇಶದಿಂದ ಆಯುಷ್ಮಾನ್ ಭಾರತ್ ಯೋಜನೆಯಡಿ ರಾಜ್ಯದಲ್ಲಿ ಈವರೆಗೆ 8.25 ಲಕ್ಷ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ರಾಜ್ಯದಲ್ಲಿ ಕೋವಿಡ್ ಚಿಕಿತ್ಸೆ ಮತ್ತು ನಿರ್ವಹಣೆಗಾಗಿ 875 ಕೋಟಿ ರೂಪಾಯಿಗಳನ್ನು 7 ಲಕ್ಷ ಫಲಾನುಭವಿಗಳ ಚಿಕಿತ್ಸೆ ಮತ್ತು ಪರಿಹಾರಕ್ಕಾಗಿ ವೆಚ್ಚ ಮಾಡಲಾಗಿದೆ. ಹಮಾಲರು, ಟೈಲರ್‌ಗಳು, ಮೆಕ್ಯಾನಿಕ್‌ಗಳು, ಅಗಸರು, ಚಿಂದಿ ಆಯುವವರು ಸೇರಿದಂತೆ ಒಟ್ಟು 2.26 ಲಕ್ಷ ಅಸಂಘಟಿತ ಕಾರ್ಮಿಕರಿಗೆ 237 ಕೋಟಿ ರೂಪಾಯಿ ಪರಿಹಾರ ಒದಗಿಸಲಾಗಿದೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ಪ್ರಾರಂಭಿಸಿದ ಟೆಲಿಮೆಡಿಸಿನ್ ಆಧಾರಿತ ಆರೋಗ್ಯ ಸೇವೆಗಳ ಸದುಪಯೋಗ ಪಡೆಯುವಲ್ಲಿ ಕರ್ನಾಟಕ ಎರಡನೇ ಸ್ಥಾನ ಪಡೆದುಕೊಂಡಿದೆ. ಕೋವಿಡ್ ಮೂರನೆಯ ಅಲೆ ಮಕ್ಕಳ ಆರೋಗ್ಯದ ಮೇಲೆ ಬಹಳ ಗಂಭೀರ ಪರಿಣಾಮ ಬೀರುವ ಸಾಧ್ಯತೆಯಿದೆ ಎಂಬ ಆರೋಗ್ಯ ಪರಿಣಿತರ ಮುನ್ನೆಚ್ಚರಿಕೆ ಕಾರಣ, ಮಕ್ಕಳ ಆರೋಗ್ಯ ಕಾಪಾಡಲು "ಆರೋಗ್ಯ ನಂದನ" ಎಂಬ ವಿನೂತನ ಅಭಿಯಾನ ಪ್ರಾರಂಭಿಸಲಾಗಿದೆ. ಮಕ್ಕಳ ಆರೋಗ್ಯ ತಪಾಸಣೆ ಮಾಡಿ ಅವರ ಆರೋಗ್ಯ ಕಾಪಾಡುವುದೇ ಯೋಜನೆಯ ಉದ್ದೇಶವಾಗಿದೆ. ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳ ಜಂಟಿ ಸಹಯೋಗದಲ್ಲಿ ಆರೋಗ್ಯ ನಂದನ ಅಭಿಯಾನ ಹಮ್ಮಿಕೊಳ್ಳಲಾಗಿದೆ.

ಅಮೃತ ಗ್ರಾಮ ಪಂಚಾಯತ್ ಯೋಜನೆಯಡಿ 750 ಗ್ರಾಮಗಳನ್ನು ಆಯ್ಕೆ ಮಾಡಿ ಈ ಪಂಚಾಯತ್‌ಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ತೀರ್ಮಾನಿಸಲಾಗಿದೆ. ಯೋಜನೆಯ ಸಮರ್ಪಕ ಅನುಷ್ಠಾನವಾದರೆ ಒಂದು ಗ್ರಾಮ ಪಂಚಾಯಿತಿಗೆ ಪ್ರೋತ್ಸಾಹ ಧನದ ರೂಪದಲ್ಲಿ ತಲಾ 25 ಲಕ್ಷ ರೂಪಾಯಿ ನೀಡಲು 187.50 ಕೋಟಿ ರೂಪಾಯಿ ನಿಗದಿ ಪಡಿಸಲಾಗಿದೆ.

ನೆರೆಯಿಂದ ಹಾನಿಗೊಳಗಾದ ರೈತರ ಖಾತೆಗೆ ಡಿಬಿಟಿ ಮೂಲಕ ಸರ್ಕಾರವು ದಾಖಲೆ ಸಮಯದಲ್ಲಿ ಹಣವನ್ನು ಜಮಾ ಮಾಡಿದೆ. 18.02 ಲಕ್ಷ ರೈತರ ಖಾತೆಗೆ 1, ಸಾವಿರದ 252 ಕೋಟಿ ರೂಪಾಯಿ ಮೊತ್ತವು ಜಮೆಯಾಗಿದೆ. ಕೋವಿಡ್‌ನಿಂದ ಮೃತಪಟ್ಟ ಬಡತನ



**ಹೆಚ್ಚುವರಿ ಒಂದು ಕೆಜಿ ಅಕ್ಕಿ**

ಆದ್ಯತಾ ಪಡಿತರ ಚೀಟಿ ಹೊಂದಿರುವ ಪ್ರತಿ ಕುಟುಂಬಕ್ಕೆ 5 ಕೆಜಿ ಆಹಾರ ಧಾನ್ಯವನ್ನು ಪ್ರತಿ ತಿಂಗಳು ವಿತರಿಸಲಾಗುತ್ತಿದೆ. ರಾಜ್ಯ ಸರ್ಕಾರ ಹೆಚ್ಚುವರಿಯಾಗಿ ನೀಡುವ ಒಂದು ಕೆಜಿ ಅಕ್ಕಿ ಬರುವ ಏಪ್ರಿಲ್‌ನಿಂದ ಲಭ್ಯವಾಗಲಿದೆ.



Downloaded From: www.kpscvaani.com

ರೇಖೆಗಿಂತ ಕೆಳಗಿರುವ ಕುಟುಂಬದ ವಾರಸುದಾರರಿಗೆ ತಲಾ ಒಂದು ಲಕ್ಷ ರೂಪಾಯಿ ಪರಿಹಾರ ನೀಡಲಾಗಿದೆ.

ರಾಜ್ಯದ 8 ಜ್ಞಾನಪೀಠ ಪ್ರಶಸ್ತಿ ವಿಜೇತರು ಅಭ್ಯಾಸ ಮಾಡಿದ್ದ ಶಾಲೆಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಲು 16.88 ಕೋಟಿ ರೂಪಾಯಿ ಒದಗಿಸಲಾಗಿದೆ. ಬಿಸಿಯೂಟ, ಕ್ಷೀರಭಾಗ್ಯ ಯೋಜನೆಗಳಿಗೆ 1,469.26 ಕೋಟಿ ರೂಪಾಯಿ ಅನುದಾನ ಒದಗಿಸಲಾಗಿದೆ.

ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಲು 5, 500 ಕೋಟಿ ರೂಪಾಯಿ ವೆಚ್ಚದ 5 ನೇ ಹಂತದ ಕಾವೇರಿ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಇದರಿಂದ 775 ದಶಲಕ್ಷ ಲೀಟರ್ ನೀರು ಹೆಚ್ಚುವರಿಯಾಗಿ ಬೆಂಗಳೂರು ಜನರಿಗೆ ಲಭ್ಯವಾಗಲಿದೆ.

ಸೇವಾ ಸಿಂಧು ಯೋಜನೆ ಮೂಲಕ ಸರ್ಕಾರದ ಎಲ್ಲ ಸರ್ಕಾರಿ ಇಲಾಖೆಗಳ ಸೇವೆಯನ್ನು ಆನ್‌ಲೈನ್ ಮುಖಾಂತರ ಹಾಗೂ ವಿವಿಧ ನಾಗರಿಕ ಸೇವಾ ಕೇಂದ್ರಗಳಾದ ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳ ಮೂಲಕ ನಾಗರಿಕರಿಗೆ ತ್ವರಿತ ಮತ್ತು ಅಗತ್ಯ ಸೇವೆಗಳನ್ನು ನಗದು ರಹಿತ ಮತ್ತು ಕಾಗದ ರಹಿತ ರೀತಿಯಲ್ಲಿ ಫಲಾನುಭವಿಗಳ ಮನೆಯ ಬಾಗಿಲಿಗೆ ತಲುಪಿಸುವ ವ್ಯವಸ್ಥೆ ಮಾಡಿದೆ.

ದೇಶದಲ್ಲೇ ಪ್ರಪ್ರಥಮ ಬಾರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಜ್ಯ ಅನುಷ್ಠಾನಗೊಳಿಸಿದ್ದು, ಇದಕ್ಕೆ ಪೂರಕವಾಗಿ ಪಠ್ಯ ಕ್ರಮವನ್ನು ಪರಿಷ್ಕರಿಸಲಾಗಿದೆ. ರೈತರ ಮಕ್ಕಳ ಶಿಕ್ಷಣ ಪ್ರೋತ್ಸಾಹಿಸಲು ಮುಖ್ಯಮಂತ್ರಿಗಳ ರೈತ ವಿದ್ಯಾನಿಧಿ ಯೋಜನೆಯಡಿ 5.2 ಲಕ್ಷ ಮಕ್ಕಳ ಬ್ಯಾಂಕ್ ಖಾತೆಗಳಿಗೆ ಈವರೆಗೆ 126 ಕೋಟಿ ರೂಪಾಯಿ ಜಮೆ ಮಾಡಲಾಗಿದೆ.

ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಹೆಸರನ್ನು ಕಲ್ಯಾಣ-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಎಂದು ಪುನರ್ ನಾಮಕರಣ ಮಾಡಲಾಗಿದೆ. ಕಲಬುರಗಿ, ಬೀದರ್, ಕೊಪ್ಪಳ, ಬಳ್ಳಾರಿ, ರಾಯಚೂರು, ಯಾದಗಿರಿ, ವಿಜಯನಗರ ಜಿಲ್ಲೆಗಳು ಈ ಮಂಡಳಿಯ ವ್ಯಾಪ್ತಿಗೆ ಸೇರಲಿವೆ. ಪ್ರಸ್ತುತ ಸಚಿವಾಲಯದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಅಧೀನದಲ್ಲಿದ್ದ ಹೈದರಾಬಾದ್ ಕರ್ನಾಟಕ ವಿಶೇಷ ಕೋಶವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅಧೀನಕ್ಕೊಳಪಡಿಸಿ, ಕಲಬುರಗಿಗೆ ಸ್ಥಳಾಂತರಿಸಿ ಆದೇಶ ಹೊರಡಿಸಲಾಗಿದೆ.

**ಮರಳಿ ತಾಯ್ನಾಡಿಗೆ ಯೋಜನೆ ಅನುಷ್ಠಾನ**

ವಿದೇಶದಲ್ಲಿರುವ ದೇಶಿ ಸಂಜಾತರ ಜ್ಞಾನವನ್ನು ದೇಶದಲ್ಲಿ ಬಳಸಿಕೊಳ್ಳಲು ಮರಳಿ ತಾಯ್ನಾಡಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಕ್ತ ನೀತಿ ರಚಿಸಿ ಸೂಕ್ತ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳಲಾಗಿದೆ.

ರಾಜ್ಯದ 14 ಜಿಲ್ಲೆಗಳ ಗ್ರಾಮವಾಸಿಗಳಿಗೆ ಅವರ ವಾಸಸ್ಥಳದ ಆಸ್ತಿ ಪತ್ರವನ್ನು ನೀಡುವ ಸ್ವಾಮಿತ್ವ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ 59.13 ಲಕ್ಷ ಜನರಿಗೆ ಕೆಲಸ ಒದಗಿಸಲಾಗಿದೆ. ಇದಕ್ಕಾಗಿ ಒಟ್ಟು 3,769.95 ಕೋಟಿ ರೂಪಾಯಿ ಕೂಲಿ ಪಾವತಿಸಲಾಗಿದೆ.

ಜಲಸಂಪನ್ಮೂಲ ಇಲಾಖೆಯು ವಿಶ್ವಬ್ಯಾಂಕ್ ನೆರವಿನ ಅಣೆಕಟ್ಟು ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆಯ ಹಂತ-2 ಮತ್ತು 3 ರಡಿ 1500 ಕೋಟಿ ರೂಪಾಯಿ ವೆಚ್ಚದಲ್ಲಿ ಒಟ್ಟು 58 ಅಣೆಕಟ್ಟುಗಳನ್ನು ಪುನಶ್ಚೇತನಗೊಳಿಸಲಿದೆ. ಇದೆ ಮೊದಲ ಭಾರಿಗೆ ಅಣೆಕಟ್ಟುಗಳ ವಿಚಕ್ಷಣೆ, ಪರಿವೀಕ್ಷಣೆ, ಕಾರ್ಯಾಚರಣೆ ನಿರ್ವಹಣೆ ಮತ್ತು ಸುರಕ್ಷತೆಗಾಗಿ ಸರ್ಕಾರ ಅಣೆಕಟ್ಟು ಸುರಕ್ಷಾ ಸಂಸ್ಥೆಯನ್ನು ಹೊಸದಾಗಿ ಹುಟ್ಟುಹಾಕಿದೆ.

ಪ್ರಸಕ್ತ ಸಾಲಿನಲ್ಲಿ ವಸತಿ ಯೋಜನೆಯಡಿ 5 ಲಕ್ಷ ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸಲಾಗುವುದು. ಇದರಲ್ಲಿ ಗ್ರಾಮೀಣ ಪ್ರದೇಶಗಳಿಗೆ 4 ಲಕ್ಷ ಮತ್ತು ನಗರ ಪ್ರದೇಶಗಳಿಗೆ 1 ಲಕ್ಷ ಮನೆಗಳನ್ನು ನೀಡಲಾಗುವುದು.

ರಾಜ್ಯದಲ್ಲಿ ನವೋದ್ಯಮ ಮತ್ತು ಇತರೆ ಕೈಗಾರಿಕಾ ಚಟುವಟಿಕೆಗಳನ್ನು ಉತ್ತೇಜಿಸಲು, ಹಾಗೂ ಬಂಡವಾಳ ಹೂಡಿಕೆದಾರರಿಗೆ ಕೆಲವು ವಿನಾಯಿತಿ ನೀಡಿ ನಿಯಮ ಸರಳೀಕರಣಗೊಳಿಸಿ ಕೈಗಾರಿಕಾ ಪರಿಸರ ಸ್ನೇಹಿ ರಾಜ್ಯವಾಗಿದೆ. ಇದರ ಜೊತೆಗೆ ದೇಶದಲ್ಲಿ ಇಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯನೀತಿಯನ್ನು ಜಾರಿಗೆ ತಂದ ಪ್ರಪ್ರಥಮ ರಾಜ್ಯ ಎಂಬ ಕೀರ್ತಿಗೂ ಭಾಜನವಾಗಿದೆ. ಕೈಗಾರಿಕೆ ಪೂರಕ ವಾತವರಣ ನಿರ್ಮಾಣ ಮಾಡಲು ಸರ್ಕಾರ 100 ಕೋಟಿ ರೂಪಾಯಿ ಮೊತ್ತದ ನವೋದ್ಯಮ ಉತ್ತೇಜನ ನಿಧಿ ಸ್ಥಾಪಿಸಲಾಗುತ್ತಿದೆ. 'ಉದ್ಯಮಿಯಾಗಿ, ಉದ್ಯೋಗದಾತರಾಗಿ' ಎಂಬ ಘೋಷಣೆಯಡಿಯಲ್ಲಿ ರಾಜ್ಯದಲ್ಲಿ ಉದ್ಯಮಶೀಲತೆ ಬೆಳೆಸಲು ಬೆಂಗಳೂರು-ಮುಂಬೈ ಮತ್ತು ಬೆಂಗಳೂರು-ಚೆನ್ನೈ ಕೈಗಾರಿಕಾ ಕಾರಿಡಾರ್‌ಗಳಲ್ಲಿ ಕೈಗಾರಿಕಾ ಟೌನ್‌ಶಿಪ್ ಸ್ಥಾಪಿಸಲಾಗುತ್ತದೆ.

ಒಟ್ಟಾರೆ ಕಳೆದೆರಡು ವರ್ಷಗಳಿಗೂ ಹೆಚ್ಚು ಕಾಲ ರಾಜ್ಯವನ್ನು ಕಾಡಿದ ಕೋವಿಡ್ ಪರಿಸ್ಥಿತಿ ಮತ್ತು ಕಳೆದ ವರ್ಷ ಕಾಡಿದ ಅಕಾಲಿಕ ಮಳೆ ಮತ್ತು ನೆರೆ ಪರಿಸ್ಥಿತಿ ನಿಭಾಯಿಸುವಲ್ಲಿ ಸರ್ಕಾರ ಇತಿ-ಮಿತಿಯಲ್ಲೇ ಜನರ ಬವಣೆ ನಿವಾರಿಸಿ ನೆರವು ಒದಗಿಸುವಲ್ಲಿ ಉತ್ತಮ ಪ್ರಯತ್ನ ಮಾಡಿದೆ ಎಂದು ರಾಜ್ಯಪಾಲರು ಭಾಷಣದಲ್ಲಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಳೆದ ಜುಲೈನಲ್ಲಿ ರಾಜ್ಯದ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡ ಥಾವರ್ ಚಂದ್ ಗೆಹ್ಲೋಟ್ ಅವರು ಇದೇ ಮೊದಲ ಭಾರಿಗೆ ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ್ದಾರೆ. ಸಂವಿಧಾನದ 176 (1) ಕಲಂ ಪ್ರಕಾರ ವರ್ಷದ ಮೊದಲ ಅಧಿವೇಶನವನ್ನು ಉದ್ದೇಶಿಸಿ ರಾಜಪಾಲರು ಭಾಷಣ ಮಾಡುವುದು ಅವರಿಗೆ ಸಂವಿಧಾನವಾಗಿ ಬಂದ ಅಧಿಕಾರ. ಈ ಭಾಷಣದಲ್ಲಿ ಸರ್ಕಾರದ ಪ್ರಸಕ್ತ ವರ್ಷದ, ಮತ್ತು ಹಿಂದಿನ ವರ್ಷದ ಸಾಧನೆಗಳ ಅನಾವರಣ ಹಾಗೂ ನೀತಿ-ನಿಯಮಾವಳಿ, ಮುಂದೆ ಸಾಗಬೇಕಾದ ಮುನ್ನೋಟದ ಹಾದಿ ಸಂಕ್ಷಿಪ್ತವಾಗಿ ಪ್ರಸ್ತುತ ಪಡಿಸಲಾಗುತ್ತದೆ.

ಜನಪ್ರತಿನಿಧಿಗಳು ಮುಂಚೂಣಿಯಲ್ಲಿ ನಿಂತು ಸರ್ಕಾರದ ಜನ ಕಲ್ಯಾಣ ಕಾರ್ಯಕ್ರಮಗಳನ್ನು ರಾಜ್ಯದ ಜನತೆಗೆ ತಲುಪಿಸುವ ಕಾರ್ಯ ಮಾಡಬೇಕೆಂದೂ ಇದೇ ಸಂದರ್ಭದಲ್ಲಿ ಅವರು ಜನಪ್ರತಿನಿಧಿಗಳಿಗೆ ಕಿವಿಮಾತು ಹೇಳಿದರು.



Downloaded From: www.kpscvaani.com

## ಮಹಿಳೆಯರು ಉತ್ಪಾದಿಸುವ ಉತ್ಪನ್ನಗಳ ಮಾರಾಟಕ್ಕಾಗಿ

# ಅಮೆಜಾನ್‌ನೊಂದಿಗೆ ಒಪ್ಪಂದ











**ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರ ನೇತೃತ್ವದ ಸರ್ಕಾರವು ಮಹಿಳೆಯರ ಪರವಾಗಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದರಿಂದ ಹಿಡಿದು ಅವರನ್ನು ಸ್ವಾವಲಂಬಿಯಾಗಿಸುವ ತನಕ, ವಿವಿಧ ಇಲಾಖೆಗಳ ಮೂಲಕ ಹಲವು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ಇದಕ್ಕೆ ನಿದರ್ಶನವಾಗಿದೆ.**

ಡಾ.ಸಿ.ಎನ್. ಅಶ್ವತ್ಥನಾರಾಯಣ

ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆ. ಮಹಿಳಾ ದಿನಾಚರಣೆಗೆ ಇನ್ನು ಕೆಲವು ದಿನಗಳಿರುವಾಗಲೇ ಸರ್ಕಾರವು ಸ್ವಯಂ ರಕ್ಷಣೆಗೆ ಅನುಕೂಲವಾಗುವಂತೆ ಹೆಣ್ಣು ಮಕ್ಕಳಿಗೆ ವೀರ ವನಿತೆ ಒನಕೆ ಓಬವ್ವನ ಹೆಸರಿನಲ್ಲಿ **"ಓಬವ್ವ ಆತ್ಮರಕ್ಷಣೆ ಕಲೆ"** (ಕರಾಟೆ) ತರಬೇತಿಗೆ ಚಾಲನೆ ನೀಡಿದೆ.

ಅದೇ ರೀತಿ ಸ್ವಸಹಾಯ ಗುಂಪಿನ ಮಹಿಳೆಯರು ತಯಾರಿಸುವ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸಿಕೊಡುವ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿದ್ದು, ಮಹಿಳೆಯರು ತಯಾರಿಸಿದ ಉತ್ಪನ್ನಗಳ ಮಾರಾಟಕ್ಕೆ ಅಮೆಜಾನ್‌ನೊಂದಿಗೆ ಒಪ್ಪಂದ ಮಾಡಿಕೊಂಡಿದೆ. ಇದು ಹೆಣ್ಣುಮಕ್ಕಳು ಮತ್ತು ಮಹಿಳೆಯರ ಶ್ರೇಯೋಭಿವೃದ್ಧಿಯ ಕುರಿತು ಸರ್ಕಾರಕ್ಕಿರುವ ಕಾಳಜಿಯನ್ನು ತೋರಿಸುತ್ತದೆ. ಈ ಎರಡೂ ಯೋಜನೆಗಳು ವಿಶೇಷವಾಗಿ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳೆಯರಿಗೆ ಸರ್ಕಾರವು ನೀಡಿದ ಕೊಡುಗೆಯಾಗಿದೆ.

ಅಮೆಜಾನ್‌ನೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಕುರಿತು ಸ್ವತಃ ಕೌಶಲ್ಯಾಭಿವೃದ್ಧಿ, ಜೀವನೋಪಾಯ, ಉನ್ನತ ಶಿಕ್ಷಣ, ಐಟಿಬಿಟಿ ಸಚಿವರಾದ **ಡಾ.ಸಿ.ಎನ್. ಅಶ್ವತ್ಥನಾರಾಯಣ** ಅವರೇ ನಮ್ಮ ಪತ್ರಿಕೆಗೆ ಲೇಖನವನ್ನು ಬರೆದುಕೊಟ್ಟಿದ್ದಾರೆ.

ನಮ್ಮದು ಗ್ರಾಮೀಣ ಪ್ರದೇಶವೇ ಸಿಂಹಪಾಲಿರುವ ಒಂದು ಆರ್ಥಿಕ ವ್ಯವಸ್ಥೆ. ಹಾಗೆಯೇ, ನಮ್ಮ ಸಮಾಜದಲ್ಲಿ ಮಹಿಳೆಯರ ಸಂಖ್ಯೆ ಶೇಕಡ 50 ರಷ್ಟಿದೆ. ಒಂದು ದೇಶವಾಗಿ ನಾವು ಆರ್ಥಿಕ ದೃಷ್ಟಿಯಿಂದ ಪ್ರಬಲರಾಗಬೇಕೆಂದರೆ, ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರನ್ನು ಕೂಡ ನಾವು ಈ ಬೆಳವಣಿಗೆಯ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲೇಬೇಕು. ಇಲ್ಲದಿದ್ದರೆ, ಆರ್ಥಿಕ ಪ್ರಗತಿಯೆನ್ನುವುದು ಗಗನ ಕುಸುಮವಾಗಿಯೇ ಉಳಿಯುತ್ತದೆ ಎನ್ನುವುದು ಈಗ ಎಲ್ಲರಿಗೂ ಗೊತ್ತಾಗಿರುವ ಸಂಗತಿಯಾಗಿದೆ.



Downloaded From: www.kpscvaani.com



ಈ ಸತ್ಯದ ಸಾಕ್ಷಾತ್ಕಾರದ ಫಲವೇ, 'ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್' (ನ್ಯಾಷನಲ್ ರೂರಲ್ ಲೈವ್ಲಿಹುಡ್ ಮಿಷನ್) ಯೋಜನೆಯ ಪರಿಕಲ್ಪನೆ. ಬಿಜೆಪಿ ಸಂಸ್ಥಾಪಕರಲ್ಲಿ ಒಬ್ಬರಾದ ಮತ್ತು ಕಾಂಗ್ರೆಸ್ಸಿಗೆ ಪರ್ಯಾಯವಾದ ರಾಜಕೀಯ ಸಿದ್ಧಾಂತವನ್ನು ರೂಪಿಸಿದವರಲ್ಲಿ ಅಗ್ರಗಣ್ಯರಾದ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಗೌರವಾರ್ಥವಾಗಿ 2015ರಲ್ಲಿ ಈ ಯೋಜನೆಗೆ 'ದೀನದಯಾಳ್ ಅಂತ್ಯೋದಯ ಯೋಜನೆ-ಎನ್ ಆರ್ ಎಲ್ ಎಂ' ಎಂದು ಮರುನಾಮಕರಣ ಮಾಡಲಾಯಿತು. ಏಕೆಂದರೆ, ಬಡತನ ನಿರ್ಮೂಲನೆಯನ್ನೇ ಗುರಿಯಾಗಿ ಪ್ರತಿಪಾದಿಸಿರುವ 'ಅಂತ್ಯೋದಯ' ಪರಿಕಲ್ಪನೆಯ ಜನಕರು ಇದೇ ದೀನದಯಾಳರು. ಇದಿಷ್ಟು ಈ ಯೋಜನೆಯ ಸ್ಥೂಲ ಹಿನ್ನೆಲೆಯಾಗಿದೆ.

ಗ್ರಾಮೀಣ ಪ್ರದೇಶಗಳ ಬಡ ಕುಟುಂಬಗಳ ಆದಾಯವರ್ಧನೆಗೆ ಬೇಕಾದ ಸಾಂಸ್ಥಿಕ ವ್ಯವಸ್ಥೆಯನ್ನು ಒದಗಿಸುವುದು ಮತ್ತು ಈ ಮೂಲಕ ಸುಸ್ಥಿರ ಬದುಕನ್ನು ಕಟ್ಟಿಕೊಳ್ಳುವಂತೆ ಮಾಡುವುದು ಈ ಯೋಜನೆಯ ಪ್ರಧಾನ ಉದ್ದೇಶ. ಇದಕ್ಕಾಗಿ, ಆರ್ಥಿಕ ಸೇವೆಗಳು ಅವರ ಕೈಗೆಟುಕುವುಂತೆ ಮಾಡುವ ಆಶಯವೂ ಇದಕ್ಕೆ ಪೂರಕವಾಗಿದೆ. 8–10 ವರ್ಷಗಳ ಅವಧಿಯಲ್ಲಿ ದೇಶದ 7ರಿಂದ 10 ಕೋಟಿ ಗ್ರಾಮೀಣ ಕುಟುಂಬಗಳಿಗೆ ಈ ಯೋಜನೆಯನ್ನು ಪರಿಣಾಮಕಾರಿಯಾಗಿ

**ಮಹಿಳಾ ಸ್ವಸಹಾಯ ಸಂಘಗಳ ವಹಿವಾಟನ್ನು ಇನ್ನು ಆರು ತಿಂಗಳಲ್ಲಿ ಡಿಜಿಟಲೀಕರಣ ಗೊಳಿಸಲಾಗುತ್ತಿರುವುದರಿಂದ ಅಕ್ರಮಗಳಿಗೆ ಆಸ್ಪದವಿರುವುದಿಲ್ಲ. ಹಾಗಾಗಿ ಮಾರಾಟ ಮಾಡುವವರು ಮತ್ತು ಗ್ರಾಹಕರ ನಡುವೆ ಪಾರದರ್ಶಕವಾಗಿ ವ್ಯವಹಾರ ನಡೆಯುವುದರಿಂದ ಮಧ್ಯವರ್ತಿಗಳ ಕಾಟ ಇರುವುದಿಲ್ಲ.**

ತಲುಪುವಂತೆ ಮಾಡುವ ಕನಸಿತ್ತು. ಇದಕ್ಕೆ ವೇಗ ಮತ್ತು ಶಕ್ತಿ ಎರಡೂ ಒದಗಬೇಕೆಂದರೆ, ಮಹಿಳಾ ಸ್ವಸಹಾಯ ಸಂಘಗಳನ್ನು ಇಡೀ ಯೋಜನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕೆಂಬುದು ದೀರ್ಘ ಆಲೋಚನೆ ಮತ್ತು ಸಮಾಲೋಚನೆಗಳ ನಂತರ ಮೂಡಿಬಂದ ಒಂದು ಅತ್ಯುತ್ತಮ ನಿರ್ಧಾರ ಎನ್ನುವುದರಲ್ಲಿ ಎರಡು ಮಾತಿಲ್ಲ.

2015ರಲ್ಲಿ ಈ ಯೋಜನೆಯನ್ನು ಪರಿಷ್ಕರಿಸಿದಾಗ, 'ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆ'ಯ ಸ್ವರೂಪವನ್ನು ಮಾದರಿಯನ್ನಾಗಿ ಇಟ್ಟುಕೊಳ್ಳಲಾಗಿದೆ ಎನ್ನುವುದು ನಾವಿಲ್ಲಿ ಗಮನಿಸಬೇಕಾದ ಅಂಶವಾಗಿದೆ. ಇದಿಷ್ಟೇ ಅಲ್ಲ, ಯಾವುದೇ ಯೋಜನೆಯ ಯಶಸ್ಸಿಗೆ ನಾವು ಸಮಕಾಲೀನ ದೃಷ್ಟಿ, ಕಾರ್ಯತಂತ್ರ ಮುಂತಾದವನ್ನು ಕೂಡ ಹೊಂದಿರಬೇಕು. ಇಲ್ಲದೆ ಹೋದರೆ, ಒಳ್ಳೆಯ ಗುರಿಯುಳ್ಳ ಯೋಜನೆಗಳೆಲ್ಲವೂ ಘೋಷಣೆಗಳ ಹಂತದಲ್ಲೇ ಉಳಿದು ಬಿಡುತ್ತವೆ. ಇದಕ್ಕೆ ತಕ್ಕಂತೆ, ಎನ್ ಆರ್ ಎಲ್ ಎಂ ಯೋಜನೆಯನ್ನು ಈಗ 'ಆತ್ಮನಿರ್ಭರ ಭಾರತ' ನಿರ್ಮಾಣದ ಯೋಜನೆಯ ಜತೆ ಬೆಸೆಯಲಾಗಿದೆ. 2020ರಲ್ಲಿ ಇಡೀ ಯೋಜನೆಗೆ ಬೇಕಾದ ಮಾರುಕಟ್ಟೆ ವ್ಯವಸ್ಥೆಗಾಗಿ ಫ್ಲಿಫ್-ಕಾರ್ಟ್ ಕಂಪನಿಯ ಜತೆ ಕೇಂದ್ರ ಸರಕಾರವು ಒಡಂಬಡಿಕೆ ಮಾಡಿಕೊಂಡಿತು. ಈಗ ನಮ್ಮ ರಾಜ್ಯದಲ್ಲಿ ಇದನ್ನು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ತೆಗೆದುಕೊಂಡು ಹೋಗಲಾಗುತ್ತಿದ್ದು, ಅಮೆಜಾನ್ ಕಂಪನಿಯು 'ಸಂಜೀವಿನಿ' ಯೋಜನೆಯೊಂದಿಗೆ ಕೈ ಜೋಡಿಸುವಂತೆ ಮಾಡಲಾಗುತ್ತಿದೆ.

ನಮ್ಮ ಗ್ರಾಮೀಣ ಆರ್ಥಿಕತೆಯು ಇಡೀ ದೇಶದ ಅರ್ಥವ್ಯವಸ್ಥೆಯ ಬೆನ್ನೆಲುಬು ಎನ್ನುವುದು ವಾಸ್ತವ. ಕೃಷಿ, ಕೃಷಿಯಿಂದ ಬರುವ ಉಪೋತ್ಪನ್ನಗಳು, ಅದರಿಂದ ಮಹಿಳೆಯರಿಗೆ ಸಿಗುವ ಪ್ರಯೋಜನ, ಅಂತಿಮವಾಗಿ ಸಾಧಿಸಬಹುದಾದ ಆರ್ಥಿಕ ಸಬಲೀಕರಣ ಇವೆಲ್ಲ ಒಂದಕ್ಕೊಂದು ನಿಕಟ ಸಂಬಂಧ ಹೊಂದಿವೆ. ಇಲ್ಲಿ ಒಂದಿಲ್ಲದೆ ಇನ್ನೊಂದಿಲ್ಲ. ಇವನ್ನೆಲ್ಲ ಗರಿಷ್ಠ ಮಟ್ಟಕ್ಕೆ ಉಪಯೋಗಿಸಿಕೊಂಡು, ಗ್ರಾಮೀಣ ಬಡಕುಟುಂಬಗಳಲ್ಲಿ ವರ್ಷಕ್ಕೆ 1 ಲಕ್ಷ ರೂಪಾಯಿಯಷ್ಟಾದರೂ ವರಮಾನ ಸೃಷ್ಟಿಸಬೇಕೆನ್ನುವುದು ಎನ್ ಆರ್ ಎಲ್ ಎಂ ನ ಗುರಿಯಾಗಿದೆ.



Downloaded From: www.kpscvaani.com

ಸ್ವಸಹಾಯ ಸಂಘಗಳು ತಯಾರಿಸುವ ಉತ್ಪನ್ನಗಳಿಗಂತೂ ಮಾರುಕಟ್ಟೆಯಲ್ಲಿ ಅಪಾರ ಬೇಡಿಕೆ ಇದೆ. ನಿಜ ಹೇಳಬೇಕೆಂದರೆ, ವಿದೇಶಗಳಲ್ಲೂ ಈ ವಸ್ತುಗಳಿಗೆ ಗಮನಾರ್ಹ ಕಿಮ್ಮತ್ತಿದೆ. ಈ ಅವಕಾಶವನ್ನು ನಮ್ಮದನ್ನಾಗಿ ಮಾಡಿಕೊಂಡು, ಆರ್ಥಿಕ ಲಾಭವನ್ನು ಕಾಣಬೇಕೆಂದರೆ, ಇ-ಕಾಮರ್ಸ್ ಸ್ವರೂಪದ ವಹಿವಾಟನ್ನು ಅಳವಡಿಸಿಕೊಳ್ಳುವುದು ಅನಿವಾರ್ಯ ಮತ್ತು ಸಹಜ. ಈಗ ನಿದರ್ಶನಕ್ಕೆ ಹೇಳುವುದಾದರೆ, ಫ್ಲಿಫ್-ಕಾರ್ಟ್ ಜತೆ ವಹಿವಾಟು ಒಡಂಬಡಿಕೆ ಮಾಡಿಕೊಂಡಿರುವುದರಿಂದ 10 ಕೋಟಿಗಿಂತಲೂ ಹೆಚ್ಚು ಗ್ರಾಹಕರಿಗೆ ಸ್ವಸಹಾಯ ಸಂಘದ ಉತ್ಪನ್ನಗಳನ್ನು ಮಾರಾಟ ಮಾಡಬಹುದು. ಇದು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಒಂದು ವರದಾನವೇ ಸೈ! ಇದರಿಂದಾಗಿ ನೇಕಾರಿಕೆ, ಕರಕುಶಲ ಕಲೆಗಳು ಮತ್ತು ಕುಶಲಕರ್ಮಿಗಳಲ್ಲಿ ತೊಡಗಿಕೊಂಡಿರುವ ಮಹಿಳೆಯರಿಗೆ ಒಂದು ಅಂತರರಾಷ್ಟ್ರೀಯ ಮಾರುಕಟ್ಟೆ ಸುಲಭವಾಗಿ ಸಿಕ್ಕಿಬಿಡುತ್ತದೆ.

ಕರ್ನಾಟಕದಲ್ಲಿ ಈ 'ಸಂಜೀವಿನಿ- ಎನ್ ಆರ್ ಎಲ್ ಎಂ ಯೋಜನೆ'ಯು ನಮ್ಮ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯಡಿ ಬರುತ್ತದೆ. ಇಲ್ಲಿ ನಾವು ಮುಖ್ಯವಾಗಿ ಸಾಮಾಜಿಕ ಮತ್ತು ಆರ್ಥಿಕ ಒಳಗೊಳ್ಳುವಿಕೆ ಎರಡನ್ನೂ ಸಾಧಿಸುವ ಗುರಿ ಹೊಂದಿದೆ. ಇದಕ್ಕಾಗಿ ಕೌಶಲ್ಯಗಳ ಪೂರೈಕೆ, ಬ್ರ್ಯಾಂಡಿಂಗ್ ತರಬೇತಿ, ಗ್ರಾಹಕರ ಬೇಕು-ಬೇಡಗಳು, ಬೇಡಿಕೆ ಮತ್ತು ಪೂರೈಕೆ ಸರಪಳಿಯ ತಿಳಿವಳಿಕೆ, ಉತ್ಪನ್ನಗಳ ಫಿನಿಶಿಂಗ್, ಮಾರುಕಟ್ಟೆ ಸಂವಹನ- ಇತ್ಯಾದಿ ತರಬೇತಿಗಳನ್ನೆಲ್ಲ ಉಚಿತವಾಗಿ ಕೊಡಲಾಗುತ್ತದೆ. ಈಗ ಇವೆಲ್ಲವೂ ಉದ್ಯೋಗಸೃಷ್ಟಿಯ ಹೆದ್ದಾರಿಗಳಾಗಿವೆ; ಜತೆಗೆ, ರಾಜ್ಯದಲ್ಲಿ, ಅದರಲ್ಲೂ ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಬೆಳೆಸುತ್ತಿವೆ.

ನಮ್ಮ ಗ್ರಾಮೀಣ ಮಹಿಳೆಯರು ಹೆಚ್ಚಾಗಿ ಉತ್ಪಾದಿಸುತ್ತಿರುವ ಉತ್ಪನ್ನಗಳೆಂದರೆ- ಗೃಹಾಲಂಕಾರ, ಗೃಹ ಕಚೇರಿ ವಸ್ತುಗಳು, ತಿಂಡಿ-ತಿನಿಸುಗಳು, ನಿತ್ಯಜೀವನದಲ್ಲಿ ಉಪಯೋಗಕ್ಕೆ ಬರುವ ಪದಾರ್ಥಗಳು ಇತ್ಯಾದಿ. ಸಹಜವಾಗಿಯೇ ಇವು ಮಹಿಳೆಯರು ತೀವ್ರ ಆಸಕ್ತಿಯಿಂದ ತೊಡಗಿಕೊಳ್ಳುವಂತಹ ಕ್ಷೇತ್ರಗಳಾಗಿವೆ. ಉಪಯುಕ್ತತೆ ಮತ್ತು ಅಭಿರುಚಿಗಳು ಇವುಗಳ ಹಿಂದೆ ಕೆಲಸ ಮಾಡುತ್ತಿರುವ ಅಂಶಗಳಾಗಿವೆ.

ಇವನ್ನೆಲ್ಲ ಮಾರುಕಟ್ಟೆಗೆ ತಲುಪಿಸಿ, ಇವು ಕಟ್ಟಕಡೆಯ ಗ್ರಾಹಕನನ್ನೂ ಸೆಳೆಯುವಂತೆ ಮಾಡಬೇಕೆನ್ನುವುದು ನಮ್ಮ ಸಂಕಲ್ಪ. ಹೀಗಾಗಿ, ನಾವೀಗ ರಾಜ್ಯದಲ್ಲಿ ಅಮೆಜಾನ್ ಕಂಪನಿಯೊಂದಿಗೂ ಒಡಂಬಡಿಕೆ ಮಾಡಿಕೊಂಡಿದ್ದೇವೆ. ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿಯವರೂ ಇದಕ್ಕೆ ಸಾಕ್ಷಿಯಾಗಿದ್ದಾರೆ. ಬಡತನವನ್ನು ಸೋಲಿಸಲು ಮತ್ತು ಬಡವರು ಹಾಗೂ ಮಹಿಳೆಯರಲ್ಲಿರುವ ಅಗಾಧ ಪ್ರತಿಭೆಯನ್ನು ಅಭಿವೃದ್ಧಿಯ ಗತಿಯಲ್ಲಿ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಲು ಇಂತಹ ಉಪಕ್ರಮಗಳು ಕಾಲದ ಅಗತ್ಯಗಳಾಗಿವೆ.



ಹೇಳಿಕೇಳಿ ಇದು ಡಿಜಿಟಲ್ ಯುಗ. ಕಲಿಕೆಯಿಂದ ಹಿಡಿದು ಗಳಿಕೆಯವರೆಗೆ, ಕಲ್ಪನೆಯಿಂದ ಹಿಡಿದು ಅನುಷ್ಠಾನದವರೆಗೆ, ಉತ್ಪನ್ನ ಸೃಷ್ಟಿಯಿಂದ ಹಿಡಿದು ಅದರ ಬಿಕರಿಯವರೆಗೆ ಎಲ್ಲವೂ ಇವತ್ತು ಈ ಆಧುನಿಕ ತಂತ್ರಜ್ಞಾನವನ್ನು ಅವಲಂಬಿಸಿವೆ. ತಂತ್ರಜ್ಞಾನವಿಲ್ಲದೆ ಜಗತ್ತನ್ನು ಕಲ್ಪಿಸಿಕೊಳ್ಳುವುದೂ ಸಾಧ್ಯವಿಲ್ಲ ಅಲ್ಲವೇ? ಇದನ್ನೆಲ್ಲ ನಾವು ಮಿಂಚಿನ ವೇಗದಲ್ಲಿ ಗ್ರಹಿಸಬೇಕು. ಇಲ್ಲದೆ ಹೋದರೆ, ಸುವರ್ಣಾವಕಾಶಗಳನ್ನು ನಾವು ಕಳೆದುಕೊಳ್ಳುತ್ತೇವೆ. ಇದು ಸಾಧ್ಯವಾಗಬೇಕೆಂದರೆ, ನಾವು ಗತಕಾಲದ ರೀತಿಯ ಚಿಂತನೆಯ ಕ್ರಮಗಳಿಂದ ಹೊರಬರಬೇಕು. ಏಕೆಂದರೆ, ನಾವು ನಮಗೆ ಗೊತ್ತಿರಲಿ, ಬಿಡಲಿ, ಜಾಗತಿಕ ಸ್ಪರ್ಧೆಯನ್ನು ಎದುರಿಸುತ್ತಿರುತ್ತೇವೆ.

ಹೀಗಾಗಿಯೇ, ಮಹಿಳಾ ಸ್ವಸಹಾಯ ಸಂಘಗಳ ವಹಿವಾಟವನ್ನು ಇನ್ನು ಆರು ತಿಂಗಳಲ್ಲಿ ಸಂಪೂರ್ಣ ಡಿಜಿಟಲೀಕರಣಗೊಳಿಸುತ್ತಿದ್ದೇವೆ. ಇಲ್ಲಿ ಎಲ್ಲವೂ ಪಾರದರ್ಶಕವಾಗಿ ನಡೆಯುವುದರಿಂದ ಅಕ್ರಮಗಳಿಗೆ ಆಸ್ಪದವಿರುವುದಿಲ್ಲ. ಜತೆಗೆ, ಮಾರಾಟ ಮಾಡುವವರು ಮತ್ತು ಗ್ರಾಹಕರ ನಡುವೆ ಮಧ್ಯವರ್ತಿಗಳ ಕಾಟ ಇರುವುದಿಲ್ಲ. ಅಮೆಜಾನ್ ಕಂಪನಿಯ ಜತೆಗಿನ ಒಡಂಬಡಿಕೆಯಿಂದಾಗಿ ಸೃಷ್ಟಿಯಾಗುವ ಆನ್‌ಲೈನ್ ಮಾರುಕಟ್ಟೆಯ ಆರಂಭದಲ್ಲಿ 53 ಉತ್ಪನ್ನಗಳು ಸಿಗಲಿವೆ. ಇನ್ನು ಕೆಲವೇ ದಿನಗಳಲ್ಲಿ, ಅಂದರೆ ಮಾರ್ಚ್ ತಿಂಗಳ ಕೊನೆಯ ಹೊತ್ತಿಗೆ ಈ ಉತ್ಪನ್ನಗಳ ಸಂಖ್ಯೆ 200ಕ್ಕೆ ಏರಲಿದೆ. ಇದಕ್ಕಾಗಿ, ಬೆಂಗಳೂರಿನ 'ಮೈಶುಗರ್' ಕಟ್ಟಡದಲ್ಲಿ ಗೋದಾಮು ವ್ಯವಸ್ಥೆಯನ್ನೂ ಕೌಶಲ್ಯಾಭಿವೃದ್ಧಿ ಇಲಾಖೆಯಿಂದ ಕಲ್ಪಿಸಲಾಗಿದೆ.

ಆರ್ಥಿಕ ಶಕ್ತಿಯ ಈ ಯುಗದಲ್ಲಿ ನಾವು ಮಹಿಳೆಯರನ್ನು ಸಾಂಪ್ರದಾಯಿಕ ಜೀವನ ಕ್ರಮಗಳಿಗೆ ಕಟ್ಟಿ ಹಾಕುವುದು ಸಾಧ್ಯವಿಲ್ಲ. ಅವರು ರಾಜ್ಯದ ಮತ್ತು ದೇಶದ ಬೆಳವಣಿಗೆಯಲ್ಲಿ ಮಹತ್ತರ ಮತ್ತು ನಿರ್ಣಾಯಕ ಪಾತ್ರವನ್ನು ವಹಿಸಬಲ್ಲ ಶಕ್ತಿ-ಸಾಮರ್ಥ್ಯಗಳನ್ನೂ ಜಾಣ್ಮೆಯನ್ನೂ ಉಳ್ಳವರಾಗಿದ್ದಾರೆ. ರಾಜ್ಯದಲ್ಲಂತೂ ಲಕ್ಷಾಂತರ ಮಹಿಳೆಯರು ಸ್ವಸಹಾಯ ಸಂಘಗಳಲ್ಲಿ ಸಕ್ರಿಯರಾಗಿದ್ದಾರೆ. ಇವರ ಆರ್ಥಿಕ ಸಬಲೀಕರಣಕ್ಕೆ 'ಸಂಜೀವಿನಿ' ಯೋಜನೆಯು ಹೆಸರಿಗೆ ತಕ್ಕಂತೆ ಒದಗಿ ಬಂದಿದೆ. ಅದಕ್ಕೆ ಬೇಕಾದ ಎಲ್ಲ ಅನುಕೂಲ, ಬೆಂಬಲ, ಕಾರ್ಯಕ್ರಮ, ಪ್ರೋತ್ಸಾಹಗಳನ್ನೆಲ್ಲ ಕೊಡಲು ಸರಕಾರ ಬದ್ಧವಾಗಿದೆ. ಮನೆಯನ್ನು ಕಟ್ಟಿ ಕಾಯುವ ಕೈಗಳು ದೇಶವನ್ನೂ ಕಟ್ಟಿ ಕಾಯಲಿ! ಈ ಮೂಲಕ ನವ ಕರ್ನಾಟಕ ಮತ್ತು ನವಭಾರತದ ಸೃಷ್ಟಿ-ಸಾಕಾರಗಳು ಸಾಧ್ಯವಾಗಲಿ!! ■



Downloaded From: www.kpscvaani.com



## ಸರ್ಕಾರದಿಂದ ಹೆಣ್ಣುಮಕ್ಕಳಿಗೆ

# ಓಬವ್ವ ಆತ್ಮರಕ್ಷಣೆ ಕಲೆ ತರಬೇತಿ

ಶ್ರೀನಿಕಾ

**ರಾಜ್ಯ ಸರ್ಕಾರವು ಹೆಣ್ಣುಮಕ್ಕಳ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಹಾಕಿಕೊಳ್ಳುತ್ತಿದ್ದು, ಈಗ ಅನಿರೀಕ್ಷಿತ ಸಂದರ್ಭಗಳಲ್ಲಿ ತಮ್ಮ ರಕ್ಷಣೆಯನ್ನು ಮಾಡಿಕೊಳ್ಳುವಷ್ಟರಮಟ್ಟಿಗೆ ಆತ್ಮರಕ್ಷಣೆ ಕಲೆಯನ್ನು ಕಲಿಸಲು ಮುಂದಾಗಿದೆ.**

**ಸ**ಬಲೀಕರಣಗೊಂಡ ಮಹಿಳೆ ದೇಶದ ಅಮೂಲ್ಯ ಸಂಪನ್ಮೂಲ. ಕುಟುಂಬದ ಲಾಲನೆ, ಪೋಷಣೆ ಮಾತ್ರವಲ್ಲದೆ ಎಲ್ಲಾ ರಂಗಗಳಲ್ಲೂ ಮಹಿಳೆ ತನ್ನ ಛಾಪು ಒತ್ತುವ ಮೂಲಕ ನಾಡಿನ ಅಭಿವೃದ್ಧಿಗೆ ಕಾಣಿಕೆ ನೀಡುತ್ತಿದ್ದಾಳೆ. ಆದರೆ ಅಂತಹ ಘನ ಮಹಿಳಾ ಸಮುದಾಯಕ್ಕೆ ಸೇರಿದ ಕೆಲವರು ಸಾಮಾಜಿಕ ಪರಿಸರದಲ್ಲಿ ಆಗಾಗ್ಗೆ ಕೆಲವು ರೀತಿಯ ದೌರ್ಜನ್ಯಕ್ಕೆ ಒಳಗಾಗುವ ಪ್ರಕರಣಗಳು ನಡೆಯುತ್ತಿವೆ. ಇಂತಹ ಪರಿಸ್ಥಿತಿಗಳನ್ನು ಧೈರ್ಯವಾಗಿ ನಿರ್ವಹಿಸಲು ಹೆಣ್ಣು ಮಕ್ಕಳನ್ನು ಓದುವ ದಿನಗಳಲ್ಲೇ ಸನ್ನದ್ಧಗೊಳಿಸಬೇಕೆಂಬ ಧ್ಯೇಯದೊಂದಿಗೆ **'ಓಬವ್ವ ಆತ್ಮರಕ್ಷಣೆ ಕಲೆ'** ತರಬೇತಿ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ.

ಚಿತ್ರದುರ್ಗದ ಪಾಳೆಗಾರ ಮದಕರಿನಾಯಕನ ಸುಪರ್ದಿನಲ್ಲಿದ್ದ ಕೋಟೆಯ ಮೇಲೆ ಶತ್ರು ಪಾಳಯ ದಾಳಿ ಮಾಡಿದಾಗ ಒನಕೆಯನ್ನೇ ಅಸ್ತ್ರವನ್ನಾಗಿಸಿಕೊಂಡು ಆಕೆ ಹೋರಾಡಿದ ರೀತಿ ಎಲ್ಲರಿಗೂ ಸ್ಫೂರ್ತಿದಾಯಕ. ದಾಳಿಕೋರರ ಎದುರು ಕೆಚ್ಚೆದೆಯಿಂದ ಹೋರಾಡಿದ ಓಬವ್ವ ಶೌರ್ಯ, ಪರಾಕ್ರಮ, ಧೀರೋದಾತ್ತತೆ, ದೃಢಸಂಕಲ್ಪ, ನಾಡಪ್ರೇಮಗಳ ಸಂಕೇತವಾಗಿದ್ದಾಳೆ. ನಾಡಿನ ಇತರೆ ವೀರ ವನಿತೆಯರಾದ ಕಿತ್ತೂರು ಚೆನ್ನಮ್ಮ, ಬೆಳವಾಡಿ ಮಲ್ಲಮ್ಮರಂತೆ ಒನಕೆ ಓಬವ್ವ ಕೂಡ ಪುರುಷ-ಮಹಿಳೆ ಎಂಬ ಭೇದವಿಲ್ಲದೆ ಎಲ್ಲರಿಗೂ ಪ್ರಚಂಡ ಶಕ್ತಿಯ ಪ್ರತೀಕವಾಗಿದ್ದಾಳೆ.

ಆಕೆಯ ದೃಢ ವ್ಯಕ್ತಿತ್ವವು ಜನಪ್ರಿಯ ಸಿನಿಮಾ 'ನಾಗರಹಾವು' ಸೇರಿದಂತೆ ಕೆಲವು ಚಲನಚಿತ್ರಗಳಿಗೂ ಪ್ರೇರಣೆಯಾಗಿದೆ. ಹೀಗೆ, ಶತಮಾನಗಳು ಕಳೆದರೂ ಜನಮಾನಸದಲ್ಲಿ ಅಚ್ಚಳಿಯದ ಛಾಪೊತ್ತಿರುವ ಆಕೆಯ ಪ್ರೇರಣಾದಾಯಕತೆಯನ್ನು ಗಮನದಲ್ಲಿರಿಸಿಕೊಂಡು ಈ ತರಬೇತಿ ಕಾರ್ಯಕ್ರಮವನ್ನು **'ಒನಕೆ ಓಬವ್ವ'** ಹೆಸರಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ (ಕ್ರೈಸ್)ದ ಮೂಲಕ ಇದು ಜಾರಿಗೊಳ್ಳುತ್ತಿದೆ.

ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಧಾನಸೌಧದ ಮುಂದೆ ಫೆಬ್ರವರಿ 6ರಂದು ನಡೆದ ಕಾರ್ಯಕ್ರಮದಲ್ಲಿ ಈ ಮಹತ್ವಾಕಾಂಕ್ಷಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ, ಒನಕೆ ಓಬವ್ವನ ಸ್ಫೂರ್ತಿದಾಯಕ ವ್ಯಕ್ತಿತ್ವವನ್ನು ನೆನೆಸಿಕೊಂಡ ಅವರು, ಹೆಣ್ಣುಮಕ್ಕಳಿಗೆ **'ಓಬವ್ವ ಆತ್ಮರಕ್ಷಣೆ ಕಲೆ ತರಬೇತಿ'** ನೀಡುವುದಕ್ಕಾಗಿ 12 ಪೊಲೀಸ್ ತರಬೇತಿ ಶಾಲೆಗಳನ್ನು ಸಜ್ಜುಗೊಳಿಸಲು ಗೃಹ ಇಲಾಖೆಗೆ ಸೂಚಿಸಲಾಗಿದೆ ಎಂದು ಪ್ರಕಟಿಸಿದರು. ಮಹಿಳೆಯರಿಗೆ ಸಮಾಜದಲ್ಲಿ ಸುರಕ್ಷತೆಯ ಭಾವ ಮೂಡಿಸುವ ದಿಸೆಯಲ್ಲಿ ಕಾನೂನು, ಶಿಕ್ಷಣ, ಗೃಹ ಮತ್ತಿತರ ಇಲಾಖೆಗಳು ಪ್ರಮುಖ ಪಾತ್ರವಹಿಸಬೇಕು ಎಂದೂ ಅವರು ಸೂಚಿಸಿದ್ದಾರೆ.

ಇದೇ ಸಂದರ್ಭದಲ್ಲಿ, ತಮ್ಮ ಸಂಪುಟ ಸಹೋದ್ಯೋಗಿಗಳಾದ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ



Downloaded From: www.kpscvaani.com

## ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗಾಗಿ ಹಮ್ಮಿಕೊಂಡಿರುವ ಯೋಜನೆಗಳು:

- ಪ್ರೌಢಶಾಲಾ ವಿದ್ಯಾರ್ಥಿನಿಯರಿಗೆ ಮುಖ್ಯಮಂತ್ರಿ ರೈತ ವಿದ್ಯಾ ನಿಧಿ ಯೋಜನೆ ಸೌಲಭ್ಯ.
- ವಿಧವಾ ವೇತನವನ್ನು 600 ರೂ ಗಳಿಂದ 800 ರೂಗಳಿಗೆ ಏರಿಕೆ.
- ಅಮೃತ ಸ್ವ-ಸಹಾಯ ಕಿರು ಉದ್ದಿಮೆ ಯೋಜನೆಯಡಿ 7500 ಮಹಿಳಾ ಸ್ವ-ಸಹಾಯ ಗುಂಪುಗಳನ್ನು ಕಿರು ಉದ್ದಿಮೆಗಳನ್ನಾಗಿ ಪರಿವರ್ತಿಸುವ ದೃಷ್ಟಿಯಿಂದ ಪ್ರತಿ ಗುಂಪಿಗೆ 1.00 ಲಕ್ಷ ರೂ ಮೂಲಧನ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಕಿರುಸಾಲ ಯೊಜನೆಯಡಿ 3868 ಮಹಿಳಾ ಸ್ವಸಹಾಯ ಸಂಘದ ಸದಸ್ಯರಿಗೆ ರೂ 9.67 ಕೋಟಿ ವೆಚ್ಚದಲ್ಲಿ ಸಾಲ ಮತ್ತು ಸಹಾಯಧನ ಒದಗಿಸಲಾಗಿದೆ.
- ದುಡಿಯುವ ಮಹಿಳೆಯರ ಮಕ್ಕಳ ಆರೈಕೆಗಾಗಿ ರಾಜ್ಯದ 22 ಜಿಲ್ಲೆಗಳ ಜಿಲ್ಲಾ ಪಂಚಾಯತ್ ಕಚೇರಿಗಳಲ್ಲಿ ಹಾಗೂ 8 ಜಿಲ್ಲೆಗಳ ಜಿಲ್ಲಾ ಆಸ್ಪತ್ರೆಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಮಾರ್ಗಸೂಚಿಗಳನ್ನು ಹೊರಡಿಸಲು ಕ್ರಮವಹಿಸಲಾಗುತ್ತಿದೆ.
- ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಮಹಿಳಾ ಸ್ವಸಹಾಯ ಗುಂಪುಗಳ ಉತ್ಪನ್ನಗಳನ್ನು ಮಾರಾಟ ಮಾಡಲು ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳ ಏರ್ಪಡಿಸಲು ಪ್ರತಿ ವಿಭಾಗಕ್ಕೆ ರೂ 15.00 ಲಕ್ಷದಂತೆ ಒಟ್ಟು 60.00 ಲಕ್ಷ ರೂ ಅನುದಾನ ಬಿಡುಗಡೆಗೊಳಿಸಲಾಗಿದೆ.
- ಮಹಿಳಾಪರ ಚಿಂತನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಅವರ ಮೇಲ್ವಿಚಾರಣೆಯಲ್ಲಿ ಮಹಿಳೆಯರ ರಕ್ಷಣೆ ಮತ್ತು ಸಬಲೀಕರಣ ಅಭಿಯಾನಕ್ಕೆ ಅನುಮೋದನೆ ನೀಡಲಾಗಿದೆ.
- ಮಹಿಳಾ ಸುರಕ್ಷತೆಗಾಗಿ ಮೊಬೈಲ್ ಆ್ಯಪ್ ಅಭಿವೃದ್ಧಿ.
- 5000 ಬಸ್ಸುಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ ಸಿಸಿಟಿವಿ ಕ್ಯಾಮರಾ ಅಳವಡಿಕೆ.
- ಬೆಂಗಳೂರಿನಲ್ಲಿ ಸೇಫ್ ಸಿಟಿ ಯೋಜನೆಯಡಿ 18 ಕೋಟಿ ರೂ ವೆಚ್ಚದಲ್ಲಿ, ನಿರ್ಭಯ ಕಟ್ಟಡಗಳನ್ನು ಮತ್ತು ಮಹಿಳಾ ಪೊಲೀಸ್ ಔಟ್ ಪೋಸ್ಟ್‌ಗಳನ್ನು ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ.
- ರಾಜ್ಯದಲ್ಲಿ ಮಹಿಳಾ ನವೋದ್ಯಮಿಗಳನ್ನು ಬೆಂಬಲಿಸಲು ಕಾರ್ಯಕ್ರಮ ಅನುಷ್ಠಾನಕ್ಕೆ ಆದೇಶ ಹೊರಡಿಸಲಾಗಿದೆ.



ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಾದ ಹಾಲಪ್ಪ ಆಚಾರ್ ಅವರೊಂದಿಗೆ ಕುಳಿತು ಬಾಲಕಿಯರು ಪ್ರದರ್ಶಿಸಿದ ಆತ್ಮರಕ್ಷಣೆ ಕಲೆಯನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಸೇನೆಯಲ್ಲಿ ಮಹಿಳಾ ಸೈನಿಕರಿಗೆ ನೀಡಲಾಗುವ ತರಬೇತಿಗೆ ಸರಿಸಮಾನವಾದ ಮಟ್ಟದಲ್ಲಿ ತರಬೇತಿ ನೀಡಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿದೆ. ಇಂತಹ ತರಬೇತಿ ಪಡೆಯುವುದರಿಂದ ಹೆಣ್ಣುಮಕ್ಕಳಲ್ಲಿ ಆತ್ಮಸ್ಥೈರ್ಯ ಹೆಚ್ಚಲಿದೆ. ಸರ್ಕಾರವು ತಮ್ಮ ಮಕ್ಕಳ ಸುರಕ್ಷತೆಗಾಗಿ ಕರಾಟೆ ಕಲಿಸಲು ಮುಂದಾಗಿರುವುದಕ್ಕೆ ಪೋಷಕರು ಹರ್ಷ ವ್ಯಕ್ತಪಡಿಸಿದ್ದಾರೆ. ಇದರಿಂದ ಇನ್ನು ಮುಂದೆ ಸರ್ಕಾರಿ ವಸತಿ ನಿಲಯಗಳಿಗೆ ಬೇಡಿಕೆ ಹೆಚ್ಚಾಗುವುದರಲ್ಲಿ ಸಂಶಯವಿಲ್ಲ.

ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಸತಿ ನಿಲಯಗಳ ಮತ್ತು ಕ್ರೈಸ್ ವಸತಿ ಶಾಲೆಗಳ ಸುಮಾರು 2 ಲಕ್ಷ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ಕಲೆ ತರಬೇತಿ ಕೊಡುವ ಗುರಿ ಹಾಕಿಕೊಳ್ಳಲಾಗಿದೆ. ಈಗ ಪ್ರಾಯೋಗಿಕವಾಗಿ 100 ಹಾಸ್ಟೆಲ್ ಮತ್ತು ವಸತಿಶಾಲೆಗಳಲ್ಲಿ ಪ್ರಾಯೋಗಿಕ ತರಬೇತಿ ಕೊಡಲಾಗುತ್ತಿದೆ. ಇದಕ್ಕಾಗಿ ಕರಾಟೆ ಬ್ಲ್ಯಾಕ್ ಬೆಲ್ಟ್ ಪಡೆದ ಮಹಿಳಾ ತರಬೇತುದಾರರನ್ನು ತಾತ್ಕಾಲಿಕವಾಗಿ ನಿಯೋಜಿಸಲಾಗಿದೆ. ಮುಂಬರುವ ದಿನಗಳಲ್ಲಿ 2 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವುದಕ್ಕಾಗಿ ಕರಾಟೆ ಬ್ಲ್ಯಾಕ್ ಬೆಲ್ಟ್ ಪಡೆದ ಕನಿಷ್ಠ 1000 ಮಹಿಳಾ ತರಬೇತುದಾರರನ್ನು ಗೌರವಧನದ ಆಧಾರದ ಮೇಲೆ ನಿಯೋಜಿಸುವ ಯೋಜನೆಯನ್ನು ಸರ್ಕಾರ ಹೊಂದಿದೆ. ಕರಾಟೆ ತಂತ್ರಗಳ ಜೊತೆಗೆ ಹಲವಾರು ದೈಹಿಕ ಕಸರತ್ತುಗಳು ತರಬೇತಿಯ ಭಾಗವಾಗಿರುತ್ತವೆ.

ಈ ತರಬೇತಿ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿನಿಯರಿಂದ ಹಾಗೂ ಪೋಷಕರಿಂದ ಒಳ್ಳೆಯ ಮಾತುಗಳು ಕೇಳಿಬಂದಿವೆ. 'ಇದು ನಮ್ಮಲ್ಲಿ ಸ್ವಯಂ ರಕ್ಷಣೆ ಸಾಮರ್ಥ್ಯದ ಬಗ್ಗೆ ಆತ್ಮವಿಶ್ವಾಸ ಹೆಚ್ಚಿಸುವ ಜೊತೆಗೆ ವ್ಯಕ್ತಿತ್ವ ವಿಕಸನಕ್ಕೂ ಸಹಕಾರಿ. ಇದರಿಂದ ದೈಹಿಕ ಬಲದ ಜೊತೆಗೆ ಮನೋಬಲವೂ ಹೆಚ್ಚಾಗುತ್ತದೆ' ಎಂಬುದು ವಿದ್ಯಾರ್ಥಿನಿಯರ ಅನಿಸಿಕೆಯಾಗಿದೆ. ಪೋಷಕರು ಕೂಡ ಇದಕ್ಕೆ ಪೂರಕವಾದ ಮಾತುಗಳನ್ನಾಡಿ, 'ಹೆಣ್ಣು ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಈ ತರಬೇತಿ ನೆರವಾಗಲಿದೆ. ಮಹಿಳೆಯರ ಮೇಲೆ ನಡೆಯುವ ಯಾವುದೇ ರೀತಿಯ ದೌರ್ಜನ್ಯವನ್ನು ಸಮಾಜವು ಸಹಿಸಿಕೊಳ್ಳುವುದಿಲ್ಲ ಎಂಬ ಸಂದೇಶವನ್ನು ಈ ಕಾರ್ಯಕ್ರಮ ಪರಿಣಾಮಕಾರಿಯಾಗಿ ರವಾನಿಸಿದೆ. ಜೊತೆಗೆ, ಇದು ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ಹೆಚ್ಚಿನ ಪ್ರಮಾಣದಲ್ಲಿ ಶಿಕ್ಷಣ ಪಡೆಯಲು ಮುಂದಾಗುವುದಕ್ಕೆ ಉತ್ತೇಜನಕಾರಿಯಾಗಲಿದೆ. ನಮಗೆಲ್ಲರಿಗೂ ಸದಾ ಸ್ಫೂರ್ತಿಯ ಸೆಲೆಯಾಗಿರುವ ಒನಕೆ ಓಬ್ಬವ್ವನ ಹೆಸರಿನಲ್ಲಿ ಈ ತರಬೇತಿ ನೀಡುತ್ತಿರುವುದು ಸಂತೋಷದ ವಿಷಯ' ಎಂದಿದ್ದಾರೆ.

ಭವಿಷ್ಯದ ಮಹಿಳೆ ಸಬಲತೆಯ ಪ್ರತೀಕವಾಗಿರಬೇಕು. ಇದಕ್ಕಾಗಿ, ಒಂದೆಡೆ ಮಹಿಳಾ ಸುರಕ್ಷಾ ಸಾಮಾಜಿಕ ವಾತಾವರಣ ನಿರ್ಮಿಸುವ ಜೊತೆಜೊತೆಗೇ ಸ್ವತಃ ಮಹಿಳೆಯರಲ್ಲೇ ಆತ್ಮವಿಶ್ವಾಸ ಹೆಚ್ಚಿಸುವಂತಹ ಆತ್ಮರಕ್ಷಣಾ ಕಲೆಯೂ ಅವರಲ್ಲಿರಬೇಕು. ಸದೃಢ ರಾಷ್ಟ್ರ ನಿರ್ಮಾಣದ ಕನಸು ಸಾಕಾರಗೊಳ್ಳಬೇಕೆಂದರೆ ಮಹಿಳೆಯರನ್ನು ಹೊರತುಪಡಿಸಿ ಗುರಿ ಸಾಧನೆ ಸಾಧ್ಯವಿಲ್ಲ. ಹಾಗಾಗಿ ರಾಜ್ಯ ಸರ್ಕಾರವು ಸದೃಢ ರಾಷ್ಟ್ರ ನಿರ್ಮಾಣಕ್ಕೆ ತನ್ನ ಪಾಲಿನ ಮಹತ್ವದ ಕೊಡುಗೆ ನೀಡುವ ನಿಟ್ಟಿನಲ್ಲಿ ಹೆಣ್ಣುಮಕ್ಕಳಿಗೆ 'ಓಬವ್ವ ಆತ್ಮರಕ್ಷಣೆ ಕಲೆ' ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದಕ್ಕೆ ವಿದ್ಯಾರ್ಥಿನಿಯರು, ಪೋಷಕರು ಸೇರಿದಂತೆ ಎಲ್ಲೆಡೆಯಿಂದಲೂ ಉತ್ಸಾಹಕರ ಪ್ರತಿಕ್ರಿಯೆ ಕಂಡುಬಂದಿದೆ. ■



Downloaded From: www.kpscvaani.com



# ಲತಾ ಮಂಗೇಶ್ಕರ್

## ಮೌನಕ್ಕೆ ಶರಣಾದ ಗಂಧರ್ವ ಲೋಕದ ಧ್ವನಿ

ಡಿ. ಪಿ. ಮುರಳೀಧರ್

**ಇದು ನಿಜ ! ಲತಾ ಮಂಗೇಶ್ಕರ್ ಅವರಂತಹ ಗಾಯಕಿ ಮತ್ತು ಸಾಧಕಿ ಈ ಜಗತ್ತಿನಲ್ಲಿ ಈ ಹಿಂದೆ ಹುಟ್ಟಿರಲಿಲ್ಲ ! ಇಂತಹ ಪ್ರತಿಭೆಯ ಪ್ರಭೆ ಇನ್ನು ಮುಂದೆಯೂ ಬಹುಶಃ ಹುಟ್ಟುವುದಿಲ್ಲ !**

ಹೌದು ! ಮಾಧುರ್ಯದ ರಾಣಿ ಲತಾ ಮಂಗೇಶ್ಕರ್ ಇನ್ನು ನೆನಪು ಮಾತ್ರ. ತನ್ನ 13 ವರ್ಷ ವಯೋಮಾನದಿಂದ 90 ವರ್ಷ ವಯೋಮಾನದವರೆಗೆ ಅಂದರೆ 77 ವರ್ಷಗಳ ಸುದೀರ್ಘ ಕಾಲ ಚಿತ್ರ ಗೀತೆಗಳನ್ನು ಹಾಡಿ ಗಾನಲೋಕದಲ್ಲಿ ಮೇರು ಗಾಯಕಿಯಾಗಿ ಮಾತ್ರವಲ್ಲ, ಗಾಯಕಿಯರಲ್ಲಿ ನಾಯಕಿಯಾಗಿ, ಗಾಯನ ಜಗತ್ತಿನ ಅನಭಿಷಿಕ್ತ ಅರಸಿಯಾಗಿ ಮೆರೆದವರು ಲತಾ ಮಂಗೇಶ್ಕರ್.

ಲತಾ ಮಂಗೇಶ್ಕರ್ ಅವರ ಸಾಧನೆಗಳನ್ನು ದಾಖಲಿಸಲು ಪುಟ–ಪುಟಗಳು ಮಾತ್ರವಲ್ಲ, ಸಂಪುಟಗಳೂ ಸಾಲುವುದಿಲ್ಲ ಎಂಬುದು ಅತಿಶಯೋಕ್ತಿಯಲ್ಲ.

### ಲತಾ ಹಿನ್ನೆಲೆ !

ಸೆಪ್ಟೆಂಬರ್ 28, 1929. ಮಧ್ಯಪ್ರದೇಶದ ಇಂದೋರ್‌ನಲ್ಲಿ ಸಾಧಾರಣ ಮಧ್ಯಸ್ಥ ಕುಟುಂಬದಲ್ಲಿ ಜನಿಸಿದ ಬಾಲಕಿಯೊಬ್ಬಳು ಮುಂದೆ ಭಾರತ ರತ್ನ ಆಗುತ್ತಾಳೆ ಎಂಬುದು ಬಹುಶಃ ಯಾರಿಗೂ ಗೊತ್ತಿರಲಿಲ್ಲ. ಆಕೆಯ ತಂದೆ ದೀನಾನಾಥ್ ಮಂಗೇಶ್ಕರ್ ಹಾಗೂ ತಾಯಿ ಸುಧಾಮತಿ. ಆಕೆ ತನ್ನ ಹದಿಮೂರನೇ ವಯಸ್ಸಿಗೆ ತಂದೆಯನ್ನು ಕಳೆದುಕೊಳ್ಳುತ್ತಾಳೆ. ಅನಿವಾರ್ಯವಾಗಿ ಶಿಕ್ಷಣದಿಂದಲೂ ದೂರ ಉಳಿಯುತ್ತಾಳೆ.



Downloaded From: www.kpscvaani.com



ತನ್ನ ಮೂವರು ಸಹೋದರಿಯರು ಮೀನಾ, ಆಶಾ ಮತ್ತು ಉಷಾ ಹಾಗೂ ಓರ್ವ ಸಹೋದರ ಹೃದಯನಾಥ್ ಅವರನ್ನು ಸಾಕಿ ಸಲಹುವ ಕೌಟುಂಬಿಕ ಜವಾಬ್ದಾರಿಯನ್ನು ಹೊರುತ್ತಾಳೆ. ನಾಟಕ ಕಂಪನಿಗಳಲ್ಲಿ ಒಡನಾಟವಿರಿಸಿಕೊಂಡಿದ್ದ ತಂದೆಯ ಗೆಳೆಯರ ನೆರವಿನಿಂದ ಗಾನಲೋಕದಲ್ಲಿ ಪಯಣಿಸುತ್ತಾಳೆ. ಆಕೆಯೇ ಲತಾ ಮಂಗೇಶ್ಕರ್.

ಫೆಬ್ರವರಿ 6, 2022 ರಂದು ತನ್ನ 92 ವರ್ಷ ವಯೋಮಾನದಲ್ಲಿ ಲತಾ ಮಂಗೇಶ್ಕರ್ ಅವರು ಮುಂಬೈನ ಬ್ರೀಚ್ ಕ್ಯಾಂಡಿ ಆಸ್ಪತ್ರೆಯಲ್ಲಿ ಅಸ್ತಂಗತರಾದ ಸುದ್ದಿ ಬಿತ್ತರಗೊಳ್ಳುತ್ತಿದ್ದಂತೆಯೇ, ದೇಶ, ಭಾಷೆ ಮತ್ತು ಪ್ರಾಂತ ಬೇಧ-ಭಾವವಿಲ್ಲದೆ ಹಾಗೂ ಜಾತಿ, ಮತ ಮತ್ತು ಧರ್ಮ ಇವಾವುದರ ತಾರತಮ್ಯ ಇಲ್ಲದೆ ಲತಾ ಅವರಿಗೆ ಇಡೀ ವಿಶ್ವವೇ ಕಂಬನಿ ಮಿಡಿದದ್ದೂ ಕೂಡಾ ಒಂದು ದಾಖಲೆಯೇ. ಲತಾ ಇನ್ನಿಲ್ಲ ಎಂಬ ಮಾತನ್ನು ಅರಗಿಸಿಕೊಳ್ಳಲು ಸಂಗೀತ ಲೋಕಕ್ಕೆ ಸಾಧ್ಯವಾಗಲಿಲ್ಲ.

### ಹೇಮ-ಲತಾ !

ಲತಾ ಅವರ ಮೂಲ ಹೆಸರು ಹೇಮಾ ಹರ್ಡಿಕರ್. ಹೇಮ ಎಂದರೆ ಚಿನ್ನ. ಆಕೆ ಹಾಡಿದ್ದೆಲ್ಲಾ ಚಿನ್ನವಾಯಿತು. ತಂದೆ ದೀನಾನಾಥ್ ಅವರು ಅಭಿನಯಿಸುತ್ತಿದ್ದ ಮರಾಠಿ ನಾಟಕ ಭಾವ್ ಬಂಧನ್‌ನಲ್ಲಿನ ಲತಿಕಾ ಪಾತ್ರದ ಮೇಲಿನ ಪ್ರೀತಿ ಸೂಚಕವಾಗಿ ಮೊದಲ ಮಗಳು ಹೇಮಾಗೆ ಲತಾ ಎಂದು ಕರೆಯಲು ಪ್ರಾರಂಭಿಸುತ್ತಾರೆ. ಗೋವಾದ ಮಂಗೇಶಿ ಪ್ರಾಂತದ ಮಂಗೇಶಿ ದೇವರ ಒಕ್ಕಲು ಹಿನ್ನೆಲೆಯಲ್ಲಿ ಲತಾ ಅವರ ಹೆಸರಿನ ಜೊತೆಗೆ ಮಂಗೇಶ್ಕರ್ ಎಂಬುದು ತಳುಕು ಹಾಕಿಕೊಳ್ಳುತ್ತದೆ.

### ಸೂಪರ್ ಹಿಟ್ ಹಾಡುಗಳ ಸರಮಾಲೆ

ಮಹಲ್ ಚಿತ್ರದ ಆಯೇಗಾ ಆನೆವಾಲಾ, ಮಮತಾ ಚಿತ್ರದ ರಹೇ ನಾ ರಹೇ ಹಮ್, ಪೇಯಿಂಗ್ ಗೆಸ್ಟ್ ಚಿತ್ರದ ಚಾಂದ್ ಫಿರ್ ನಿಕಲಾ ಮಗರ್ ತುಮ್ ನ ಆಯೇ, ಶ್ರೀ 420 ಚಿತ್ರದ ಪ್ಯಾರ್ ಹುವಾ ಇಕರಾರು ಹುವಾ, ಮಹಮದ್ ರಫಿ ಅವರೊಂದಿಗೆ ತಾಜ್ ಮಹಲ್ ಚಿತ್ರದ ಜೋ ವಾದಾ ಕಿಯಾತೋ ನಿಭಾನಾ ಪಡೇಗಾ, ಕಿಶೋರ್ ಕುಮಾರ್ ಅವರೊಂದಿಗೆ ಸಿಲ್ ಸಿಲಾ ಚಿತ್ರದ ದೇಖ ಏಕ ಖ್ವಾಬ್ ತೋ ಸಿಲ್ ಸಿಲೇ ಹುವೇ, ಹರೇ ರಾಮ ಹರೇ ಕೃಷ್ಣ ಚಿತ್ರದ ಫೂಲೋಂಕಾ ತಾರೋಂಕಾ, ಕಭೀ ಕಭೀ ಚಿತ್ರದ ಕಭೀ ಕಭೀ ಮೇರೆ ದಿಲ್ ಮೇ ಗೀತೆಗಳು ಹೀಗೆ ಲತಾ ಅವರ ದನಿಯಲ್ಲಿ ಹೊರಹೊಮ್ಮಿದ ಸೂಪರ್ ಹಿಟ್ ಹಾಡುಗಳ ಸರಮಾಲೆ.

### ನೆಹರೂ ಕಣ್ಣೀರಿಟ್ಟದ್ದು !

ಭಾರತ-ಚೀನಾ ಯುದ್ಧದ ನಂತರದ ದಿನಗಳಲ್ಲಿ ಭಾರತದ ಸೈನಿಕರಿಗೆ ಆಶ್ರುತರ್ಪಣ ಸಲ್ಲಿಸುವ ಕಾರ್ಯಕ್ರಮ. ಅಂದಿನ ಪ್ರಧಾನ ಮಂತ್ರಿ ಜವಾಹರ ಲಾಲ್ ನೆಹರೂ ಅವರ ಸಮ್ಮುಖದಲ್ಲಿ ಲತಾ ಮಂಗೇಶ್ಕರ್ ಅವರು ಹಾಡಿದ " ಏ ಮೇರೆ ವತನ್ ಕೆ ಲೋಗೋ " ಹಾಡು ನೆರೆದ ಜನಸ್ತೋಮವನ್ನು ಭಾವುಕರನ್ನಾಗಿಸಿತು. ಹಾಡು ಕೇಳಿದ ಎಲ್ಲರ ಕಣ್ಣಾಲೆಗಳಲ್ಲೂ ನೀರು ತುಂಬಿದ್ದವು. ತಾವು ಪ್ರಧಾನ ಮಂತ್ರಿ ಎಂಬುದನ್ನೂ ಮರೆತ ಜವಾಹರ ಲಾಲ್ ನೆಹರೂ ಅವರೂ ಕೂಡಾ ಕಣ್ಣೀರಿಟ್ಟಿದ್ದರು!

ಇಂದಿಗೂ ಕೂಡಾ ಹುತಾತ್ಮ ಯೋಧರಿಗೆ ನಮನ ಸಲ್ಲಿಸಲು ಈ ಹಾಡನ್ನು ಬಳಸಿಕೊಳ್ಳಲಾಗುತ್ತದೆ. ಇಂದಿಗೂ ಕೂಡಾ ಈ ಗೀತೆಯ ಸಾಹಿತ್ಯದಲ್ಲಿನ ಅರ್ಥ ಅರಿಯದವರೂ ಕೂಡಾ, ಈ ಹಾಡನ್ನು ಕೇಳಿ ಭಾವುಕರಾಗುತ್ತಾರೆ. ಕಣ್ಣಂಚಿನಲ್ಲಿ ನೀರು ತುಂಬಿಕೊಳ್ಳುತ್ತದೆ.



### ಒಲಿಯದ ಕಂಕಣ ಭಾಗ್ಯ !


ಲತಾ ದೀದಿ ಚಿಕ್ಕವಳಿದ್ದಾಗ ಅಂದಿನ ಕಾಲದ ಹೆಸರಾಂತ ಗಾಯಕ ಕೆ.ಎಲ್. ಸೈಗಲ್ ಅವರ ಮಾದಕ ಸ್ವರ ಮಾಧುರ್ಯಕ್ಕೆ ಮನಸೋತು ಅವರನ್ನೇ ವರಿಸಲು ಇಷ್ಟಪಟ್ಟಿದ್ದರಂತೆ. ವಯಸ್ಸಿನಲ್ಲಿ ಅಜಗಜಾಂತರ ವ್ಯತ್ಯಾಸವಿದ್ದ ಹಿನ್ನೆಲೆಯಲ್ಲಿ ವಿವಾಹಕ್ಕೆ ಹಿರಿಯರ ಸಮ್ಮತಿ ದೊರೆಯಲಿಲ್ಲ. ಲತಾ ಅವರು ಕೆಲಕಾಲ ಸಂಗೀತ ನಿರ್ದೇಶಕ ಭೂಪೇನ್ ಹಜಾರಿಕಾ ಅವರನ್ನು ಲಗ್ನವಾಗುತ್ತಾರೆ ಎಂಬ ಮಾತುಗಳೂ ಕೇಳಿ ಬಂದಿತ್ತು. ಆದರೆ, ಒಡನಾಟವನ್ನು ಬಾಂಧವ್ಯ ಎಂದು ಬಿಂಬಿಸಿದ್ದು ಗಾಳಿ ಸುದ್ದಿಯಾಗಿತ್ತು.

ರಾಜವಂಶಸ್ಥ ರಾಜ್‌ಸಿಂಗ್ ಡಂಗಾಪುರ್ ಅವರು ಲತಾ ಅವರ ಧ್ವನಿಗೆ ಮಾರುಹೋಗಿ ಲತಾ ಅವರನ್ನು ಮದುವೆಯಾಗಲು ಮುಂದಾಗಿದ್ದರು. ಆದರೆ, ಸಾಮಾನ್ಯ ಕುಟುಂಬದ ಹೆಣ್ಣನ್ನು ರಾಜವಂಶಸ್ಥರು ಮದುವೆಯಾಗುವಂತಿಲ್ಲ ಎಂದು ರಾಜ್‌ಸಿಂಗ್ ಅವರ ತಂದೆ ಕಟ್ಟಾಜ್ಞೆ ಮಾಡಿದ ಹಿನ್ನೆಲೆಯಲ್ಲಿ ಲತಾ ಹಾಗೂ ರಾಜ್‌ಸಿಂಗ್ ಇಬ್ಬರೂ ಕೂಡಾ ಕಂಕಣ ಭಾಗ್ಯ ಒಲಿಯದೆಯೇ ವಿವಾಹ ಬಂಧನದಿಂದ ಉಳಿಯಬೇಕಾಯಿತು.

ತಮ್ಮ ಮದುವೆಯ ಬಗ್ಗೆ ಸಂದರ್ಶನವೊಂದರಲ್ಲಿ ಕೇಳಿದ ಪ್ರಶ್ನೆಗೆ "ಒಂದು ಕಾಲದಲ್ಲಿ ಅದರ ಬಗ್ಗೆ ಯೋಚಿಸಿದ್ದುಂಟು. ಆದರೆ, ಕಾಲ ಕೂಡಿಬರಲಿಲ್ಲ" ಎಂದು ಮಾರ್ಮಿಕವಾಗಿ ಉತ್ತರಿಸಿದ್ದರು.



Downloaded From: www.kpscvaani.com



ಅಲ್ಲದೆ, ಕಿಶೋರ್ ಕುಮಾರ್ ಅವರ ಪುತ್ರ ಅಮಿತ್ ಕುಮಾರ್ ಅವರ ಜೊತೆಯೂ ಲತಾ ಅವರು ಹಾಡನ್ನು ಹಾಡಿ ಮತ್ತೊಂದು ಅಪ್ಪ–ಮಗನ ಜೋಡಿಗೆ ದನಿಯಾದದ್ದೂ ಕೂಡಾ ಒಂದು ದಾಖಲೆಯೇ.

ಸುಪ್ರಸಿದ್ಧ ಸಂಗೀತ ನಿರ್ದೇಶಕ ಸಚಿನ್ ದೇವ್ ಬರ್ಮನ್ ಹಾಗೂ ಅವರ ಪುತ್ರ ಹೆಸರಾಂತ ಸಂಗೀತ ನಿರ್ದೇಶಕ ರಾಹುಲ್ ದೇವ್ ಬರ್ಮನ್ ಅವರ ಜೊತೆಯಲ್ಲೂ ಕೆಲಸ ಮಾಡಿ, ತಂದೆ ಮತ್ತು ಮಗ ಹೀಗೆ ಇಬ್ಬರ ರಾಗ ಸಂಯೋಜನೆಯಲ್ಲೂ ಸೂಪರ್ ಹಿಟ್ ಗೀತೆಗಳನ್ನು ಹಾಡಿದ ಕೀರ್ತಿ ಲತಾ ಮಂಗೇಶ್ಕರ್ ಅವರದ್ದಾಗಿದೆ.

ಶಂಕರ್–ಜೈಕಿಶನ್, ಲಕ್ಷ್ಮೀಕಾಂತ್–ಪ್ಯಾರೇಲಾಲ್, ಕಲ್ಯಾಣ್ ಜೀ–ಆನಂದ್ ಜೀ, ನದೀಮ್–ಶ್ರಾವಣ್ ಹೀಗೆ ಸಂಗೀತ ನಿರ್ದೇಶಕ ಜೋಡಿ ಜೊತೆಯಲ್ಲೂ ಹಾಡುಗಳನ್ನು ಹಾಡಿದವರು ಲತಾ ಅವರು.

ತಾವು ಹಾಡುವ ಹಾಡುಗಳಲ್ಲಿ ಅಸಭ್ಯತೆ ನುಸುಳಬಾರದು ಎಂದು ಎಚ್ಚರಿಕೆ ವಹಿಸುತ್ತಿದ್ದ ಲತಾ ಅವರ "ಮಡಿವಂತಿಕೆ"ಯನ್ನು ಕಂಡು ಸಂಗೀತ ನಿರ್ದೇಶಕ ಒ. ಪಿ. ನಯ್ಯರ್ ಅವರು ತಾವು ರಾಗಸಂಯೋಜಿಸುವ ಚಿತ್ರಗಳಲ್ಲಿ ಲತಾ ಅವರಿಗೆ ಅವಕಾಶವಿಲ್ಲ ಎಂದು ಘೋಷಿಸಿಬಿಟ್ಟಿದ್ದರು. ಅಂತೆಯೇ, ಅವಕಾಶವನ್ನೂ ನೀಡಲಿಲ್ಲ.

## ತ್ರಿಮೂರ್ತಿಗಳ ಜೊತೆ ಒಡನಾಟ !

ಬಾಲಿವುಡ್‌ನ ಗಾನಲೋಕದಲ್ಲಿ ತ್ರಿಮೂರ್ತಿಗಳು ಎಂದೇ ಖ್ಯಾತರಾಗಿದ್ದ ಮುಖೇಶ್, ಮಹಮದ್ ರಫಿ ಹಾಗೂ ಕಿಶೋರ್ ಕುಮಾರ್ ಅವರೊಂದಿಗೆ ಲತಾ ಮಂಗೇಶ್ಕರ್ ಅವರು ಹಲವು ಯುಗಳ ಗೀತೆಗಳನ್ನು ಹಾಡಿ ಜನಮಾನಸದಲ್ಲಿ ವಿಶೇಷ ಸ್ಥಾನ ಗಳಿಸಿದ್ದರು.

ಮುಖೇಶ್ ಅವರ ಅಕಾಲಿಕ ಸಾವು ಲತಾ ಅವರನ್ನು ದೃತಿಗೆಡಿಸಿತ್ತು. ನಂತರದ ದಿನಗಳಲ್ಲಿ ಮುಖೇಶ್ ಅವರ ಪುತ್ರ ನಿತಿನ್ ಮುಖೇಶ್ ಅವರ ಜೊತೆಗೂ ಲತಾ ಅವರು ಹಾಡು ಹಾಡಿ, ಅಪ್ಪ–ಮಗ ಜೋಡಿಯ ಜೊತೆ ಯುಗಳ ಗೀತೆ ಹಾಡಿದ ಗಾಯಕಿಯಾಗಿ ಎಲ್ಲರ ಗಮನ ಸೆಳೆದರು.

ಲತಾ ಅವರು ಹಾಡಿರುವ ಹಾಡುಗಳು ಗಿನ್ನೀಸ್ ದಾಖಲೆ ಸ್ಥಾಪಿಸಿದೆ ಎಂದು ಗಿನ್ನೀಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್ಸ್ ದಾಖಲಿಸಿದ್ದನ್ನು ಮಹಮದ್ ರಫಿ ಅವರು ಆಕ್ಷೇಪಿಸಿದ್ದರು. ಆದರೂ, ಈ ಬಗ್ಗೆ ಲತಾ ಅವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡದೆ ಮಹಮದ್ ರಫಿ ಅವರೊಂದಿಗೆ ಎಂದಿನಂತೆ ಸೋದರತಾ ಭಾವ ಮುಂದುವರೆಸಿ ತಮ್ಮ ವೃತ್ತಿಪರತೆ ಪ್ರದರ್ಶಿಸಿದರು.

ಲತಾ ಮಂಗೇಶ್ಕರ್ ಅವರ ಬಗ್ಗೆ ಕಿಶೋರ್ ಕುಮಾರ್ ಅವರಿಗೆ ಅಪಾರ ಗೌರವ. ಅದಕ್ಕೇ ಕಿಶೋರ್ ಕುಮಾರ್ ಅವರು ಗೌರವ ಸೂಚಕವಾಗಿ ಲತಾ ಅವರು ಪಡೆಯುತ್ತಿದ್ದ ಸಂಭಾವನೆಗಿಂತಲೂ ಒಂದು ರೂಪಾಯಿ ಕಡಿಮೆ ಸಂಭಾವನೆ ಪಡೆಯುತ್ತಿದ್ದರು ಎಂಬುದು ವಿಶೇಷ ! ಕಿಶೋರ್ ಕುಮಾರ್ ಅವರ ನಿಧನಾ ನಂತರ, ಕಿಶೋರ್‌ದಾ ಅವರು ಹಾಡಿದ ಜನಪ್ರಿಯ ಗೀತೆಗಳನ್ನು ಲತಾ ಅವರು ಸಾರ್ವಜನಿಕ ವೇದಿಕೆಯಲ್ಲಿ ಹಾಡಿ ಗೌರವ ಸೂಚಿಸಿದ್ದು ಇದೀಗ ಇತಿಹಾಸ.





Downloaded From: www.kpscvaani.com



ಮೂವತ್ತೆಂಟು ಭಾಷೆಗಳಲ್ಲಿ ಐವತ್ತು ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿರುವ ಲತಾ ಅವರು ದನಿಯಾಗಿರುವ ತಾರೆಯರ ಸಂಖ್ಯೆಯನ್ನು ಎಣಿಸುವುದೂ ಒಂದೇ, ಆಗಸದಲ್ಲಿನ ತಾರೆಯರನ್ನು ಲೆಕ್ಕ ಹಾಕುವುದೂ ಒಂದೇ. ಲತಾ ಅವರು ಕೆಲಸ ಮಾಡಿರುವ ಸಂಗೀತ ನಿರ್ದೇಶಕರ ಹಾಗೂ ಗೀತ ರಚನಕಾರರ ಪಟ್ಟಿಯೂ ಅಷ್ಟೇ ಕಡಲತೀರದಷ್ಟೇ ಉದ್ದವಾಗಿದೆ.

ಭಾರತದ ಅತ್ಯುನ್ನತ ನಾಗರೀಕ ಗೌರವ ಭಾರತ ರತ್ನ, ಭಾರತೀಯ ಚಲನಚಿತ್ರ ರಂಗದ ಅತ್ಯುನ್ನತ ಪ್ರಶಸ್ತಿ ದಾದಾಪಾಲ್ಕೆ ಪ್ರಶಸ್ತಿಗಳೂ ಸೇರಿದಂತೆ ನೂರಾರು ಪ್ರಶಸ್ತಿ–ಪುರಸ್ಕಾರಗಳಿಗೆ ಲತಾ ಮಂಗೇಶ್ಕರ್ ಅವರು ಭಾಜನರಾಗಿದ್ದಾರೆ.

## ಕನ್ನಡದ ನಂಟು !

"ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ" ಚಿತ್ರದಲ್ಲಿನ "ಬೆಳ್ಳನೆ ಬೆಳಗಾಯಿತು" ಮತ್ತು "ಎಲ್ಲಾರೆ ಇರ್ತೀರೋ ಎಂದಾರೆ ಬರ್ತೀರೋ" ಎಂಬ ಎರಡು ಹಾಡುಗಳು ಲತಾ ಮಂಗೇಶ್ಕರ್ ಅವರ ಕಂಠಸಿರಿಯಲ್ಲಿ ಹೊರಹೊಮ್ಮಿದೆ. ಇದೇ ಚಿತ್ರದಲ್ಲಿ ಲತಾ ಅವರ ಸಹೋದರಿ ಆಶಾ ಭೋಂಸ್ಲೆ ಅವರು "ಯಾಕೋ ಏನೋ ಸೆರಗು ನಿಲ್ಲವಲ್ದು" ಹಾಗೂ ಮತ್ತೋರ್ವ ಸಹೋದರಿ ಉಷಾ ಮಂಗೇಶ್ಕರ್ ಅವರು "ಯಾರಿವ ನನ್ನ ಮನ ಮರುಳಾಗಿಸಿದವ" ಎಂಬ ಗೀತೆಗಳನ್ನು ಹಾಡಿದ್ದಾರೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಸಾಹಸಗಾಥೆ ಕೇಳಿ ಈ ಮೂವರೂ ಸಹೋದರಿಯರೂ ತಾವು ಹಾಡಿದ ಹಾಡುಗಳಿಗೆ ಸಂಭಾವನೆ ಪಡೆಯಲಿಲ್ಲ. ಇದು ನಮ್ಮ ಕನ್ನಡ ಭಾಷೆಗೆ ಸಂದ ಗೌರವ ಕೂಡಾ. ಅಲ್ಲವೇ ?

## ಭಾರತವೇ ವಿಳಾಸ !

ಇದು ಎಂಭತ್ತರ ದಶಕದಲ್ಲಿನ ಒಂದು ಸ್ವಾರಸ್ಯಕರ ಘಟನೆ. ಹಾಲಿವುಡ್‌ನ ಮೇರು ನಟ ರೋನಾಲ್ಡ್ ರೀಗನ್ ಅವರು ಅಮೆರಿಕಾದ ಅಧ್ಯಕ್ಷರಾಗಿದ್ದ ಸಂದರ್ಭ. ಭಾರತೀಯ ಸಮುದಾಯದ ಕಾರ್ಯಕ್ರಮದಲ್ಲಿ ರೀಗನ್ ಅವರು ಪಾಲ್ಗೊಳ್ಳುತ್ತಾರೆ. ಕಾರ್ಯಕ್ರಮದಲ್ಲಿ ಮೊಳಗಿದ ಇಂಪಾದ ಸಂಗೀತ ಅವರಿಗೆ ಮುದ ನೀಡುತ್ತದೆ. ತಮ್ಮ ಅನಿಸಿಕೆಯನ್ನು ಸಂಘಟಕರಲ್ಲಿ ಪ್ರಸ್ತಾಪಿಸುತ್ತಾರೆ.

ಭಾರತೀಯ ಸಂಗೀತದ ಬಗ್ಗೆ ಅಮೆರಿಕಾ ಅಧ್ಯಕ್ಷರು ತೋರಿದ ಆಸಕ್ತಿಯಿಂದ ಪುಳಕಿತಗೊಂಡ ಸಂಘಟಕರು ಹಿಂದಿ ಚಿತ್ರಗೀತೆಗಳುಳ್ಳ ಒಂದು ಧ್ವನಿ ಸುರುಳಿಯನ್ನು ರೋನಾಲ್ಡ್ ರೀಗನ್ ಅವರಿಗೆ ನೀಡುತ್ತಾರೆ. ವಾರಾಂತ್ಯದ ಒಂದು ದಿನ ರೀಗನ್ ಅವರು ಆ ಧ್ವನಿ ಸುರುಳಿಯಲ್ಲಿನ ಸುಶ್ರಾವ್ಯ ಗೀತೆಗಳನ್ನು ಆಲಿಸುತ್ತಾರೆ. ಉಲ್ಲಸಿತರಾಗುತ್ತಾರೆ. ಧ್ವನಿ ಸುರುಳಿಯ ಗೀತೆಗಳಿಗೆ ದನಿಯಾಗಿದ್ದ ಗಾಯಕಿಗೆ ಅಭಿನಂದನಾ ಪತ್ರ ಬರೆಯಲು ನಿರ್ಧರಿಸುತ್ತಾರೆ.

ತಮ್ಮ ಶೀರ್ಷಿಕಾ ಪತ್ರದಲ್ಲಿ (ಲೆಟರ್ ಹೆಡ್‌ನಲ್ಲಿ) ಬೆರಳಚ್ಚು ಮಾಡಿಸುವ ಬದಲು ಸ್ವ–ಹಸ್ತಾಕ್ಷರಗಳಿಂದಲೇ ಹಲವು ಗುಣವಾಚಕಗಳನ್ನು ಬಳಸಿ ಆ ಗಾಯಕಿಯ ಸ್ವರ–ಮಾಧುರ್ಯವನ್ನು ಕೊಂಡಾಡುತ್ತಾರೆ. ನಂತರ, ಒಂದು ಅಂಚೆಯ ಪತ್ರದಲ್ಲಿ (ಪೋಸ್ಟಲ್ ಕವರ್‌ನಲ್ಲಿ) ತಾವು ಬರೆದ ಪತ್ರವನ್ನು ಇರಿಸಿ, ಆ ಪತ್ರದ ಮೇಲೆ "ಲತಾ ಮಂಗೇಶ್ಕರ್, ಸಿಂಗರ್, ಇಂಡಿಯಾ" ಎಂದು ಬರೆದು ಶ್ವೇತ ಭವನದಲ್ಲಿನ ರಾಜತಾಂತ್ರಿಕ ಚೀಲದಲ್ಲಿ (ಡಿಪ್ಲೋಮ್ಯಾಟಿಕ್ ಬ್ಯಾಗ್‌ನಲ್ಲಿ) ಹಾಕುತ್ತಾರೆ.

ಆ ಪತ್ರವು ಭಾರತಕ್ಕೆ ತಲುಪಿದೊಡನೆಯೇ, ನವದೆಹಲಿಯ ಭಾರತದಲ್ಲಿನ ಅಮೆರಿಕಾದ ರಾಯಭಾರಿ ಕಚೇರಿಯವರು ಭಾರತೀಯ ಅಂಚೆ ಡಬ್ಬಿಗೆ ಹಾಕುತ್ತಾರೆ. ಆ ಪತ್ರದ ಮೇಲಿನ ವಿಳಾಸವನ್ನು ಕಂಡ ಅಂಚೆ ಇಲಾಖೆಯು ಆ ಪತ್ರವನ್ನು "ಸಿಂಗರ್ ಇಂಡಿಯಾ ಲಿಮಿಟೆಡ್"ಎಂಬ ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಗೆ ತಲುಪಿಸುತ್ತದೆ. ಪತ್ರವನ್ನು ಸ್ವೀಕರಿಸಿದ ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಯ ಅಧೀನ ಸಿಬ್ಬಂದಿ ತಬ್ಬಿಬ್ಬಾಗುತ್ತಾರೆ. ಒಂದು ಪ್ರಮುಖ ದೇಶದ ಅಧ್ಯಕ್ಷರು ಮೇರು ಗಾಯಕಿಗೆ ಬರೆದ ಮೆಚ್ಚುಗೆ ಪತ್ರವನ್ನು ತಮ್ಮ ಬಳಿ ಇರಿಸಿಕೊಳ್ಳುವುದು ಹೇಗೆ ? ಎಂಬ ಪ್ರಶ್ನೆ ಅವರನ್ನು ಕಾಡುತ್ತದೆ. ಅಧೀನ ಸಿಬ್ಬಂದಿ ಈ ವಿಷಯವನ್ನು ತಮ್ಮ ಸಂಸ್ಥೆಯ ಮುಖ್ಯಸ್ಥರ ಗಮನಕ್ಕೆ ತರುತ್ತಾರೆ. ಇಲ್ಲಿಂದ ಹೊಸ ಕಥೆ ಪ್ರಾರಂಭವಾಗುತ್ತದೆ !

ಗಾಯಕಿ ಲತಾ ಮಂಗೇಶ್ಕರ್ ಅವರನ್ನು ಸಂಪರ್ಕಿಸಲು ಸಿಂಗರ್ ಇಂಡಿಯಾ ಸಂಸ್ಥೆಯವರು ಹರಸಾಹಸ ಪಡುತ್ತಾರೆ. ಪ್ರತಿದಿನವೂ ತಮ್ಮನ್ನು ಭೇಟಿಯಾಗಲು ಬಯಸುವ ಚಿತ್ರ ನಿರ್ಮಾಪಕರು, ಚಿತ್ರ ನಿರ್ದೇಶಕರು, ಸಂಗೀತ ನಿರ್ದೇಶಕರು ಅಥವಾ ಗೀತ ರಚನಕಾರರ ಬದಲಿಗೆ ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಯ ಮುಖ್ಯಸ್ಥರು ತಮ್ಮನ್ನು ಸಂಪರ್ಕಿಸಲು ಮೇಲಿಂದ ಮೇಲೆ ಪ್ರಯತ್ನಿಸುತ್ತಿರುವುದು ಲತಾಜೀ ಅವರಿಗೆ ಅರ್ಥವಾಗದ ಒಗಟಾಗುತ್ತದೆ. ಒಂದೆರಡು ವಾರಗಳ ನಂತರ, ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಯವರಿಗೆ "ಭಾನುವಾರ ಬರಲು ತಿಳಿಸಿ" ಎಂದು ಲತಾ ಅವರು ತಮ್ಮ ಆಪ್ತ ಸಿಬ್ಬಂದಿಗೆ ತಿಳಿಸುತ್ತಾರೆ.

ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಯವರು ತಮ್ಮ ನಿವಾಸಕ್ಕೆ ಬಂದು ಅಮೆರಿಕಾ ಅಧ್ಯಕ್ಷರ ಪತ್ರ ಹಸ್ತಾಂತರಿಸಿದಾಗಲೇ ಲತಾಜೀ ಅವರಿಗೆ ಪೂರ್ಣ ವಿಳಾಸ ಇಲ್ಲದ ಪತ್ರ ತಮ್ಮನ್ನು ಸೇರಲು ಪಯಣಿಸಿದ ದಾರಿ (ಪತ್ರ ಪಟ್ಟ ಕಷ್ಟ) ಯ ಅರಿವಾಗುತ್ತದೆ. ಅಪರೂಪದ ಪತ್ರವನ್ನು ಪ್ರಾಮಾಣಿಕವಾಗಿ ತಮಗೆ ತಲುಪಿಸಿದ ಹೊಲಿಗೆ ಯಂತ್ರ ತಯಾರಿಕಾ ಸಂಸ್ಥೆಯ ಕಾಳಜಿಗೆ ಮೆಚ್ಚುಗೆ ಸೂಚಿಸಿದ ಲತಾದೀ, ತಮ್ಮ ಮನೆಗೆ ಬಂದವರಿಗೆ ಸತ್ಕರಿಸಿ ಸಂತೋಷದಿಂದ ಬೀಳ್ಕೊಡುತ್ತಾರೆ. ಭಾರತವೇ ತಮ್ಮ ವಿಳಾಸ ಎಂದು ಬೀಗುತ್ತಾರೆ !

ಇದೀಗ ಲತಾ ಮಂಗೇಶ್ಕರ್ ಅವರು ಭೌತಿಕವಾಗಿ ನಮ್ಮಲ್ಲಿ ಇಲ್ಲದಿರಬಹುದು. ಆದರೆ, ಅವರು ದನಿಯಾಗಿರುವ ಸಾವಿರಾರು ಗೀತೆಗಳು ನಮ್ಮೊಂದಿಗಿದೆ. ಹೌದು ! ಸೂರ್ಯ–ಚಂದ್ರರು ಇರುವವರೆಗೂ ಲತಾ ಅವರು ನಮ್ಮ ಹೃನ್ಮನಗಳಲ್ಲಿ ಸದಾಕಾಲ ನೆಲೆಸಿರುತ್ತಾರೆ.



Downloaded From: www.kpscvaani.com

# ಭಾವೈಕ್ಯದ ಶರಣ: ಇಬ್ರಾಹಿಂ ಸುತಾರ್



**ಕನ್ನಡದ ಕಬೀರ, ವಚನ ಸಾಹಿತ್ಯದ ಪ್ರಚಾರಕ, ಸರ್ವ ಧರ್ಮಗಳ ಸಮನ್ವಯದ ಪ್ರತಿಪಾದಕರಾದ ಇಬ್ರಾಹಿಂ ಸುತಾರ್ ಅವರ ನಿಧನದಿಂದಾಗಿ ನಮ್ಮ ನಾಡು ಭಾವೈಕ್ಯದ ಶರಣರೊಬ್ಬರನ್ನು ಕಳೆದುಕೊಂಡಿದೆ.**

ಸಂಗಮೇಶ ಎನ್ ಜವಾದಿ

ಇಬ್ರಾಹಿಂ ಸುತಾರ್ ಅವರು ಒಬ್ಬ ಖ್ಯಾತ ಪ್ರವಚನಕಾರಕ, ಸಮಾಜ ಸೇವಕರಾಗಿ, ಬಸವ ತತ್ತ್ವವನ್ನು ಜನಸಾಮಾನ್ಯರಿಗೆ ಮುಟ್ಟಿಸುವ ಪಣ ತೊಟ್ಟು, ಸತ್ಯವನ್ನು ಉಸಿರಾಗಿಸಿಕೊಂಡು ಬದುಕನ್ನು ಸಾಗಿಸಿದವರು. ಆಧುನಿಕ ಸೂಫಿ ಸಂತ ಕನ್ನಡದ ಕಬೀರರಾಗಿ ಕನ್ನಡ ನಾಡಿನಲ್ಲಿ ಬೆಳಗಿ, ಸುಪ್ರಸಿದ್ಧಿಯನ್ನು ಹೊಂದಿದವರು.

ಇಬ್ರಾಹಿಂ ಸುತಾರ್ ಅವರು 10 ಮೇ 1940 ರಲ್ಲಿ ಬಾಗಲಕೋಟೆ ಜಿಲ್ಲೆಯ ಮಹಾಲಿಂಗಪುರದಲ್ಲಿ ಬಡ ಕುಟುಂಬದ ನಬೀಸಾಹೇಬ ಮತ್ತು ಆಮೀನಾಬಿ ದಂಪತಿಗಳ ಮಗನಾಗಿ ಜನಿಸಿದರು. ಬಡತನದ ಬವಣೆಯಲ್ಲಿ ಹೆಚ್ಚು ಓದದೆ ಇವರು 3 ನೇ ತರಗತಿಯವರೆಗೆ ಮಾತ್ರ ಅಧ್ಯಯನ ಮಾಡಿ, ನೇಕಾರಿಕೆ ವೃತ್ತಿಯಲ್ಲಿ ಜೀವನ ತೊಡಗಿಸಿಕೊಂಡರು. ಜೀವನದಲ್ಲಿ ಎನಾದರು ಒಂದು ಒಳ್ಳೆಯ ಕೆಲಸ ಮಾಡಬೇಕೆಂಬ ಬಯಕೆ ಇವರ ಮನಸ್ಸಿನಲ್ಲಿ ಯಾವಾಗಲೂ ಕಾಡುತ್ತಿತ್ತು. ಇಂತಹ ಸಂದರ್ಭದಲ್ಲಿ ಅವರಿಗೆ ಆಧ್ಯಾತ್ಮಿಕ ಹಸಿವು ಹೆಚ್ಚಾಗತೊಡಗಿತು. ಹಾಗಾಗಿಯೇ ಎಲ್ಲ ಧರ್ಮಗಳ ತತ್ವ, ಎಲ್ಲಾ ಮಾಹಾತ್ಮರ ತತ್ವ ಸಿದ್ಧಾಂತಗಳ ಗುರಿ ಮತ್ತು ಸಾರ ತಿಳಿಯಲು ತಮ್ಮ ಕಾಯಕ ವೃತ್ತಿಯ ಬಿಡುವಿನ ಸಮಯದಲ್ಲಿ ಊರಿನ ಭಜನಾ ಸಂಘದಲ್ಲಿ ಪಾಲ್ಗೊಳ್ಳುವ ಮೂಲಕ ತತ್ವಪದ, ವಚನಗಳನ್ನು ಕಲಿತರು. ಪ್ರವಚನಗಳನ್ನು ಕೇಳಿ, ಸನ್ಮಾರ್ಗ ದಾರಿಯಲ್ಲಿ ಸಾಗುವ ಕಡೆ ಹೆಜ್ಜೆ ಹಾಕುವ ಮನಸ್ಸು ಮಾಡಿದರು. ತರುವಾಯ ದೇವರು, ಧರ್ಮ ಬೇರೆ ಆದರೂ ಸತ್ಯ ಒಂದೇ ಎಂದು ಅರಿತರು.

ಎಲ್ಲಾ ಕಡೆಗಳಲ್ಲಿ ಭಕ್ತಿ ಗಾಯನ, ಆಧ್ಯಾತ್ಮಿಕ ಪ್ರವಚನಗಳನ್ನು ಪ್ರಾರಂಭಿಸಿದರು. 1970 ರಲ್ಲಿ ಅವರು ಸಾಮರಸ್ಯ ಜಾನಪದ ಸಂಗೀತ ಮೇಳವನ್ನು ( ಭಾವೈಕ್ಯ ಜನಪದ ಸಂಗೀತ ಮೇಳ ಕಲಾವಿದರ ತಂಡ) ಸ್ಥಾಪಿಸಿ, 40 ವರ್ಷಗಳಿಗೂ ಹೆಚ್ಚು ಕಾಲ ಕರ್ನಾಟಕ ಸೇರಿದಂತೆ ನೆರೆಯ ರಾಜ್ಯಗಳಲ್ಲಿ ಸಾಹಿತ್ಯ ವಾಚನ, ಪ್ರವಚನ, ಭಜನೆ ಮತ್ತು ಸಮಾಜಸೇವೆಯ ಮುಖಾಂತರ ಸರ್ವ ಮಹಾತ್ಮರ ಸಾಹಿತ್ಯವನ್ನು ಬಳಸಿ ಭಾವೈಕ್ಯತೆ ಸಂದೇಶವನ್ನು ಬೀರುತ್ತಾ ಬಂದವರು. ಪ್ರತಿವರ್ಷ ನೂರಾರು ಕಾರ್ಯಕ್ರಮಗಳನ್ನು ನೀಡುತ್ತಾ, ಕನ್ನಡ ನಾಡಿನಲ್ಲಿ ಭಾವೈಕ್ಯತೆ ಬೆಸೆಯುವ ಪವಿತ್ರ ಕಾಯಕದಲ್ಲಿ ತೊಡಗಿಸಿಕೊಂಡಿದ್ದರು.

ಹೀಗೆ ಅವರ ಹಾಡುಗಳು ಮತ್ತು ಭಜನೆಗಳ ಮೂಲಕ ಸಾಮಾಜಿಕ ಮತ್ತು ಕೋಮುಸೌಹಾರ್ದ ಸಂದೇಶ ಪಸರಿಸುವ ಕಾಯಕ ನಿರಂತರವಾಗಿ ಮಾಡಿಕೊಂಡು ಬಂದಿರುವುದು ಹಾಗೂ ಸಂವಾದ ರೂಪ ಭಜನೆಯ ವಿನೂತನ ಕಲಾ ಪ್ರಕಾರದ ಹುಟ್ಟಿಗೆ ಕಾರಣರಾದರು. ಸತ್ಯದ ಸಾರವನ್ನರಿತು, ಬಸವಾದಿ ಶರಣರ ವಚನತತ್ವ–ಸೂಫಿತತ್ವವನ್ನೂ ತಮ್ಮಲ್ಲಿ ಅಳವಡಿಸಿಕೊಂಡು ಜನಸಾಮಾನ್ಯರಿಗೆ ಇನ್ನೂ ಲಘುವಾಗಿ ತತ್ವಪದಗಳನ್ನು ಹಾಡುತ್ತಾ, ವೇದಿಕೆಗಳಲ್ಲಿ ಪ್ರಶ್ನೋತ್ತರಗಳ ಮೂಲಕವಾಗಿ ಸರಳವಾಗಿ ಮನಮುಟ್ಟುವಂತೆ ಹಾಗೂ ಅತ್ಯಂತ ಪ್ರಭಾವ ಬೀರುವಂತೆ ಪ್ರವಚನ ಮಾಡುತ್ತಿದ್ದರು. ಜೊತೆಗೆ ಪದ್ಯಗಳನ್ನು ಹಾಡುವ ಸಂವಾದ ರೂಪ ಭಜನೆ ನೀಡುವ ಭಾವೈಕ್ಯದ ಹಾಡು, ಭಕ್ತಿ ರಸಮಂಜರಿ, ಗೀತ ಸಂವಾದ ತರಂಗಿಣಿ, ಆಧ್ಯಾತ್ಮ ಸಂವಾದ ತರಂಗಿಣಿ ಕಾರ್ಯಕ್ರಮಗಳ ಮೂಲಕ ಅಸಂಖ್ಯಾತ ಕನ್ನಡಿಗರ ಹೃದಯ ಗೆದ್ದು, ಬಸವಾದಿ ಶರಣರ ವಚನಗಳನ್ನು ಸುಲಲಿತವಾಗಿ ಜನರಿಗೆ ಮನದಟ್ಟಾಗುವಂತೆ ಬೋಧಿಸಿ ಸರ್ವಧರ್ಮ ಪ್ರೇಮಿಯಾದರು.



Downloaded From: www.kpscvaani.com

**ಭಾವೈಕ್ಯದ ಪ್ರತಿಪಾದಕ:**

ಅನಾದಿ ಕಾಲದಿಂದ ಭಾರತೀಯರಲ್ಲಿ ವಿವಿಧತೆಯಲ್ಲಿಯೂ ಐಕ್ಯತೆ ಎದ್ದು ಕಾಣುತ್ತದೆ. ಆದರೂ ಆಗಾಗ ಬರುವ ಬಿರುಕುಗಳ ಗೊಂದಲಕ್ಕೆ ಇಂತಹ ಶರಣರ ನುಡಿಗಳು ಸದಾ ಜಾಗೃತಿ ಮೂಡಿಸುತ್ತಾ, ಮನುಷ್ಯನ ಅಂತರಾಳಕ್ಕೆ ಇಳಿದು ಮನೋವಿಕಾಸಕ್ಕೆ ಕಾರಣವಾಗುತ್ತವೆ.

ಇದಕ್ಕೆ ತಾಜಾ ನಿದರ್ಶನವೇ ಇಬ್ರಾಹಿಂ ಸುತಾರ್ ಅವರ ಜೀವನ ಸಂದೇಶ. ಇನ್ನು ಇಬ್ರಾಹಿಂ ಸುತಾರ್ ಅವರ ಪ್ರವಚನ ಆರಂಭವಾಗುವುದೇ ಕವಿ ಸಿದ್ದಯ್ಯ ಪುರಾಣಿಕ ಅವರ ಒಂದು ವಚನದಿಂದ. ಅದುವೇ "ಏನಾದರೂ ಆಗು ಮೊದಲು ಮಾನವನಾಗು," ಎಂಬ ವಚನ. ಇಬ್ರಾಹಿಂ ಅವರಲ್ಲಿದ್ದ ಮಾನವೀಯತೆಯ, ಮನುಷ್ಯ ಪ್ರೀತಿಯ, ಸ್ನೇಹದ ಶಕ್ತಿಯ ಮಾತುಗಳೇ ಆ ವಚನದ ಒಳಾರ್ಥ ಮತ್ತು ಕವಿ ಸಿದ್ದಯ್ಯ ಪುರಾಣಿಕರ ಆಶಯದ ಜೊತೆಗೆ ಇಬ್ರಾಹಿಂರ ಇಚ್ಛಾಶಕ್ತಿ ಸಹ ಆಗಿತ್ತು ಎಂದರೆ ತಪ್ಪಾಗುವುದಿಲ್ಲ.

ವಚನ ಹೇಳಿದಂತೆ ಇಬ್ರಾಹಿಂ ಅವರು ಜೀವನ ಸಾಗಿಸಿದ್ದು ನಮ್ಮೆಲ್ಲರಿಗೂ ಅನುಕರಣೀಯವಾದದ್ದು. ಹಾಗಾಗಿಯೇ ಮನುಷ್ಯ ಸಮಾಜದಲ್ಲಿ ಇದ್ದು ಲೌಕಿಕ ಜೀವನದೊಂದಿಗೆ ಸರಳ ಆಧ್ಯಾತ್ಮ ಮತ್ತು ಮನುಷ್ಯತ್ವ ನಿಲುವುಗಳನ್ನು ಪಾಲಿಸುವುದು ಒಂದು ತಪಸ್ಸು ಎಂದು ಅವರು ಹೇಳುತ್ತಿದ್ದರು. ಕನ್ನಡವನ್ನು ದೇವಭಾಷೆಯನ್ನಾಗಿ ಮಾಡಿದ ಶರಣರ ವಚನಗಳ ಅಂತರಂಗದ ಭಾವನೆಗಳ ಭಾಷೆಯನ್ನು ತಮ್ಮ ಚಿಂತನೆಗಳಿಗೆ ಹೊಂದಿಸಿಕೊಂಡು ಸಂವಾದದ ರೀತಿಯಲ್ಲಿ ಪ್ರವಚನ ಮಾಡುತ್ತಾ, ಕರ್ನಾಟಕದ ಉದ್ದಗಲಕ್ಕೂ ಸಂಚರಿಸಿ, ಭಾವೈಕ್ಯತೆಯನ್ನು ಈ ನಾಡಿನಲ್ಲಿ ಬಿತ್ತಿದ ಮಹಾನ್ ಸಂತರಾಗಿದ್ದರು.

ಜಾತಿ ಧರ್ಮವೆಂದು ಕಿತ್ತಾಡುವ ಮಂದಮತಿಗಳ ಸಂತೆಯಲ್ಲಿ ಕಬೀರರಂತೆ ನಿಂತು, ಕುಲಬೇಧಗಳನ್ನು ಲೆಕ್ಕಿಸದೆ ಸಂಸಾರದಲ್ಲಿದ್ದುಕೊಂಡೇ ಸದ್ಗತಿಯನ್ನು ಪಡೆಯುವ ಹಾದಿ ಹಿಡಿದು ಶರಣರೊಪ್ಪುವಂತೆ ಸರಳ, ಸಾತ್ವಿಕೋತ್ತಮರಾಗಿ ಬದುಕಿ ಬಾಳಿದವರು ಇಬ್ರಾಹಿಂ ಸುತಾರ್ ಅವರು. ಹೀಗೆ ಭಾವೈಕ್ಯತೆ ಎನ್ನುವ ಸಸಿಯನ್ನು ನೆಟ್ಟು ಬೆಳೆಸಿ, ಹೆಮ್ಮರವಾಗಿಸಿ, ಅನುಭಾವದ ಅಡುಗೆಯ ಮಾಡಿ, ನಮ್ಮೆಲ್ಲರಿಗೂ ಉಣಬಡಿಸಿ, ಭಾವೈಕ್ಯತೆಯನ್ನು ಪ್ರತಿಪಾದಿಸಿ, ಮೌಲ್ಯಾಧಾರಿತ ಶರಣರಾಗಿ ನಮಗೆ ಸದಾ ಮಾದರಿಯಾಗಿ ನಿಲ್ಲುತ್ತಾರೆ.

**ಸಾಹಿತ್ಯ ಸೇವೆ:**

ಸಾಹಿತ್ಯ ವಾಚನ, ಪ್ರವಚನ, ಭಜನೆ ಮತ್ತು ಸಮಾಜ ಸೇವೆಯ ಮುಖಾಂತರ ಸರ್ವ ಮಹಾತ್ಮರ ಸಾಹಿತ್ಯವನ್ನು ಬಳಸಿ ಭಾವೈಕ್ಯತೆಯ ಸಂದೇಶ ಸಾರಿದ ಇಬ್ರಾಹಿಂ ಸುತಾರ್‌ರವರ ಸಾಹಿತ್ಯ ಸೇವೆ ಅನನ್ಯವಾದದು. ಇವರ ಪ್ರವಚನ ರಾಜ್ಯದ ಹೊರನಾಡಿನಲ್ಲೂ ಹರಡಿದೆ. ನಾಲ್ಕು ಸಾವಿರಕ್ಕೂ ಅಧಿಕ ಕಾರ್ಯಕ್ರಮಗಳು ನೀಡಿರುವುದು ಇವರ ಭಾವೈಕ್ಯತೆಯ ಸೊಗಡಿಗೆ ಸಾಕ್ಷಿಯಾಗಿದೆ. ಮಹಾರಾಷ್ಟ್ರ, ಗೋವಾ, ಗುಜರಾತ್ ಮತ್ತು ದೆಹಲಿ ಕಡೆಗಳಲ್ಲಿ ಪ್ರವಚನ ಪ್ರವಾಸದ ಹೆಜ್ಜೆ ಗುರುತುಗಳು ಸಾಕಷ್ಟು ಇವೆ. ಹಾಗೆ ಇವರ ಧ್ವನಿ ಮುದ್ರಿತ ಧ್ವನಿಸುರುಳಿಗಳು ಸಹ ಸದ್ದು ಮಾಡುತ್ತಲೆ ಇವೆ. ಜಗವೊಂದು ಧರ್ಮಶಾಲೆ, ಸೌಡಿಲ್ಲದ ಸಾಹುಕಾರ, ಮೊದಲು ಮಾನವನಾಗು, ಪಾಪಕರ್ಮಗಳನ್ನು ಮಾಡಬೇಡ, ದೇವರು ಕಾಡುವುದಿಲ್ಲ, ಯಾರು ಜಾಣರು, ಹಣ ಹೆಚ್ಚೋ? ಗುಣ ಹೆಚ್ಚೋ, ಹಾಗೆ ಭಾವೈಕ್ಯತೆ ಎಂದರೇನು ಎಂಬಂತಹ ಇಪ್ಪತ್ತಕ್ಕೂ ಹೆಚ್ಚು ಧ್ವನಿ ಸುರಳಿಗಳು ಹೊರ ಬಂದಿದ್ದು, ಅವರ ಚಿಂತನೆಗಳು ಇಂದಿಗೂ, ಎಂದೆಂದಿಗೂ ಪ್ರಸ್ತುತವಾಗಿವೆ. ನಾವೆಲ್ಲಾ ಭಾರತೀಯರು ಎಂಬುದು ಅವರ ಕವನ ಸಂಕಲನದ ಪ್ರಮುಖ ಆಶಯವಾಗಿತ್ತು. ಇವರ ಲಹರಿ ತತ್ವಪದಗಳು 1989ರಲ್ಲಿ 9 ಬಾರಿ ಮುದ್ರಣವಾಗಿದೆ.

**ಗೌರವ ಪ್ರಶಸ್ತಿಗಳು:**

ಇಬ್ರಾಹಿಂ ಸುತಾರ್ ಹಿಂದೂ-ಮುಸ್ಲಿಂ ಭಾವೈಕ್ಯತೆಯ ಮೂರ್ತಿಯಾಗಿದ್ದರು. ಪ್ರವಚನಕ್ಕೆ ಹೆಸರಾಗಿದ್ದವರು. ಅಲ್ಲದೇ ಬಸವಣ್ಣನವರ ಅನುಯಾಯಿಗಳಾಗಿದ್ದು, ಬಸವಣ್ಣನವರ ವಚನಗಳನ್ನು ಹೇಳುತ್ತಿದ್ದರು. ಸರ್ವಧರ್ಮಗಳ ಸಮಾನತೆಯ ಹರಿಕಾರರಾಗಿ, ಜನರಾಡುವ ಸಾಮಾನ್ಯ ಭಾಷಾ ಶೈಲಿಯಲ್ಲಿ ಎಲ್ಲಾ ಧರ್ಮಗ್ರಂಥಗಳ ಸಾರಾಮೃತವನ್ನು ಉಣಬಡಿಸುತ್ತಾ, ಸರ್ವರಲ್ಲೂ ಅಧ್ಯಾತ್ಮಿಕ ಮತ್ತು ಸಮಾನತೆಯನ್ನು ತರುವಲ್ಲಿ ಬಹಳ ದೊಡ್ಡ ಕೊಡುಗೆ ನೀಡಿದ್ದಾರೆ. ಹೀಗೆ ನಾಡಿನೆಲ್ಲೆಡೆ ಪ್ರವಚನ ನೀಡಿ ಭಾವೈಕ್ಯತೆ ಸಂದೇಶ ಸಾರುವ ಮೂಲಕ ಹೆಸರುವಾಸಿಯಾಗಿ, ಸರ್ವಧರ್ಮಗಳ ಭಾವೈಕ್ಯತೆ ಶ್ರೇಷ್ಠ ಪ್ರವಚಕರಾಗಿದ್ದ ಸೂಫಿ ಸಂತ ಸುತಾರ್‌ಗೆ 1982 ರಲ್ಲಿ "ಕನ್ನಡದ ಕಬೀರ" ಎಂದು ಶ್ರೀ ಶಿವಾನಂದ ಭಾರತಿ ಮಹಾಸ್ವಾಮಿಗಳು ಬಿರುದು ನೀಡಿದರು. ನಂತರ 1995 ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ದೊರಕಿತು. 1998 -2001 ರವರೆಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯರಾಗಿ ಉತ್ತಮ ಕೆಲಸ ಮಾಡಿದರು. 2010 ರಲ್ಲಿ ಕಥಾಕೀರ್ತನ ಕ್ಷೇತ್ರದಲ್ಲಿ ಸಲ್ಲಿಸಿದ ಅಮೂಲ್ಯ ಸೇವೆಗಾಗಿ 'ಕರ್ನಾಟಕ ಕಲಾಶ್ರೀ' ಗೌರವ ಪ್ರಶಸ್ತಿ. ಭಾವೈಕ್ಯ ರಂಗದಲ್ಲಿ ಸಲ್ಲಿಸಿದ ಅನನ್ಯ ಸೇವೆಗಾಗಿ 2006 ರಲ್ಲಿ, "ಆಳ್ವಾಸ ನುಡಿಸಿರಿ ಪ್ರಶಸ್ತಿ", 2018 ರಲ್ಲಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಕೂಡ ಲಭಿಸಿದೆ.

ಶರಣ ಇಬ್ರಾಹಿಂ ಸುತಾರ್‌ರವರ ವೈಚಾರಿಕತೆಯ ಶ್ರೀಮಂತಿಕೆ ಅವರ ಬಾಳಿನುದ್ದಕ್ಕೂ ಪ್ರಚುರಪಡಿಸುತ್ತಲೆ ಇತ್ತು. ಜೀವನದುದ್ದಕ್ಕೂ ಮಾನವೀಯತೆ, ಸಹೋದರತ್ವ, ಕೋಮು ಸೌಹಾರ್ದತೆಯ ಕುರಿತು ಸರ್ವ ಜನಾಂಗಕ್ಕೆ ಅರಿವು ಮೂಡಿಸಿದ ಅವರದು ಎಂದಿಗೂ ಮರೆಯಲಾಗದ ವ್ಯಕ್ತಿತ್ವ. ಹುಟ್ಟಿದ ಜಾತಿಗೂ, ನೋಡಿ ಕಲಿತ ಜಾತಿಗಳಿಗೂ ಅಂಟಿ ಕೊಳ್ಳದೆ, ಸ್ನೇಹ ಜೀವಿಯಾಗಿ, ಉದಾತ್ತವಾದ ವಿಚಾರಗಳ ಮೂಲಕ ದಣಿವರಿಯದ ಪ್ರವಚನಗಳನ್ನು ನೀಡಿ, ಭಾವೈಕ್ಯದ ಸಂದೇಶಗಳನ್ನು ಪಸರಿಸಿದ್ದಾರೆ.

ಬಸವಣ್ಣನವರ ಅಭಿಮಾನಿಯಾಗಿ, ಭಾವೈಕ್ಯತೆಯ ಸಾಕಾರ ಮೂರ್ತಿಯಾಗಿ, ಶರಣರ, ದಾಸರ, ಸಂತರ ಪದಗಳ ಸಾರದಿಂದ ಬರುತ್ತಿದ್ದ ಅವರ ಒಂದೊಂದು ಪ್ರವಚನಗಳು ಕೂಡಾ ಬದುಕಿನ ಅನುಭವದ ಪಾಠಗಳಾಗಿವೆ. ಅವರ ಪ್ರವಚನ ಅನುಭವಿಸಿದರೆ ಬೆಳಕಿನ ಸಂಚಲನ ಮೂಡುವುದರಲ್ಲಿ ಅನುಮಾನವಿಲ್ಲ. ಇಬ್ರಾಹಿಂ ಅವರ ಪ್ರವಚನಗಳು ಇಡೀ ಸಮಾಜದ ಒಗ್ಗಟ್ಟಿಗೆ ಮತ್ತು ಒಂದಾಗಿ ಬಾಳುವುದಕ್ಕೆ ಸಚೇತನದ ಸೇತುವೆ ಆದದ್ದು ಮರೆಯುವಂತಿಲ್ಲ. ಇನ್ನು ಇವರ ಚಿಂತನೆಗಳು ಸದಾ ಜೀವಂತವಾಗಿದ್ದು, ಮನುಷ್ಯರಿಗೆ ಮನುಷ್ಯತ್ವದ ಬಗ್ಗೆ ಎಚ್ಚರ ನೀಡುತ್ತಲೆ ಇರುತ್ತವೆ. ಹಾಗಾಗಿ ನಮ್ಮೆಲ್ಲರ ಮಧ್ಯೆ ಅವರು ಸದಾ ಕಾಲ ಉಳಿಯುತ್ತಾರೆ.



Downloaded From: www.kpscvaani.com

# ರಾಜ್ಯದ ಐವರು ಸಾಧಕರಿಗೆ ಪದ್ಮಶ್ರೀ

ಕೇಂದ್ರ ಸರ್ಕಾರವು 2022 ನೇ ಸಾಲಿನ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಾದ ಪದ್ಮವಿಭೂಷಣ, ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿಗಳನ್ನು ಗಣರಾಜ್ಯೋತ್ಸವದ ಮುನ್ನಾದಿನದಂದು (ಜನವರಿ 25 ರಂದು) ಪ್ರಕಟಿಸಿತು. ಈ ಸಾಲಿನ ಪ್ರಶಸ್ತಿಯಲ್ಲಿ ಕರ್ನಾಟಕ ರಾಜ್ಯದ ಐವರಿಗೆ ಪದ್ಮಶ್ರೀ ಲಭಿಸಿರುವುದು ಹೆಮ್ಮೆಯ ವಿಚಾರವಾಗಿದೆ.

ಮರಣೋತ್ತರವಾಗಿ ಕವಿ ಡಾ. ಸಿದ್ದಲಿಂಗಯ್ಯ ಅವರನ್ನು ಒಳಗೊಂಡಂತೆ, ಧಾರವಾಡದ ಕೃಷಿ ಕ್ಷೇತ್ರದ ಸಂಶೋಧಕ ಅಣ್ಣಿಗೇರಿಯ ಅಬ್ದುಲ್ ಖಾದರ್ ನಡಕಟ್ಟಿನ, ಗಮಕ ಕಲಾವಿದರಾದ ಶಿವಮೊಗ್ಗದ ಹೆಚ್. ಆರ್. ಕೇಶವಮೂರ್ತಿ, ಗುಡ್ಡಕ್ಕೆ ಸುರಂಗ ಕೊರೆದು ನೀರು ಪಡೆದ ಸಾಹಸಿ ದಕ್ಷಿಣ ಕನ್ನಡ ಜಿಲ್ಲೆಯ ಅಮೈ ಮಹಾಲಿಂಗ ನಾಯ್ಕ ಹಾಗೂ ಕೃಷಿ ಸಂಶೋಧಕರಾಗಿರುವ ಚಾಮರಾಜನಗರ ಜಿಲ್ಲೆಯವರಾದ ಎಸ್.ಅಯ್ಯಪ್ಪನ್ ಅವರುಗಳಿಗೆ ಪದ್ಮಶ್ರೀ ಪ್ರಶಸ್ತಿ ದೊರಕಿದೆ.

* * *

## ಡಾ. ಸಿದ್ದಲಿಂಗಯ್ಯ

ಕವಿ ಸಿದ್ದಲಿಂಗಯ್ಯ ಅವರು ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಸಂಶೋಧನೆ, ಆತ್ಮಕಥನ ಮುಂತಾದ ಹಲವು ಪ್ರಕಾರಗಳಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ. ಅವರು ರಚಿಸಿದ ಸಾಹಿತ್ಯಗಳಲ್ಲಿ ದಲಿತ ಹೋರಾಟ ಮತ್ತು ಸಾಮಾಜಿಕ ಸಮಾನತೆ ಕಂಡುಬರುತ್ತಿದ್ದರಿಂದ ಅವರನ್ನು ಬಂಡಾಯ ಸಾಹಿತಿ ಎಂದು ಕರೆಯಲಾಗುತ್ತಿತ್ತು.

ರಾಮನಗರ ಜಿಲ್ಲೆಯ ಮಾಗಡಿಯ ಮಂಚನಬೆಲೆಯವರಾದ ಇವರು



ಅಧ್ಯಾಪಕ, ಪ್ರಾಧ್ಯಾಪಕ, ಕವಿ, ಹೋರಾಟಗಾರ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿದ್ದಲ್ಲದೆ, ಎರಡು ಬಾರಿ ವಿಧಾನಪರಿಷತ್ತಿನ ಸದಸ್ಯರಾಗಿ ಕೂಡ ಸೇವೆ ಸಲ್ಲಿಸಿರುವ ಇವರು, ಜೂನ್ 11, 2021 ರಲ್ಲಿ ಅಗಲಿದರು.

ದೇವಯ್ಯ ಮತ್ತು ವೆಂಕಮ್ಮ ದಂಪತಿಯ ಮಗನಾಗಿ ಫೆಬ್ರವರಿ 3, 1954ರಲ್ಲಿ ಜನಿಸಿದ ಸಿದ್ದಲಿಂಗಯ್ಯ ಅವರು ಪ್ರೌಢಶಾಲೆಯಿಂದಲೇ ಕವಿತೆ ಬರೆಯಲು ಪ್ರಾರಂಭಿಸಿದ್ದರು. ಲೋಹಿಯಾ, ಅಂಬೇಡ್ಕರ್, ಪೆರಿಯಾರ್ ಮುಂತಾದವರ ವಿಚಾರಧಾರೆಗಳಿಂದ ಆಕರ್ಷಿತರಾಗಿದ್ದ ಇವರು, ವಿದ್ಯಾರ್ಥಿ ದೆಸೆಯಿಂದಲೇ ಕ್ರಾಂತಿಕಾರಕ ಭಾಷಣಗಳನ್ನು ಮಾಡುತ್ತಿದ್ದರು. "ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ", "ದಲಿತರು ಬರುವರು ದಾರಿ ಬಿಡಿ" ಎಂಬ ಹೋರಾಟದ ಕಿಚ್ಚು ಹಚ್ಚುವಂತಹ ಕ್ರಾಂತಿಕಾರಕ ಗೀತೆಗಳನ್ನು ರಚಿಸಿದವರ ಕೈಯಿಂದ "ಆ ಬೆಟ್ಟದಲ್ಲಿ... ಬೆಳದಿಂಗಳಲ್ಲಿ" ಎಂಬ ಭಾವಗೀತೆಯೂ ರಚಿತಗೊಂಡಿತ್ತು.

ಶ್ರವಣಬೆಳಗೊಳದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಇವರು ವಹಿಸಿದ್ದರು. 'ಹೊಲೆ ಮಾದಿಗರ ಹಾಡು', 'ಅಲ್ಲೆ ಕುಂತವರು', 'ನನ್ನ ಜನಗಳು', 'ಕಪ್ಪು ಕಾಡಿನ ಹಾಡು' ಇವರ ಜನಪ್ರಿಯ ಕವನ ಸಂಕಲವಾದರೆ, ಇವರ ಆತ್ಮಕಥೆ 'ಊರುಕೇರಿ'ಯು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. 'ಏಕಲವ್ಯ', 'ನೆಲಸಮ' ಮತ್ತು 'ಪಂಚಮ' ಇವರು ರಚಿಸಿದ ನಾಟಕಗಳು. ಇವುಗಳಲ್ಲಿ 'ಹೊಲೆ ಮಾದಿಗರ ಹಾಡು' ಕವನ ಸಂಕಲನವು ಭಾರತೀಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಸ್ಥಾನವನ್ನು ಗಳಿಸಿದ ಕೃತಿಯಾಗಿತ್ತು. ಇನ್ನು ಇವರ ಆತ್ಮಕಥೆ 'ಊರು ಕೇರಿ'ಯು ತಮಿಳು ಮತ್ತು ಇಂಗ್ಲಿಷ್‌ಗೆ ತರ್ಜುಮೆ ಗೊಂಡಿದೆ. ಅಲ್ಲದೆ ಇವರ ಹಲವಾರು ಕವಿತೆಗಳು ಇಂಗ್ಲಿಷ್, ಹಿಂದಿ, ತಮಿಳು, ಬಂಗಾಳಿ, ಮಲಯಾಳಂ ಮತ್ತು ತೆಲುಗು ಭಾಷೆಗಳಲ್ಲಿ ಅನುವಾದಗೊಂಡಿವೆ.

ಸಿದ್ದಲಿಂಗಯ್ಯ ಅವರ ಸಾಹಿತ್ಯ ಸೇವೆಗೆ ಸಂದ ಪ್ರಶಸ್ತಿ ಮತ್ತು ಗೌರವಗಳು ಅಪಾರ. ಅವರಿಗೆ ಸಂದ ಪ್ರಶಸ್ತಿಗಳಲ್ಲಿ ರಾಜ್ಯೋತ್ಸವ, ನಾಡೋಜ, ಬಾಬುಜಗಜೀವನರಾಮ್, ಡಾ.ಅಂಬೇಡ್ಕರ್, ಪಂಪ ಪ್ರಶಸ್ತಿಗಳು ಪ್ರಮುಖವಾಗಿದ್ದು, ಅವುಗಳ ಸಾಲಿಗೆ ಈಗ ಅತ್ಯುನ್ನತ ಪ್ರಶಸ್ತಿಯಾದ ಪದ್ಮಶ್ರೀ ಸೇರ್ಪಡೆಗೊಂಡಿದೆ. ಆದರೆ ಈ ಪ್ರಶಸ್ತಿಯು ಅವರಿಗೆ ಮರಣೋತ್ತರವಾಗಿ ದೊರಕಿರುವುದು ಅವರ ಜೀವಿತಾವಧಿಯ ಸೃಜನಶೀಲ ಸಾಹಿತ್ಯ ಸಾಧನೆಗೆ ಸಂದ ಗೌರವವಾಗಿದೆ.

* * *

## ಅಬ್ದುಲ್ ಖಾದರ್ ನಡಕಟ್ಟಿನ

"ನಡಕಟ್ಟಿನ ಕೂರಿಗೆ" ಎಂದು ಹೆಸರಾದ ಬಿತ್ತನೆ ಕೂರಿಗೆಯ ಸಂಶೋಧಕರಾದ ಧಾರವಾಡ ಜಿಲ್ಲೆ ಅಣ್ಣಿಗೇರಿಯ ಅಬ್ದುಲ್ ಖಾದರ್ ನಡಕಟ್ಟಿನ ಅವರಿಗೆ 2022ನೇ ಸಾಲಿನ ಪದ್ಮಶ್ರೀ ಪ್ರಶಸ್ತಿ ಒಲಿದು ಬಂದಿದೆ. 1953 ಮಾರ್ಚ್ 3ರಂದು ಜನಿಸಿದ ಅಬ್ದುಲ್ ಖಾದರ್ ನಡಕಟ್ಟಿನ, ಪ್ರಾರಂಭದಲ್ಲಿ ಸಾಂಪ್ರದಾಯಕ ಶೈಲಿ ಕೃಷಿಯಿಂದ ಸೋತರೂ ಕೈಕಟ್ಟಿ ಕುಳಿತುಕೊಳ್ಳದೇ, ಕೃಷಿ ಯಂತ್ರೋಪಕರಣಗಳ ಸಂಶೋಧನೆ ಹಾಗೂ ಹುಣಸೆ ಮೌಲ್ಯ ವರ್ಧನೆಯಿಂದ ಫೀನಿಕ್ಸ್ ಹಕ್ಕಿಯಂತೆ ಮೇಲೆದ್ದು ಬಂದರು.

1985 ರಲ್ಲಿ ಧಾರವಾಡ ಜಿಲ್ಲೆಯಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆಯಾಗಿರಲಿಲ್ಲ. ಬಿದ್ದ ಸ್ವಲ್ಪ ಮಳೆಗೆ ನಡಕಟ್ಟಿನ ಅವರು ಯಂತ್ರದಿಂದ ಗೋಧಿ ಬಿತ್ತನೆ ಮಾಡಿದರು. ಗೋಧಿಯ ಪೈರು ಭೂಮಿಯಿಂದ ಮೇಲೆ ಏಳಲೇ ಇಲ್ಲ. ನಡಕಟ್ಟಿನ ಅವರಿಗೆ



Downloaded From: www.kpscvaani.com



ನಿರಾಸೆಯಾಯಿತು. ಇದಕ್ಕೆ ಕಾರಣ ತಿಳಿಯಲು ಮುಂದಾದರು. ಯಂತ್ರದಿಂದ ಗೋಧಿ ಬೀಜಗಳನ್ನು ಬಿತ್ತುವಾಗ, ಬೀಜಕ್ಕೆ ಹಾನಿಯಾಗುತ್ತಿತ್ತು. ನಿರ್ದಿಷ್ಟ ಅಂತರದಲ್ಲೂ ಬೀಜ ಬಿತ್ತನೆಯಾಗುತ್ತಿರಲಿಲ್ಲ. ಇದಕ್ಕೆ ಪರಿಹಾರವಾಗಿ ನಿಗದಿತ ಅಂತರದಲ್ಲಿ ಬೀಜ ಬಿತ್ತುವ ಯಂತ್ರ ತಯಾರಿಸಿದರು. ಆದರೂ ಬಿತ್ತನೆ ಬೀಜಕ್ಕೆ ಹಾನಿಯಾಗುವುದು ತಪ್ಪಲಿಲ್ಲ. ಪರಿಹಾರ ಸಿಗುವವರೆಗೆ ಅವರ ಕಣ್ಣುಗಳಿಗೆ ನಿದ್ದೆಯೂ ಬರಲಿಲ್ಲ. ಒಂದು ರಾತ್ರಿ ಹತ್ತಿಯ ಮೃದು ದಿಂಬಿನ ಮೇಲೆ ತಲೆ ಒರಗಿಸಿದ ತಕ್ಷಣವೇ ಹತ್ತಿಯಂತಹ ಮೃದುರೋಲರ್ ಅನ್ನು ಬಿತ್ತನೆಗೆ ಏಕೆ ಬಳಸಬಾರದು ಎಂಬ ವಿಚಾರ ಹೊಳೆಯಿತು. ಇದನ್ನು ಕಾರ್ಯರೂಪಕ್ಕೆ ಇಳಿಸಿದರು. ಸ್ಪಂಜಿನ ರೋಲರ್ ಮಾಡಿ ಬಿತ್ತನೆ ಕೂರಿಗೆ ಯಂತ್ರಕ್ಕೆ ಅಳವಡಿಸಿದರು. ಬಹು ಕಾಲದ ಸಮಸ್ಯೆಯೊಂದಕ್ಕೆ ಪರಿಹಾರ ದೊರಕಿತು.

ನಡಕಟ್ಟಿನ ಬಿತ್ತನೆ ಕೂರಿಗೆ ಉತ್ತರ ಕರ್ನಾಟದ ರೈತರಿಗೆ ಕಾಮಧೇನುವಾಗಿದೆ. ಎಲ್ಲಾ ವಿಧದ ಕಾಳುಗಳ ಬಿತ್ತನೆಗೆ ಸಹಕಾರಿಯಾಗಿದೆ. ಗೊಬ್ಬರವನ್ನೂ ಹಾಕಬಹುದು. ಅಬ್ದುಲ್ ಖಾದರ್ ನಡಕಟ್ಟಿನ ಅವರು ಕೃಷಿ ಯಂತ್ರಗಳ ಸಂಶೋಧನೆಗೆ ಸವೆಸಿದ ಹಾದಿ ಕಠಿಣವಾಗಿತ್ತು. ಧಾರವಾಡ ಕೃಷಿ ವಿಶ್ವವಿದ್ಯಾಲಯದ ಅಂದಿನ ಕುಲಪತಿ ಡಾ.ಹೆಚ್.ಎ.ಪಾಟೀಲ್ ಮಾರ್ಗದರ್ಶನದಲ್ಲಿ ಬಿತ್ತನೆ ಯಂತ್ರದಲ್ಲಿ ಮತ್ತಷ್ಟು ಸುಧಾರಣೆ ಮಾಡಿದರು. ಕೃಷಿ ಯಂತ್ರಗಳ ತಯಾರಿಕೆಯ ಉದ್ದಿಮೆ ಸ್ಥಾಪಿಸಿ ಮಾರಾಟಕ್ಕೆ ತೊಡಗಿದರು. ಪ್ರಸ್ತುತ ವರ್ಷ 8 ಸಾವಿರ ಬಿತ್ತನೆ ಕೂರಿಗೆಗಳಿಗೆ ಬೇಡಿಕೆ ಬಂದಿದೆ. ನೆರೆಯ ರಾಜ್ಯಗಳಿಗೂ ಪೂರೈಸುತ್ತಿದ್ದಾರೆ.

ನಡಕಟ್ಟಿನ ಅವರು 2000 ಇಸವಿಯಲ್ಲಿ ಅಣ್ಣಿಗೇರಿಯಲ್ಲಿ "ವಿಶ್ವ ಶಾಂತಿ ಕೃಷಿ ಸಂಶೋಧನಾ ಕೇಂದ್ರ" ಸ್ಥಾಪಿಸಿ, ಕೃಷಿ ಯಾಂತ್ರೀಕರಣದಲ್ಲಿ ಸಂಶೋಧನೆ ನಡೆಸುತ್ತಿದ್ದಾರೆ. ಇದರಿಂದ 100ಕ್ಕೂ ಹೆಚ್ಚು ಜನರಿಗೆ ಉದ್ಯೋಗ ದೊರೆತಿದೆ. ಹರಗುವ ಗಾಲಿಕುಂಟೆ, ದಿಂಡಿನ ಕುಂಟೆ, ಬಂಡ್ ಫಾರಂ, ಹಸಿ ಗೆಜ್ಜೆ ಶೇಂಗಾ ಕಿತ್ತು, ಒಕ್ಕುವ ಯಂತ್ರಗಳು ಲಭಿಸುತ್ತವೆ. ಇವರ ಈ ಸಾಧನೆ ಗುರುತಿಸಿ 2015 ರಲ್ಲಿ ಭಾರತ ಸರ್ಕಾರವು ಜೀವಮಾನ ಸಾಧನೆ ಪ್ರಶಸ್ತಿ, 2017 ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, 2021ರಲ್ಲಿ ವಾಣಿಜ್ಯ ರತ್ನ ಪ್ರಶಸ್ತಿ ಲಭಿಸಿವೆ. ಪ್ರಸಕ್ತ ಸಾಲಿನಲ್ಲಿ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**– ವೇಣುಗೋಪಾಲ ಪಿ.ಎಂ**

* * *

## ಹೆಚ್.ಆರ್. ಕೇಶವಮೂರ್ತಿ

ಪದ್ಯ ಹಾಗೂ ಚಂಪೂ ಕಾವ್ಯವನ್ನು ರಾಗಬದ್ಧವಾಗಿ ಓದುವ ಒಂದು ವಿಶಿಷ್ಟ ಪದ್ಧತಿಯೇ ಗಮಕ ಕಲೆ. ಇಂತಹ ಗಮಕ ಕಲೆಯಲ್ಲಿ ಸುಮಾರು 60 ವರ್ಷಗಳಿಂದ ನೂರಕ್ಕೂ ಹೆಚ್ಚು ವಿಭಿನ್ನ ರಾಗಗಳಲ್ಲಿ ವಾಚನ ಮಾಡುವ ಮೂಲಕ ಗಮಕ ಗಂಧರ್ವ ಹೆಚ್.ಆರ್. ಕೇಶವಮೂರ್ತಿ ಅವರು ರಾಜ್ಯದ ಮೂಲೆ ಮೂಲೆಗೂ ಗಮಕ ಕಲೆಯ ಘಮವನ್ನು ಸಾರುತ್ತಿದ್ದಾರೆ.

ಇದೊಂದು ಅಪರೂಪದ ಕಲೆ ಮತ್ತು ಪರಂಪರೆ. 88 ವರ್ಷದ ಕೇಶವಮೂರ್ತಿ ಅವರು ಗಮಕ ಕ್ಷೇತ್ರದಲ್ಲಿ ಪರಿಣಿತರು. ಕೇಶವಮೂರ್ತಿ ಅವರು ಸಲ್ಲಿಸಿದ ಸೇವೆಗೆ ಅನೇಕ ಪ್ರಶಸ್ತಿಗಳು ಲಭಿಸಿದ್ದು, ಇದೀಗ ಮತ್ತೊಂದು ಗರಿ ಮೂಡಿದೆ. ತಮ್ಮ ಜೀವನವನ್ನು ಗಮಕ ಕಲೆಗೇ ಮುಡಿಪಾಗಿಸಿದ್ದಾರೆ. ಇವರ ಗಮಕ



ಶೈಲಿಯು ಕೇಶವಮೂರ್ತಿ ಘರಾನಾ ಎಂದೇ ಖ್ಯಾತವಾಗಿತ್ತು. ನೂರಾರು ವಿದ್ಯಾರ್ಥಿಗಳಿಗೆ ಉಚಿತವಾಗಿ ಗಮಕ ಕಲೆ ಕಲಿಸಿ, ಗಮಕ ಕಲೆಯ ಉಳಿವಿಗೆ ಮತ್ತು ಅದನ್ನು ಬೆಳೆಸಲು ಕಾರಣಕರ್ತರಾಗಿದ್ದಾರೆ.

ಹೊಸಳ್ಳಿ ರಾಮಸ್ವಾಮಿ ಶಾಸ್ತ್ರಿ ಮತ್ತು ಲಕ್ಷ್ಮೀದೇವಮ್ಮ ದಂಪತಿಯ ಪುತ್ರರಾಗಿ 1934ರ ಫೆ.22 ರಂದು ಜನಿಸಿದ ಅವರು ಬಾಲ್ಯದಿಂದಲೇ ಗಮಕ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ತಂದೆ–ತಾಯಿ ರಾಗವಾಗಿ ಹಾಡುತ್ತಿದ್ದ ಪುರಾಣಗಳಿಂದ ಉತ್ತೇಜಿತರಾಗಿದ್ದರು. 16 ನೇ ವಯಸ್ಸಿನಿಂದ ಗ್ರಾಮದ ವೆಂಕಟೇಶಯ್ಯ ಅವರ ಬಳಿ ಗಮಕ ವಾಚನ ಅಧ್ಯಯನ ಆರಂಭಿಸಿದ್ದರು. ರಾಮಾಯಣ, ಮಹಾಭಾರತ, ಕನ್ನಡ ಹಾಗೂ ಸಂಸ್ಕೃತದ ಕಾವ್ಯಗಳನ್ನು ಹಲವು ರಾಗಗಳಲ್ಲಿ ವಾಚನ ಮಾಡುವುದನ್ನು ರೂಢಿಸಿಕೊಂಡರು. 100 ಕ್ಕೂ ಅಧಿಕ ವಿಭಿನ್ನ ರಾಗಗಳಲ್ಲಿ ವಾಚನ ಮಾಡುವುದರಿಂದ ಅವರನ್ನು ಶತರಾಗಿ ಎಂದು ಕರೆಯಲಾಗುತ್ತದೆ. ಮತ್ತೂರು ಕೃಷ್ಣಮೂರ್ತಿಯವರೊಂದಿಗೂ ಕಾರ್ಯಕ್ರಮ ನೀಡಿದ್ದಾರೆ. ಕೇಶವಮೂರ್ತಿಯವರಿಗೆ ತುಂಬಾ ಇಷ್ಟವಾದದ್ದು ಕುಮಾರವ್ಯಾಸನ ಗದುಗಿನ ಭಾರತದ ವಾಚನ.

ಸಂಸ್ಕೃತ ಗ್ರಾಮವಾದ ಮತ್ತೂರು–ಹೊಸಳ್ಳಿ ಗಮಕ ಕಾರ್ಯಕ್ರಮದ ಚಟುವಟಿಕೆಗಳಿಂದಾಗಿ 'ಗಮಕ ಗ್ರಾಮ' ಎಂದೇ ಗುರುತಿಸಿಕೊಂಡಿದೆ. ಕೇಶವಮೂರ್ತಿಯವರಿಗೆ ಶಾಂತಲ ನಾಟ್ಯಶ್ರೀ ಪ್ರಶಸ್ತಿ, ಕುಮಾರವ್ಯಾಸ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಹರಸಿ ಬಂದಿದ್ದು, ಕೇಂದ್ರ ಸರ್ಕಾರದ ಪದ್ಮಶ್ರೀ ಮತ್ತೊಂದು ಗರಿ ಮೂಡಿಸಿದೆ. ಪ್ರಾಥಮಿಕ ಶಾಲೆಯಿಂದಲೇ ಗಮಕ ಆರಂಭಿಸಿದ್ದ ಅವರು ಕುಮಾರವ್ಯಾಸ, ಜೈಮಿನಿ ಭಾರತವನ್ನು ಶಾಲಾ ಹಂತದಿಂದಲೇ ಅಭ್ಯಾಸ ಮಾಡಿದ್ದರು. ಶಾಲೆಯಲ್ಲಿ ತಮ್ಮ ಪಾಡಿಗೆ ತಾವು ಪದ್ಯ, ಪಠ್ಯಗಳನ್ನು ಗುನುಗುನಿಸುತ್ತಿದ್ದುದನ್ನು ಗಮನಿಸಿದ ಅಧ್ಯಾಪಕರು, ಕಂಠ ಚೆನ್ನಾಗಿದೆ, ರಾಗಬದ್ಧವಾಗಿ ಹೇಳುವಂತೆ ಪ್ರೋತ್ಸಾಹಿಸಿದರು. ಈ ರೀತಿ ಗಮಕ ವಾಚಿಸುವುದು ಅವರಿಗೆ ಅಭ್ಯಾಸವಾಯಿತು.

ಗಮಕದಲ್ಲಿ ಜೀವನಕ್ಕೆ ಬೇಕಾದ



Downloaded From: www.kpscvaani.com

ಹಲವಾರು ವಿಷಯಗಳಿವೆ. ಮನಸ್ಸಿಗೆ ಆನಂದ ನೀಡುತ್ತದೆ. ತನ್ನದೇ ಆದ ಚೌಕಟ್ಟು, ರಾಗ ಇರುವ ಕಲೆಯಾದ ಗಮಕವನ್ನು ಅಭ್ಯಾಸ ಮಾಡಿದರೆ ಒಲಿಯುತ್ತದೆ. ಗಮಕ ಪರಂಪರೆಯನ್ನು ಎಲ್ಲರಿಗೂ ತಲುಪಿಸುವ ಮೂಲಕ ಉಳಿಸಿ ಬೆಳೆಸಬೇಕಿದೆ. ಹಾಗಾಗಿಯೇ ಗಮಕ ಕಲೆಯನ್ನು ಇದೀಗ ಸರ್ಕಾರ ಗುರುತಿಸಿ ಪ್ರಶಸ್ತಿಯನ್ನು ನೀಡಿದೆ.

–ಎಂ.ಟಿ. ಭಾಗ್ಯ

* * *

## ಮಹಾಲಿಂಗ ನಾಯ್ಕ

ಕರಾವಳಿಯ ಆಧುನಿಕ ಭಗೀರಥ ಎಂದೇ ಖ್ಯಾತರಾದ ಮಹಾಲಿಂಗ ನಾಯ್ಕ ಅಮೈ ಅವರು 2022ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕರಾವಳಿ ಜಿಲ್ಲೆಗಳಲ್ಲಿ ಕೃಷಿ ನಿಧಾನವಾಗಿ ಸರಿಯುತ್ತಿರುವ ಇಂದಿನ ಸಂದರ್ಭದಲ್ಲಿ ಕೃಷಿಯಿಂದಲೇ ಸ್ವಾಲಂಬನೆ ಸಾಧ್ಯ ಎಂಬುದನ್ನು ಇಂದಿನ ತಲೆಮಾರಿಗೆ ಸಾರಿದ ಸಂತ ಮಹಾಲಿಂಗ ನಾಯ್ಕ.

ಅವರು ಹುಟ್ಟಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೇಪು ಗ್ರಾಮದ ಅಮೈ ಎಂಬಲ್ಲಿ. ವೆಂಕಪ್ಪ ನಾಯ್ಕ ಮತ್ತು ಅಕ್ಕು ದಂಪತಿಯ ಪುತ್ರರಾಗಿ ಏಪ್ರಿಲ್ 20, 1994ರಲ್ಲಿ ಜನಿಸಿದ ಇವರು ಶಾಲೆಗೆ ಹೋದವರಲ್ಲ. ತಮ್ಮ 12ನೇ ವಯಸ್ಸಿನಲ್ಲಿಯೇ ಅಮೈ, ಮಹಾಬಲ ಭಟ್ ಅವರ ತೋಟದಲ್ಲಿ ಕೂಲಿ ಕಾರ್ಮಿಕರಾಗಿ ಸೇರಿದರು. ತೆಂಗು, ಅಡಿಕೆ ಮರ ಹತ್ತುವುದರಲ್ಲಿ ನೈಪುಣ್ಯ ಪಡೆದಿದ್ದರು. ಕೂಲಿಯಿಂದಲೇ ಇವರ ಸಂಸಾರ ಸಾಗುತ್ತಿತ್ತು. ತಮ್ಮ ಸ್ವಾಧೀನದಲ್ಲಿದ್ದ ಎರಡೂವರೆ ಎಕರೆ ಜಮೀನನ್ನು ಮಾಲಿಕ ಮಹಾಬಲ ಭಟ್



ಅವರು ಇವರಿಗೆ ಕೊಟ್ಟರು. ನೀರಿನ ಆಸರೆಯೇ ಇಲ್ಲದ ಬೋಳು ಗುಡ್ಡದಲ್ಲಿ ಬೆಳೆ ಬೆಳೆಯುವುದಾದರೂ ಹೇಗೆ?... ಆದರೂ ಧೃತಿಗೆಡದ ಮಹಾಲಿಂಗ ನಾಯ್ಕ ಅವರು ಕೃಷಿ ಮಾಡಲು ಮುಂದಾದರು.

ಪಂಪ್‌ಸೆಟ್ ಸೌಲಭ್ಯವಿಲ್ಲದ ಕಾಲದಲ್ಲಿ ಹಿಂದಿನ ತಲೆಮಾರಿನವರು ಅವಲಂಬಿಸಿದ್ದಂತೆ ಸುರಂಗ ನೀರಿನ ವ್ಯವಸ್ಥೆಯಲ್ಲಿ ವಿದ್ಯುತ್ ರಹಿತವಾಗಿ ಗುರುತ್ವಾಕರ್ಷಣೆಯ ನೆರವಿನ ಮೂಲಕ ತಮ್ಮ ಜಮೀನಿಗೆ ಹನಿ ನೀರಾವರಿ, ತುಂತುರು ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಯಶಸ್ವಿಯಾದರು.

ಬೋಳು ಗುಡ್ಡದ ಮೇಲೆ ಒಂದರ ಮೇಲೊಂದು ಸುರಂಗ ತೋಡುತ್ತಾ ವಿಫಲರಾದರೂ ಕೂಡ ಛಲ ಬಿಡದೆ 5ನೇ ಪ್ರಯತ್ನಕ್ಕೆ ಯಶಸ್ವಿಯಾದರು. ನೀರನ್ನು ಸಂಗ್ರಹಿಸಲು ಮಣ್ಣಿನ ಟ್ಯಾಂಕ್ ನಿರ್ಮಿಸಿ ಗುಡ್ಡವನ್ನು ಸಮತಟ್ಟು ಮಾಡಿದ ಸಾಹಸಿ ಮಹಾಲಿಂಗ ನಾಯ್ಕ ಅವರ ವೈಜ್ಞಾನಿಕ ದೃಷ್ಟಿ ಹೇಗಿದೆ ಎಂಬುದನ್ನು ಇದರಿಂದ ತಿಳಿಯಬಹುದು.

ಸಾವಯವ ಕೃಷಿಕರಾಗಿರುವ ಇವರು ಅಡಿಕೆ, ತೆಂಗು, ಬಾಳೆ, ಕೊಕೊ, ಕರಿಮೆಣಸು, ತರಕಾರಿ, ಹಲಸು ಅಲ್ಲದೇ ಹೈನುಗಾರಿಕೆ ಮತ್ತು ಜೇನುಕೃಷಿಯನ್ನು ಮಾಡುತ್ತಿದ್ದಾರೆ, ಅಡ್ಯನಡ್ಕದ ವಾರಣಾಶಿ ಸುಬ್ರಾಯ ಭಟ್ ಅವರೇ ನಾಯ್ಕ ಅವರಿಗೆ ಪ್ರೇರಣೆ.

ಮಹಾಲಿಂಗ ನಾಯ್ಕರಿಗೆ ಪತ್ನಿ ಲಲಿತಾ ಮತ್ತು ಮೂವರು ಮಕ್ಕಳಿದ್ದಾರೆ. ಬರುವ ಆದಾಯದಲ್ಲೇ ಉಳಿತಾಯ ಮಾಡಿ ಯೋಜನೆ ಹಾಕಿಕೊಳ್ಳುವ ಮಹಾಲಿಂಗ ನಾಯ್ಕ ಹಾಸಿಗೆ ಇದ್ದಷ್ಟೇ ಕಾಲು ಚಾಚಬೇಕು ಎನ್ನುವವರು. ಬ್ಯಾಂಕ್‌ಗಳಲ್ಲಿ ಸಾಲ ಮಾಡುವ ವಿಚಾರ ಬಂದಾಗ 'ಸಾಲವೂ ಬೇಡ ಸಾಲ ಮನ್ನವೂ ಬೇಡ, ಸ್ವಾಭಿಮಾನದಿಂದ ಬದುಕಿ ಆದಾಯಗಳಿಸಿ ಮಾನಸಿಕ ನೆಮ್ಮದಿಯನ್ನು ಸಂಪಾದಿಸಿದರೆ ಅದೇ ಜೀವನ' ಎಂದು ನೆಮ್ಮದಿಯ ಜೀವನ ನಡೆಸಿದ್ದಾರೆ.

ಶಾಲಾ ಕಾಲೇಜುಗಳ ಮೆಟ್ಟಿಲು ಹತ್ತದ ಛಲಗಾರ ಮಹಾಲಿಂಗ ನಾಯ್ಕರ ಸಾಧನೆಯನ್ನು ದೂರದರ್ಶನ ತನ್ನ 'ವಾಟರ್ ವಾರಿಯರ್' ಧಾರಾವಾಹಿಯಲ್ಲಿ ಬಿತ್ತರಿಸಿದೆ. ಕೃಷಿ ಕ್ಷೇತ್ರದಲ್ಲಿ ಇವರ ಸಾಧನೆಯನ್ನು ಕಣ್ಣಾರೆ ಕಂಡು ಹಿರಿಯ ಪರ್ತಕರ್ತ ಶ್ರೀಪಡ್ರೆಯವರು 'ಗುಡ್ಡದ ಮೇಲಿನ ಏಕವ್ಯಕ್ತಿ ಸೈನ್ಯ' ಎಂಬ ಕಿರು ಪುಸ್ತಕವನ್ನು ಪ್ರಕಟಿಸಿದ್ದಾರೆ.

ಇವರ ಸಾಧನೆಗೆ ಹಲವು ಪುರಸ್ಕಾರಗಳು ಬಂದಿವೆ. 2004ರಲ್ಲಿ ಅಡ್ಯನಡ್ಕದ ವಾರಣಾಶಿ ಸಂಶೋಧನಾ ಪ್ರತಿಷ್ಠಾನ ವರ್ಷದ ಕೃಷಿಕ ಪ್ರಶಸ್ತಿ, ಗುಡ್ಡದಲ್ಲಿ ಸುರಂಗ ತೋಡಿ ಜಲಸಿರಿಯನ್ನು ಸೃಷ್ಟಿಸಿದವರು ಎಂದು ಕರ್ನಾಟಕ ಸರ್ಕಾರ 2008–09 ರಲ್ಲಿ 'ಗಂಗೆಯನ್ನೊಲಿಸಿದ ಮತ್ತು ನೀರಿನ ಸಮರ್ಥ ಬಳಕೆಗೆ 'ಕೃಷಿ ಪಂಡಿತ ಪ್ರಶಸ್ತಿ' ನೀಡಿ ಗೌರವಿಸಿದೆ.

2008–09 ರಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದಿಂದ 'ಕೃಷಿ ಪಂಡಿತ ಪ್ರಶಸ್ತಿ'. 2018 ನೇ ಸಾಲಿನಲ್ಲಿ ಮಂಗಳೂರಿನ ಅಂತರರಾಷ್ಟ್ರೀಯ ಲಯನ್ಸ್ ಸೇವಾ ಸಂಸ್ಥೆಯು 'ಲಯನ್ಸ್ ಸಾಧಕ' ಪುರಸ್ಕಾರ ನೀಡಿ ಗೌರವಿಸಿದೆ.

ಅಮೈ ಮಹಾಲಿಂಗ ನಾಯ್ಕ ಕುರಿತು ಮೈಸೂರು ವಿಶ್ವ ವಿದ್ಯಾಲಯದ ಶೈಕ್ಷಣಿಕ ಬಹುಮಾಧ್ಯಮ ಸಂಶೋಧನೆ ಸಂಸ್ಥೆ (ಇಎಂಆರ್‌ಸಿ) ನಿರ್ಮಿಸಿದ ಸಾಕ್ಷ್ಯಚಿತ್ರ 'ಇನ್‌ಕ್ರೇಡಿಬಲ್ ಟೇಲ್ ಆಫ್ ವಾಟರ್ ವಾರಿಯರ್' 10ನೇ ರಾಷ್ಟ್ರೀಯ ವಿಜ್ಞಾನ ಚಿತ್ರೋತ್ಸವದಲ್ಲಿ ಜ್ಯೂರಿ ಸ್ಪೆಷಲ್ ಮೆನ್ಷನ್ ಅವಾರ್ಡ್‌ಗೆ ಪಾತ್ರವಾಗಿತ್ತು.

ಒಟ್ಟಿನಲ್ಲಿ ಮಹಾಲಿಂಗ ನಾಯ್ಕ ಅವರ ಈ ಸಾಧನೆ ಇಂದಿನ ತಲೆಮಾರಿಗೆ ಸ್ಫೂರ್ತಿದಾಯಕ. ಕೇಂದ್ರ ಸರ್ಕಾರ ನೀಡಿರುವ ಪದ್ಮಶ್ರೀ ಪುರಸ್ಕಾರ ಇವರ ಸಾಧನೆಗೆ ಮತ್ತೊಂದು ಗರಿ.

–ಸೌಮ್ಯ.ಎನ್


* * *

## ಪ್ರೊ.ಎಸ್. ಅಯ್ಯಪ್ಪನ್

ಭಾರತ ಸರ್ಕಾರ ನೀಡುವ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಅತ್ಯುನ್ನತ ಪದ್ಮಶ್ರೀ ಪ್ರಶಸ್ತಿಗೆ ಇಂಡಿಯನ್ ಕೌನ್ಸಿಲ್ ಫಾರ್ ಅಗ್ರಿಕಲ್ಚರ್ ರೀಸರ್ಚ್‌ನ ವಿಶ್ರಾಂತ ಮಹಾನಿರ್ದೇಶಕರು ಹಾಗೂ ಇಂಫಾಲದ ಕೇಂದ್ರಿಯ ಕೃಷಿ ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಆಗಿರುವ ಮೂಲ ಚಾಮರಾಜನಗರ ಜಿಲ್ಲೆಯವರಾದ ಪ್ರೊ. ಎಸ್. ಅಯ್ಯಪ್ಪನ್ ಅವರಿಗೆ ಪದ್ಮಶ್ರೀ ಸಂದಿರುವುದು ಇಡೀ ಗಡಿ ಜಿಲ್ಲೆಯೇ ಹೆಮ್ಮೆ ಪಡುವಂತ್ತಾಗಿದೆ.



Downloaded From: www.kpscvaani.com



ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಆಲ್ಕೆರೆ ಅಗ್ರಹಾರದಲ್ಲಿ ಅಯ್ಯಪ್ಪನ್ ಅವರು ಜನಿಸಿದರು. ಇವರ ತಂದೆ ಸುಬ್ಬಣ್ಣ ಹಾಗೂ ತಾಯಿ ಸುಶೀಲಮ್ಮ ಅವರು ಕೆಲ ವರ್ಷಗಳ ನಂತರ ಜಿಲ್ಲೆ ಬಿಟ್ಟು ಮೈಸೂರು ಜಿಲ್ಲೆಯ ನಂಜನಗೂಡು, ಬೆಂಗಳೂರು, ಮಂಗಳೂರಿನಲ್ಲಿ ನೆಲೆಸಿದರು. ಹೀಗಾಗಿ ಆಯಾ ಊರಿನಲ್ಲೇ ಅಯ್ಯಪ್ಪನ್ ಅವರ ವಿದ್ಯಾಭ್ಯಾಸ ನಡೆಯಿತು. ಆದರೂ ಸಹ ಹುಟ್ಟೂರು ಚಾಮರಾಜನಗರ ಜಿಲ್ಲೆಯ ಬಗ್ಗೆ ಅಯ್ಯಪ್ಪನ್ ಅವರಿಗೆ ಅಪಾರ ಪ್ರೀತಿ ಅಭಿಮಾನವಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಬಾಲ್ಯದ ದಿನಗಳನ್ನು ಇಂದಿಗೂ ಸ್ಮರಿಸುತ್ತೇನೆ. ಕನ್ನಡ ಮಾಧ್ಯಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಆರಂಭಿಸಿದ್ದು, ಬಿಳಿಗಿರಿರಂಗನಬೆಟ್ಟಕ್ಕೆ ಹೋಗುತ್ತಿದ್ದ ನೆನಪು ಈಗಲೂ ಇದೆ. ಅಂದು ಅವಿಭಜಿತ ಮೈಸೂರು ಜಿಲ್ಲೆಯ ಭಾಗವಾಗಿದ್ದ ಚಾಮರಾಜನಗರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಜನಿಸಿದ ನನಗೆ ಬಹುದೊಡ್ಡ ಗೌರವ ಲಭಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ಪ್ರೊ. ಅಯ್ಯಪ್ಪನ್ ಅವರು ವಿನೀತವಾಗಿ ನುಡಿಯುತ್ತಾರೆ.

ದೇಶ ಕಂಡ ಕೃಷಿ ತಜ್ಞರಲ್ಲಿಯೂ ಒರ್ವರಾಗಿರುವ ಅಯ್ಯಪ್ಪನ್ ಅವರು ಕೃಷಿ ಕ್ಷೇತ್ರದ ಬೆಳವಣಿಗೆಗಾಗಿ ತಂದ ಹಲವು ಸುಧಾರಣೆಗಳು ಮಹತ್ವ ಪೂರ್ಣದ್ದಾಗಿದೆ. ಮೀನುಗಾರಿಕೆ ವಿಷಯದಲ್ಲಿಯೂ ಸಾಕಷ್ಟು ಸಂಶೋಧನೆ ನಡೆಸಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ವಲಯದ ಬೆಳವಣಿಗೆಗೆ ನಿರಂತರವಾಗಿ ತೊಡಗಿಕೊಂಡಿರುವ ಪ್ರೊ. ಅಯ್ಯಪ್ಪನ್ ಅವರು ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಹಯೋಗದೊಂದಿಗೆ ಚಾಮರಾಜನಗರ ಜಿಲ್ಲೆಯಲ್ಲಿ ವಿಜ್ಞಾನ ಕ್ಷೇತ್ರದ ವಿಚಾರಗಳನ್ನು ತಲುಪಿಸುವ ಸದಾಯಶಯದೊಂದಿಗೆ ಕಾರ್ಯ ನಿರ್ವಹಿಸುತ್ತಿರುವ ಗ್ರ್ಯಾವಿಟಿ ಸೈನ್ಸ್ ಫೌಂಡೇಶನ್ ಎಂಬ ಸಂಸ್ಥೆಯ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ವಿಜ್ಞಾನ ಆಸಕ್ತರಿಗೆ ಉಪಯುಕ್ತ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲು ನೆರವಾಗಿದ್ದಾರೆ.

ರಾಜ್ಯ ಸರ್ಕಾರ ಕೊಡ ಮಾಡುವ ರಾಜ್ಯೋತ್ಸವ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿರುವ ಪ್ರೊ. ಅಯ್ಯಪ್ಪನ್ ಅವರು ಸರಳ, ಸಜ್ಜನಿಕೆ ಹಾಗೂ ಸಮಾಜದ ಬಗ್ಗೆ ಕಳಕಳಿಯುಳ್ಳ ಮಾದರಿ ವ್ಯಕ್ತಿಯಾಗಿದ್ದಾರೆ.

## STATEMENT ABOUT OWNERSHIP AND OTHER PARTICULARS ABOUT VARTHA JANAPADA

### FORM IV Rule 8


1. Place of Publication : Bengaluru

2. Periodicity of Publication : Monthly

3. Printer Name : G. Gopalakrishna
   Nationality : Indian
   Address : Lavanya Mudrana, Banashankari 1st Stage, Vidyapeeta Circle, Benglauru - 560 050

4. Publishers Name : Dr. P.S. Harsha
   Nationality : Indian
   Address : Dept. of Information & Public Relations, #17, Mahaveer Road, (Infantry Rd) Bengaluru - 560 001.

5. Editor's Name : Dr. P.S. Harsha
   Nationality : Indian
   Address : Dept. of Information & Public Relations, #17, Mahaveer Road, (Infantry Rd) Bengaluru - 560 001.

6. License No. - Regd. No. **PMG/BG/WPP/365/2021-23**

I, **Dr P S Harsha** hereby declare that the particulars given above are true to the best of my knowledge and belief.

Bengaluru
01.03.2022

Sd.
Commissioner
Signature of the Publisher




Downloaded From: www.kpscvaani.com

# ದ್ವಿತೀಯ ಬಹುಮಾನ ಪಡೆದ
# ಕರ್ನಾಟಕ ರಾಜ್ಯದ ಸ್ತಬ್ಧಚಿತ್ರ

**ಜನವರಿ 26 ರಂದು ಗಣರಾಜ್ಯೋತ್ಸವ ದಿನದಂದು ದೆಹಲಿಯ ರಾಜ್‌ಪಥ್‌ನಲ್ಲಿ ಸಾಗಿದ ನಮ್ಮ ರಾಜ್ಯದ ಸ್ತಬ್ಧಚಿತ್ರಕ್ಕೆ ದ್ವಿತೀಯ ಬಹುಮಾನ ದೊರಕಿರುವುದು ಎಲ್ಲರೂ ಹೆಮ್ಮೆ ಪಡುವಂತಹ ವಿಷಯವಾಗಿದೆ.**



Downloaded From: www.kpscvaani.com

ನಮ್ಮ ರಾಜ್ಯದ ಸ್ತಬ್ಧಚಿತ್ರವು 2010 ರಿಂದಲೂ ಸತತವಾಗಿ 13 ವರ್ಷಗಳ ಕಾಲ ರಾಜ್‌ಪಥ್‌ನ ಪ್ರದರ್ಶನದಲ್ಲಿ ಭಾಗವಹಿಸಲು ಆಯ್ಕೆಯಾಗುತ್ತಾ ಬರುತ್ತಿದೆ. ಈ ಬಾರಿ 15 ಸ್ತಬ್ಧಚಿತ್ರಗಳು ರಾಜ್‌ಪಥ್‌ನಲ್ಲಿ ಸಾಗಲು ಆಯ್ಕೆಯಾಗಿದ್ದವು. ಈ ಬಾರಿ ದಕ್ಷಿಣ ಭಾರತದಿಂದ ಆಯ್ಕೆಯಾಗಿರುವ ಏಕೈಕ ಸ್ತಬ್ಧಚಿತ್ರ ಎಂಬ ಹೆಗ್ಗಳಿಕೆಗೂ ನಮ್ಮ ರಾಜ್ಯದ ಸ್ತಬ್ಧಚಿತ್ರ ಪಾತ್ರವಾಗಿತ್ತು.

ಪ್ರತಿ ವರ್ಷ ದೆಹಲಿಯಲ್ಲಿ ಜರುಗುವ ಗಣರಾಜ್ಯೋತ್ಸವ ಪೆರೆಡ್‌ನಲ್ಲಿ ಭಾಗವಹಿಸುವ ರಾಜ್ಯದ ಸ್ತಬ್ಧಚಿತ್ರವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಸಿದ್ಧಪಡಿಸುತ್ತದೆ. ಅದೇ ರೀತಿ ಈ ವರ್ಷವೂ ವಾರ್ತಾ ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಮಂಜುನಾಥ್ ಪ್ರಸಾದ್ ಆಯುಕ್ತರಾದ ಡಾ.ಪಿ.ಎಸ್. ಹರ್ಷ ಮತ್ತು ಜಂಟಿ ನಿರ್ದೇಶಕರಾದ ಡಿ.ಪಿ. ಮುರಳೀಧರ್ ಅವರ ನೇತೃತ್ವದಲ್ಲಿ ಇಲಾಖೆಯ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿ ಅವರುಗಳು ಕಳೆದ ಮೂರು ತಿಂಗಳಿನಿಂದ ಸತತವಾಗಿ ನಡೆಸಿದ ಪರಿಶ್ರಮಕ್ಕೆ ಪ್ರತಿಫಲ ಸಿಕ್ಕಿದೆ.

"ಕರ್ನಾಟಕ: ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು" ಎಂಬ ವಿಷಯದಲ್ಲಿ ಈ ಬಾರಿ ಸ್ತಬ್ಧಚಿತ್ರವನ್ನು ತಯಾರಿಸಲಾಗಿತ್ತು. ಕೌಶಲ್ಯದಿಂದ ತಯಾರಿಸಿದ ಮಡಿಕೆ, ಸೂಕ್ಷ್ಮವಾಗಿ ಕೆತ್ತನೆ ಮಾಡಿದ ಶ್ರೀಗಂಧದ ಚಿಕಣಿ (ಮಿನಿಯೇಚರ್ಸ್ ಅಥವಾ ಕಿರು ಮಾದರಿ ವಸ್ತುಗಳು), ಕೈಮಗ್ಗದ ಸೀರೆಗಳು, ಕೈಯಿಂದಲೇ ತಯಾರಿಸಿದ ವಿಶಿಷ್ಟ ಕಲಾಕೃತಿಗಳೂ ಒಳಗೊಂಡಂತೆ ಭೌಗೋಳಿಕ ಸೂಚಿ ಸಂಕೇತದ ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ರಾಜ್ಯದ 16 ಕರಕುಶಲ ವಸ್ತುಗಳನ್ನು ಈ ಸ್ತಬ್ಧಚಿತ್ರವು ಒಳಗೊಂಡಿದುದು ವಿಶೇಷವಾಗಿತ್ತು.

ಚನ್ನಪಟ್ಟಣ ಮತ್ತು ಕಿನ್ನಾಳ ಮರದ ಕೆತ್ತನೆ ವಸ್ತುಗಳು, ಕಂಚಿನ ಪ್ರತಿಮೆಗಳು, ಮೆರುಗೆಣ್ಣೆಯ ಹಾಗೂ ಬಿದರಿಯ ಕಲಾಕೃತಿಗಳು, ಟೆರ್ರಾಕೋಟ ಕಲೆ, ಒಂದು ಸಾವಿರ ವರ್ಷಗಳಿಗೂ ಹೆಚ್ಚು ಇತಿಹಾಸವಿರುವ ದಂತದ ಕತ್ತನೆ ಇರುವ ಶ್ರೀಗಂಧದ ಕಲಾಕೃತಿಗಳು ಇವೇ ಮುಂತಾದ ಕರ್ನಾಟಕದ ಪ್ರಮುಖ ಕಲೆಗಳನ್ನು ಈ ಸ್ತಬ್ಧಚಿತ್ರದಲ್ಲಿ ಪ್ರದರ್ಶಿಸಲಾಗಿತ್ತು.

ಸ್ತಬ್ಧಚಿತ್ರದ ಮುಂಭಾಗದಲ್ಲಿ ಮೈಸೂರಿನ ಬೀಟೆ ಮರ ಹಾಗೂ ದಂತದ ಕೆತ್ತನೆಯಿಂದ ಮಾಡಲಾಗಿದ್ದ ಆನೆಯ ಕಲಾಕೃತಿಯನ್ನು ಇರಿಸಲಾಗಿತ್ತು. ಇದು ಸ್ತಬ್ಧಚಿತ್ರಕ್ಕೆ ಕಲಶವಿಟ್ಟಂತೆ ಅತ್ಯಂತ ಆಕರ್ಷಿತವಾಗಿ ಮೂಡಿ ಬಂದಿತ್ತು. ಈ ಕಲಾಕೃತಿಯ ಕೆಳಭಾಗದಲ್ಲಿ ಯಕ್ಷಗಾನ ಬೊಂಬೆಯಾಟದ ಪ್ರದರ್ಶನವನ್ನು ತೋರಿಸಲಾಗಿತ್ತು. ಮಧ್ಯದಲ್ಲಿ ಕಣ್ಮನ ಸೆಳೆಯುವ ಬಿದರಿ ಕಲೆಯ ಹೂಜಿಯನ್ನು ಹಾಗೂ ಹೂಜಿಯ ಅಕ್ಕ ಪಕ್ಕದಲ್ಲಿ ಲೋಹದ ಭೂತಾರಾಧನೆಯ ಮುಖವಾಡದ ಕಲಾಕೃತಿಗಳಿದ್ದವು. ಅದರ ಹಿಂಬದಿಯಲ್ಲಿ ಕಿನ್ನಾಳದ ಕಲೆಯಿಂದ ಸಿದ್ಧಪಡಿಸಿದ್ದ ಆಂಜನೇಯ ಸ್ವಾಮಿ ಮೂರ್ತಿಯನ್ನು, ಮತ್ತು ಅದರ ಅಕ್ಕ ಪಕ್ಕದಲ್ಲಿ ಚನ್ನಪಟ್ಟಣದ ಬೊಂಬೆಗಳು, ಶ್ರೀಗಂಧ ಮರದ ಕೆತ್ತನೆಯ ಮೂರ್ತಿಗಳನ್ನು ಇರಿಸಲಾಗಿತ್ತು.

ನಶಿಸಿ ಹೋಗುತ್ತಿದ್ದ ಪಾರಂಪರಿಕ ಕರಕುಶಲ ವಸ್ತುಗಳ ತಯಾರಿಕಾ ಕಲೆಯನ್ನು ಉಳಿಸಲು ಪ್ರಮುಖ ಪಾತ್ರವಹಿಸಿದ್ದ, ಸ್ವಾತಂತ್ರ್ಯ ಹೋರಾಟಗಾರರು, ಅಭಿನೇತ್ರಿ, ಸಮಾಜ ಸೇವಕರು, ಕಲಾ ಉತ್ತೇಜಕರೂ ಎಲ್ಲವೂ ಆಗಿದ್ದ ಕರ್ನಾಟಕದವರೇ ಆದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ಬಾಗೀನ ನೀಡುತ್ತಿರುವಂತಹ ದೊಡ್ಡ ಪ್ರತಿಮೆಯನ್ನು ಕೊನೆಯ ಭಾಗದಲ್ಲಿ ಇರಿಸಲಾಗಿತ್ತು. ಕಮಲಾದೇವಿ ಅವರ ಕೈಯಲ್ಲಿದ್ದ ಬಾಗೀನದ ಮೊರದಲ್ಲಿ ಗಂಧದ ಪೆಟ್ಟಿಗೆ, ನವಿಲಿನಾಕಾರದ ದೀಪದ ಕಲಶಗಳು, ಸಂಡೂರಿನ ಬಾಳೆ ನಾರಿನ ಚೀಲಗಳು, ಮರದ ಕೆತ್ತನೆಯ ಹಸು ಕರು, ಮೊಳಕಾಲ್ಮೂರಿನ ಸೀರೆ. ಕುಪ್ಪಸವನ್ನು ಇರಿಸಲಾಗಿತ್ತು. ಒಟ್ಟಿನಲ್ಲಿ ಅಧಿಕಾರಿಗಳ ಸೂಕ್ಷ್ಮ ಬುದ್ದಿವಂತಿಕೆಯಿಂದ ಶಶಿಧರ್ ಅಡಪ ಅವರ ಕಲಾ ನಿರ್ದೇಶನದಲ್ಲಿ ಸ್ತಬ್ಧಚಿತ್ರವು ಅತ್ಯಂತ ಸುಂದರವಾಗಿ ಮೂಡಿಬಂದಿತು. ಹಾಗೆಯೇ ಪ್ರವೀಣ್ ಡಿ. ರಾವ್ ಅವರ ಸಂಯೋಜನೆಯಲ್ಲಿ ಮೂಡಿ ಬಂದ ಹಿನ್ನೆಲೆ ಸಂಗೀತವು ಗ್ರಾಮೀಣ ಸೊಗಡಿನ ಶೈಲಿಯಲ್ಲಿ ತುಂಬಾ ಇಂಪಾಗಿತ್ತು. ಈ ಸಂಗೀತಕ್ಕೆ ತಕ್ಕಂತೆ ಸ್ತಬ್ಧಚಿತ್ರದ ಅಕ್ಕಪಕ್ಕದಲ್ಲಿ ಯಕ್ಷಗಾನ ಕಲಾವಿದರು ನೃತ್ಯವನ್ನು ಪ್ರದರ್ಶಿಸಿದರು.



ಈ ಹಿಂದೆ ಸರ್ಕಾರದ ಪರವಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ಮಿಸಿದ ಐದು ಸ್ತಬ್ಧಚಿತ್ರಗಳಿಗೆ ಪ್ರಶಸ್ತಿಗಳು ಸಂದಿವೆ. 2005 ರಲ್ಲಿ ಮಹಾಮಸ್ತಕಾಭಿಷೇಕ ಸ್ತಬ್ಧಚಿತ್ರಕ್ಕೆ ಮೊದಲ ಬಹುಮಾನ ಬಂದಿದ್ದರೆ, 2008 ರಲ್ಲಿ ನಿರ್ಮಿಸಿದ್ದ ಹೊಯ್ಸಳ ವಾಸ್ತುಶಿಲ್ಪ ಮತ್ತು 2011 ರಲ್ಲಿ ನಿರ್ಮಿಸಿದ್ದ ಬಿದರಿ ಕಲೆಯ ಸ್ತಬ್ಧಚಿತ್ರಗಳಿಗೆ ದ್ವಿತೀಯ ಬಹುಮಾನ ಮತ್ತು 2012 ರಲ್ಲಿ ನಿರ್ಮಿಸಿದ್ದ ಭೂತಾರಾಧನೆ ಮತ್ತು 2015 ರಲ್ಲಿ ನಿರ್ಮಿಸಿದ್ದ ಚನ್ನಪಟ್ಟಣದ ಆಟಿಕೆಗಳ ಸ್ತಬ್ಧಚಿತ್ರಗಳಿಗೆ ತೃತೀಯ ಬಹುಮಾನ ಬಂದಿದೆ. ಈ ವರ್ಷ ದ್ವಿತೀಯ ಬಹುಮಾನ ದೊರಕಿರುವುದರಿಂದ ಇದುವರೆವಿಗೂ ಕರ್ನಾಟಕದ ಸ್ತಬ್ಧಚಿತ್ರಕ್ಕೆ ಒಟ್ಟು ಆರು ಬಾರಿ ಬಹುಮಾನ ಬಂದಂತ್ತಾಗಿದೆ.

ರಾಜ್ಯದ ಸ್ತಬ್ಧಚಿತ್ರಕ್ಕೆ ಬಹುಮಾನ ಬಂದ ವಿಷಯ ಗೊತ್ತಾದ ಕೂಡಲೇ ಟ್ವೀಟ್ ಮಾಡಿದ ಮುಖ್ಯಮಂತ್ರಿ ಬಸವರಾಜ ಎಸ್ ಬೊಮ್ಮಾಯಿ ಅವರು ರಾಜ್ಯದ ಸ್ತಬ್ಧಚಿತ್ರವು ಪ್ರದರ್ಶನದಲ್ಲಿ ಎರಡನೇ ಬಹುಮಾನ ಪಡೆದಿರುವುದಕ್ಕೆ ಸಂತಸವಾಗಿದೆ, ಇದು ರಾಜ್ಯ ಹೆಮ್ಮೆ ಪಡುವಂತಹ ವಿಷಯವಾಗಿದೆ ಎಂದು ತಿಳಿಸಿದರು. ಅಲ್ಲದೆ ಈ ಬಹುಮಾನ ಪಡೆಯುವಲ್ಲಿ ಶ್ರಮವಹಿಸಿದ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಆಯುಕ್ತರಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.



Downloaded From: www.kpscvaani.com





# ಅಸಾಂಕ್ರಾಮಿಕ ರೋಗಗಳ ತಪಾಸಣೆ ಪೂರ್ಣಗೊಳಿಸಿದ ದೇಶದ ಮೊದಲ ಜಿಲ್ಲೆ ಚಿಕ್ಕಮಗಳೂರು



**ಜನಸಾಮಾನ್ಯರ ಆರೋಗ್ಯ ರಕ್ಷಣೆಯ ಕಾಳಜಿಯಿಂದ ಜಾರಿಗೊಂಡ ಸರಕಾರದ ಯೋಜನೆಗಳನ್ನು ತಳಸ್ಥರಕ್ಕೆ ತಲುಪಿಸಿ, ಜನರಿಗೆ ಉತ್ತಮ ಆರೋಗ್ಯ ರಕ್ಷಣೆ ನೀಡಿ, ಅವರ ಭವಿಷ್ಯವನ್ನು ಯಾವ ರೀತಿ ಉತ್ತಮ ಪಡಿಸಬಹುದು ಎಂಬುದಕ್ಕೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರಕಾರದ ಯೋಜನೆಯೊಂದು ಯಶೋಗಾಥೆಯನ್ನು ಸಾರುತ್ತಿದೆ.**

ಬಿ.ಎ. ಖಾದರ್ ಶಾ

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯಡಿ 30 ವರ್ಷ ಮೇಲ್ಪಟ್ಟವರ ನೋಂದಣಿ ಮತ್ತು ಸಾಂಕ್ರಾಮಿಕವಲ್ಲದ ರೋಗಗಳಿಂದ ಬಳಲುತ್ತಿರುವ ರೋಗಿಗಳ ತಪಾಸಣೆಯನ್ನು ಸಂಪೂರ್ಣಗೊಳಿಸುವ ಮೂಲಕ ಚಿಕ್ಕಮಗಳೂರು ಜಿಲ್ಲೆಯು ಅದ್ವಿತೀಯ ಸಾಧನೆ ಮಾಡಿದೆ. ಈ ಸಾಧನೆ ಮಾಡಿದ ರಾಷ್ಟ್ರದ ಮೊದಲ ಜಿಲ್ಲೆಯಾಗಿ ಚಿಕ್ಕಮಗಳೂರು ಗುರುತಿಸಲ್ಪಟ್ಟಿದೆ.

ಚಿಕ್ಕಮಗಳೂರು ಜಿಲ್ಲಾಡಳಿತವು ರಾಷ್ಟ್ರೀಯ ಮಧುಮೇಹ, ರಕ್ತದೊತ್ತಡ, ಅರ್ಬುಧ, ಹೃದಯ ಸಂಬಂಧಿತ ಹಾಗೂ ಪಾರ್ಶ್ವವಾಯು ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮ (NPCDCS)ದಡಿ ಜಿಲ್ಲೆಯಾದ್ಯಂತ ಸಮುದಾಯ ಆಧಾರಿತ ಅಸಾಂಕ್ರಾಮಿಕ ರೋಗಗಳ ತಪಾಸಣಾ ಶಿಬಿರವನ್ನು ಏರ್ಪಡಿಸಿ, ಸಮಗ್ರವಾಗಿ ಎಲ್ಲರನ್ನೂ ತಪಾಸಣೆಗೊಳಪಡಿಸಿ, ಅವರಿಗೆ ಸೂಕ್ತ ಚಿಕಿತ್ಸೆ ನೀಡುವ ಮಹತ್ವದ ಕಾರ್ಯಕ್ರಮ ಜಾರಿಗೊಳಿಸಿತು. ಮಧುಮೇಹ, ರಕ್ತದೊತ್ತಡ ಮತ್ತು ಕ್ಯಾನ್ಸರ್ ರೋಗಗಳು ಅಸಾಂಕ್ರಾಮಿಕವೆಂದು ಗುರುತಿಸಿದೆ. ಅಂದರೆ, ಇವು ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂತಹ ಸಾಂಕ್ರಾಮಿಕ ರೋಗವಲ್ಲ.

ಜಿಲ್ಲಾಧಿಕಾರಿ ಕೆ.ಎನ್. ರಮೇಶ್ ಹಾಗೂ ಜಿಲ್ಲಾ ಆರೋಗ್ಯ ಸೊಸೈಟಿ ಅಧ್ಯಕ್ಷರೂ ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿ. ಪ್ರಭು ಅವರ ಮೇಲ್ವಿಚಾರಣೆಯಲ್ಲಿ ಸೆಪ್ಟಂಬರ್ 2021ರ ಮೊದಲ ವಾರದಲ್ಲಿ ಜಿಲ್ಲೆಯಾದ್ಯಂತ ಅಸಾಂಕ್ರಾಮಿಕ ರೋಗಗಳ ತಪಾಸಣೆ ನಡೆಯಿತು. ಇದಕ್ಕಾಗಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ಉಮೇಶ್ ಎಸ್.ಎನ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ಮಂಜುನಾಥ್, ಜಿಲ್ಲಾ ಕಾರ್ಯಕ್ರಮ ಸಂಯೋಜನಾಧಿಕಾರಿ ಡಾ. ಮಹಾಂತೇಶ್ ವಿ. ಪೂಜಾರ್, ಡಿ.ಎಚ್‌ಡಬ್ಲ್ಯುಸಿ ಡಾ. ಸುಹಾಸ್ ಅವರ ನೇತೃತ್ವದಲ್ಲಿ ತಂಡ ರಚಿಸಿ, ಇಡೀ ಕಾರ್ಯಕ್ರಮವಾದ ರೋಗ ತಪಾಸಣೆಯನ್ನು ನವೆಂಬರ್ 30ರೊಳಗೆ ಮುಗಿಸಲು ಕಾಲಮಿತಿ ಹಾಕಿಕೊಳ್ಳಲಾಯಿತು.

ಈ ಕಾರ್ಯಕ್ರಮವನ್ನು ಯಶಸ್ಸುಗೊಳಿಸುವ ನಿಟ್ಟಿನಲ್ಲಿ ಆಶಾ ಕಾರ್ಯಕರ್ತೆಯರು, ಪ್ರಾಥಮಿಕ ಆರೋಗ್ಯ ಕೇಂದ್ರ ಅಧಿಕಾರಿಗಳು, ವೈದ್ಯಾಧಿಕಾರಿಗಳು, ತಾಲೂಕು ಆರೋಗ್ಯಾಧಿಕಾರಿಗಳಿಗೆ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಯಿತು. ಇಲಾಖೆಯ ಹಿರಿಯ ಅಧಿಕಾರಿಗಳು ಆಗಿಂದಾಗ್ಗೆ ಇವುಗಳ ಪ್ರಗತಿ ಪರಿಶೀಲನೆ ನಡೆಸಿದರು.

ಇದಕ್ಕಾಗಿ ಪ್ರತಿ ಗ್ರಾಮ ಮಟ್ಟದಲ್ಲಿಯೂ ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳನ್ನೊಳಗೊಂಡ ತಂಡ ರಚಿಸಲಾಯಿತು. ವಾಟ್ಸಾಪ್ ಗ್ರೂಪ್‌ಗಳನ್ನು ರಚಿಸಿ, ಇದಕ್ಕೆ ಬೇಕಾಗಿರುವ ಸೌಲಭ್ಯಗಳು, ತಪಾಸಣೆ ಪ್ರಗತಿಯನ್ನು ಪ್ರತಿದಿನ ಪರಿಶೀಲನೆ





Downloaded From: www.kpscvaani.com

ನಡೆಸಲಾಯಿತು. ಸಿಬ್ಬಂದಿಗಳಿಗೆ ಅಗತ್ಯವಿರುವ ಎಲ್ಲ ಬೆಂಬಲವನ್ನು, ಅಗತ್ಯ ಎಲ್ಲ ಸೌಲಭ್ಯ, ಮೂಲಸೌಕರ್ಯಗಳನ್ನು ಒದಗಿಸಲಾಯಿತು.

ಜಿಲ್ಲೆಯಲ್ಲಿ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಆರೋಗ್ಯ ಮತ್ತು ಕ್ಷೇಮ ಕೇಂದ್ರ, ಉಪಕೇಂದ್ರಗಳು ಸೇರಿದಂತೆ ಒಟ್ಟು 425 ಆರೋಗ್ಯ ಸಂಸ್ಥೆಗಳಿವೆ. ಇದರಲ್ಲಿ 225 ಉಪಕೇಂದ್ರಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮಾರ್ಪಾಡಿಸಿರುವುದು ಈ ಕಾರ್ಯಕ್ರಮಕ್ಕೆ ಉತ್ತೇಜನ ದೊರಕಿತು.

ಕಾರ್ಯಕ್ರಮದ ಮೊದಲ ಹಂತವಾಗಿ, ಚಿಕ್ಕಮಗಳೂರು ಜಿಲ್ಲೆಯಲ್ಲಿ 30 ವರ್ಷಕ್ಕಿಂತ ಮೇಲಿನ 4.80 ಲಕ್ಷ ಜನರನ್ನು ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ನೋಂದಣಿಗೊಳಿಸಲಾಯಿತು. ಈ ನೋಂದಣಿಯಲ್ಲಿ ನಿಗದಿತ ಗುರಿ ಮೀರಿ ಶೇಕಡಾ 107 ರಷ್ಟು ಪ್ರಗತಿ ಸಾಧಿಸಲಾಯಿತು.

ನಂತರ ಜಿಲ್ಲೆಯಲ್ಲಿ 30 ವರ್ಷಕ್ಕಿಂತ ಮೇಲಿನ ಎಲ್ಲರನ್ನು ಅಸಾಂಕ್ರಾಮಿಕ ರೋಗಗಳಾದ ಮಧುಮೇಹ, ಅಧಿಕ ರಕ್ತದೊತ್ತಡ ಮತ್ತು ಕ್ಯಾನ್ಸರ್ ರೋಗಗಳಿಗೆ ಸಮಗ್ರವಾಗಿ ತಪಾಸಣೆಗೊಳಪಡಿಸಲಾಯಿತು. ಇದಕ್ಕೆ ಜನರಿಂದಲೂ ಉತ್ತಮ ಸ್ಪಂದನೆ ದೊರಕಿ, ಎಲ್ಲ ವಿಧದಲ್ಲೂ ಆರೋಗ್ಯ ಇಲಾಖೆಯೊಂದಿಗೆ ಸಹಕರಿಸಿದರು.

ಅಭಿಯಾನ ರೂಪದಲ್ಲಿ ನಡೆದ ಈ ತಪಾಸಣೆ ಕಾರ್ಯಕ್ರಮದಲ್ಲಿ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅಸಾಂಕ್ರಾಮಿಕ ರೋಗ ಪ್ರಕರಣಗಳು ಪತ್ತೆಯಾದವು. ಆರೋಗ್ಯ ಕೇಂದ್ರಗಳಲ್ಲಿ ಶಿಬಿರಗಳನ್ನು ಏರ್ಪಡಿಸಿ ಹಾಗೂ ಮನೆಮನೆಗೂ ತೆರಳಿ 30 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರನ್ನೂ ತಪಾಸಣೆ ಮಾಡಲಾಯಿತು. ಈ ತಪಾಸಣೆಗೊಳಪಟ್ಟ 450223 ಜನರಲ್ಲಿ 41803 ಮಧುಮೇಹಿ ರೋಗಿಗಳು, 58317 ಅಧಿಕ ರಕ್ತದೊತ್ತಡ ರೋಗಿಗಳನ್ನು ಪತ್ತೆ ಹಚ್ಚಲಾಯಿತು. ನಂತರ ಇವರಿಗೆ ಬೇಕಾದ ಎಲ್ಲ ರೀತಿಯ ಅಗತ್ಯ ಚಿಕಿತ್ಸೆ, ಸಲಹೆಗಳನ್ನು ನೀಡಿ ಬೇಕಾದ ಔಷಧಿಗಳನ್ನು ಅವರ ಮನೆ ಬಾಗಿಲಿಗೆ ತಲುಪಿಸಲಾಯಿತು. ನಿಯಂತ್ರಣ ಮೀರಿದ ಮತ್ತು ತೊಡಕಾಗಿರುವ ರಕ್ತದೊತ್ತಡ ಮತ್ತು ಮಧುಮೇಹ ಪ್ರಕರಣಗಳ ರೋಗಿಗಳನ್ನು ಆಸ್ಪತ್ರೆಗೆ ದಾಖಲಿಸಿ, ಆಯುಷ್ಮಾನ್ ಭಾರತ್ ನೆರವಿನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಈ ತಪಾಸಣೆಯಲ್ಲಿ ಕಂಡಬಂದ ಮತ್ತೊಂದು ಗಮನಾರ್ಹ ಅಂಶವೇನೆಂದರೆ, ಕ್ಯಾನ್ಸರ್ ಬಾಧಿತ ಹಲವು ಪ್ರಕರಣಗಳು ಈ ಸಂದರ್ಭದಲ್ಲಿ ಪತ್ತೆಯಾಗಿವೆ. 846 ಬಾಯಿ ಕ್ಯಾನ್ಸರ್, 134 ಸ್ತನ ಕ್ಯಾನ್ಸರ್ ಹಾಗೂ 43 ಗರ್ಭಕೋಶದ ಕ್ಯಾನ್ಸರ್ ಪ್ರಕರಣಗಳು ಕಂಡುಬಂತು. ಈ ರೋಗಿಗಳನ್ನು ಆಸ್ಪತ್ರೆಗಳಿಗೆ ಹೆಚ್ಚಿನ ಪರೀಕ್ಷೆಗೆ ಕಳುಹಿಸಿ, ರೋಗದ ದೃಢೀಕರಣಕ್ಕೆ ಕ್ರಮ ಕೈಗೊಳ್ಳಲಾಯಿತು. ಕ್ಯಾನ್ಸರ್ ದೃಢಪಟ್ಟ ರೋಗಿಗಳಿಗೆ ಮುಂದಿನ ಹಂತದ ಚಿಕಿತ್ಸೆ ನೀಡಲು ಆಯುಷ್ಮಾನ್ ಭಾರತ್ ಯೋಜನೆಯಡಿ ಕ್ರಮ ಕೈಗೊಂಡು, ಉನ್ನತ ಆಸ್ಪತ್ರೆಗಳಲ್ಲಿ ಸಕಾಲದಲ್ಲಿ ಸೂಕ್ತ ಚಿಕಿತ್ಸೆಯನ್ನು ಒದಗಿಸಲಾಗುತ್ತಿದೆ.

ಈ ಎಲ್ಲ ಪ್ರಕರಣಗಳಲ್ಲಿ ಚಿಕಿತ್ಸೆ ನೀಡುವುದರೊಂದಿಗೆ ಅವರ ಆರೋಗ್ಯದ ಮೇಲೆ ನಿರಂತರ ಗಮನಹರಿಸಲಾಗಿದೆ. ಮನೆಯಲ್ಲಿಯೇ ಚಿಕಿತ್ಸೆ ಪಡೆಯುತ್ತಿರುವವರಿಗೆ ಆರೋಗ್ಯ ಕಾರ್ಯಕರ್ತರು ನಿರಂತರವಾಗಿ ಭೇಟಿ ನೀಡಿ, ಅವರ ಆರೋಗ್ಯದ ಮೇಲೆ ನಿಗಾ ಇಟ್ಟಿದ್ದಾರೆ.

ಗಮನಾರ್ಹ ಅಂಶವೇನೆಂದರೆ, ಜಿಲ್ಲೆಯಲ್ಲಿ ಇಷ್ಟೊಂದು ಸಂಖ್ಯೆಯ ಅಸಾಂಕ್ರಾಮಿಕ ರೋಗಿಗಳು ಇದ್ದರೂ, ಬಹುತೇಕ ಪ್ರಕರಣಗಳು ಈ ಕಾರ್ಯಕ್ರಮದ ತಪಾಸಣಾ ಅವಧಿಯಲ್ಲಿ ಬೆಳಕಿಗೆ ಬಂದವುಗಳಾಗಿವೆ. ಹೆಚ್ಚಿನವರಿಗೆ ಅದುವರೆಗೆ ತಮಗೆ ಇಂತಹ ಆರೋಗ್ಯ ಸಮಸ್ಯೆ ಇತ್ತು ಎಂಬುದೇ ಗೊತ್ತಿರಲಿಲ್ಲ. ಕೆಲವರಿಗೆ ಹಿಂದೆಯೇ ಆರೋಗ್ಯ ಸಮಸ್ಯೆಗಳು ಕಂಡುಬಂದಿದ್ದರೂ, ವೈದ್ಯರಿಗೆ ತೋರಿಸದೆ ಮತ್ತು ಸೂಕ್ತ ಚಿಕಿತ್ಸೆ ಪಡೆಯದೆ, ತಮ್ಮಷ್ಟಕ್ಕೆ ರೋಗದಿಂದ ಬಳಲುತ್ತಿದ್ದರು.

ತಮ್ಮ ಆರೋಗ್ಯ ಸಮಸ್ಯೆಯನ್ನು ಇತರರಿಗೂ ತಿಳಿಸದೆ ಹಾಗೂ ಕೆಲವೊಮ್ಮೆ ಚಿಕಿತ್ಸಾ ವೆಚ್ಚದ ಹಿಂಜರಿಕೆಯೂ ಇದ್ದುದರಿಂದ ಹಿಂಜರಿಯುತ್ತಿದ್ದರು. ಆದರೆ, ಜಿಲ್ಲಾಡಳಿತ ಕಾಳಜಿಯಿಂದಾಗಿ ಇಷ್ಟೊಂದು ರೋಗಿಗಳಿಗೆ ತಮ್ಮಲ್ಲಿದ್ದ ಆರೋಗ್ಯ ಸಮಸ್ಯೆ ಪತ್ತೆಯಾಗಿ, ಸಕಾಲಕ್ಕೆ ಸೂಕ್ತ ಚಿಕಿತ್ಸೆ ದೊರಕಿಸಿ, ಯಾವುದೇ ವೆಚ್ಚವಿಲ್ಲದೇ, ಆಯುಷ್ಮಾನ್ ಭಾರತ್ ಯೋಜನೆಯಡಿಯಲ್ಲಿ ಚಿಕಿತ್ಸಾ ವೆಚ್ಚ ಭರಿಸಿ, ಭವಿಷ್ಯದಲ್ಲಿ ಅವರಿಗೆ ಉತ್ತಮ ಆರೋಗ್ಯಯುತ ಜೀವನವನ್ನು ನೀಡಿದೆ. ಈ ಮೂಲಕ ಅವರಿಗೂ ಮತ್ತು ಅವರ ಕುಟುಂಬಕ್ಕೂ ಜಿಲ್ಲಾಡಳಿತವು ನೆಮ್ಮದಿ ದೊರಕಿಸಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಚಿಕ್ಕಮಗಳೂರು ಜಿಲ್ಲೆಯ ಈ ಯಶೋಗಾಥೆಯನ್ನು ತಿಳಿದು ಅತೀವ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸರಕಾರದ ಯೋಜನೆಯನ್ನು ಜನಸಾಮಾನ್ಯರಿಗೆ ಆಪತ್ಬಾಂಧವವಾಗಿಸಿ, ಅವರ ಮನೆ ಬಾಗಿಲಿಗೇ ಅದರ ಲಾಭವನ್ನು ತಲುಪಿಸಿ, ಅವರ ಜೀವನವನ್ನು ಯಾವ ರೀತಿ ಸುಮಧುರಗೊಳಿಸಬಹುದು ಎಂಬುದಕ್ಕೆ ಚಿಕ್ಕಮಗಳೂರು ಜಿಲ್ಲಾಡಳಿತದ ಈ ಕಾರ್ಯಕ್ರಮ ಉತ್ತಮ ಮಾದರಿಯಾಗಿದೆ.





Downloaded From: www.kpscvaani.com



# ಕೋವಿಡ್ ಪರೀಕ್ಷೆಯಲ್ಲಿ ಕರ್ನಾಟಕ ಮೂರನೇ ಸ್ಥಾನ

**ಆರು ಕೋಟಿ ಕೋವಿಡ್ ಪರೀಕ್ಷೆಯನ್ನು ನಡೆಸುವ ಮೂಲಕ ಹೆಚ್ಚು ಪರೀಕ್ಷೆ ನಡೆಸಿದ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯವು ಮೂರನೇ ಸ್ಥಾನವನ್ನು ಪಡೆದುಕೊಂಡಿದೆ.**

ಶುಭಾ

**ಕೋ**ವಿಡ್ ಪರೀಕ್ಷೆ ವ್ಯವಸ್ಥೆಯನ್ನು ಆರಂಭದಿಂದಲೂ ಸಮರ್ಥವಾಗಿ ಅನುಷ್ಠಾನ ಮಾಡಿರುವ ಕರ್ನಾಟಕ ರಾಜ್ಯವು ಜನವರಿ ಮಾಹೆಯ ಅಂತ್ಯದವರೆಗೆ 6 ಕೋಟಿ ಪರೀಕ್ಷೆಯ ಮೈಲುಗಲ್ಲು ತಲುಪಿದೆ. ಕೋವಿಡ್ ನಿಯಂತ್ರಣ ಕಾರ್ಯದಲ್ಲಿ ಇದು ದೊಡ್ಡ ಯಶಸ್ಸು. ರಾಜ್ಯ ಸರ್ಕಾರವು ಹೆಚ್ಚು ಹೆಚ್ಚು ಕೋವಿಡ್ ಪರೀಕ್ಷೆಯನ್ನು ಹಮ್ಮಿಕೊಳ್ಳಲಾಗಿ ರಾಜ್ಯದಲ್ಲಿ ಕೋವಿಡ್ ಸಾಂಕ್ರಾಮಿಕ ಹರಡುವಿಕೆಯನ್ನು ತಡೆಯಲು ಸಾಧ್ಯವಾಯಿತು.

ಕೋವಿಡ್ ಆರಂಭವಾದಾಗ ರಾಜ್ಯದಲ್ಲಿ ಎನ್‌ಐವಿ ಘಟಕದಲ್ಲಿ ಪರೀಕ್ಷೆ ನಡೆಸಲಾಗುತ್ತಿತ್ತು. ಆಗ ಖಚಿತತೆಗಾಗಿ ಪುಣೆಯ ಎನ್‌ಐವಿ ಘಟಕಕ್ಕೆ ಮಾದರಿಗಳನ್ನು ಕಳುಹಿಸಲಾಗುತ್ತಿತ್ತು. ನಂತರ ಹಂತಹಂತವಾಗಿ ಹೊಸ ಸರ್ಕಾರಿ ಹಾಗೂ ಖಾಸಗಿ ಪ್ರಯೋಗಾಲಯಗಳನ್ನು ಆರಂಭಿಸಲಾಯಿತು. ಸದ್ಯ ರಾಜ್ಯದಲ್ಲಿ, 99 ಸರ್ಕಾರಿ ಹಾಗೂ 169 ಖಾಸಗಿ ಸೇರಿದಂತೆ ಒಟ್ಟು 268 ಲ್ಯಾಬ್‌ಗಳು ಸದ್ಯ ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿ ಈವರೆಗೆ 1,14,12,162 ರಾಪಿಡ್ ಆಂಟಿಜೆನ್, 4,87,02,653 ಆರ್‌ಟಿಪಿಸಿಆರ್ ಹಾಗೂ ಇತರೆ



Downloaded From: www.kpscvaani.com



> ನಮ್ಮ ರಾಜ್ಯದಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳುವ ಜೊತೆಗೆ 2.5 ಲಕ್ಷ ಸಿಬ್ಬಂದಿಗೆ ತರಬೇತಿಯನ್ನು ನೀಡುವ ಮೂಲಕ ಕೋವಿಡ್ ಪರೀಕ್ಷೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದ್ದು, ಉಳಿದ ರಾಜ್ಯಗಳಿಗೂ ಮಾದರಿಯಾಗಿದೆ.
>
> **ಡಾ.ಕೆ.ಸುಧಾಕರ್,** ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರು

ವಿಧಾನಗಳು ಸೇರಿ ಒಟ್ಟು 6,01,14,815 ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. 2020 ರಲ್ಲಿ ಒಟ್ಟು 1,41,96,065, 2021 ರಲ್ಲಿ 4,23,91,357 ಹಾಗೂ 2022 ರಲ್ಲಿ ಜನವರಿ ಮಾಹೆಯ ಅಂತ್ಯದವರೆಗೆ 35,27,393 ಪರೀಕ್ಷೆಗಳನ್ನು ನಡೆಸಲಾಗಿದೆ.

ಕೋವಿಡ್–19 ಸಾಂಕ್ರಾಮಿಕವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಉತ್ತಮ ಪರೀಕ್ಷಾ ವ್ಯವಸ್ಥೆ ಕೂಡ ಕಾರಣ. ಆರಂಭದಿಂದಲೂ ಕರ್ನಾಟಕ ಪರೀಕ್ಷಾ ವ್ಯವಸ್ಥೆಯಲ್ಲಿ ಮುಂದಿದ್ದು, ಉತ್ತಮ ಪರೀಕ್ಷೆ ಹಾಗೂ ಟ್ರ್ಯಾಕಿಂಗ್ ವಿಧಾನ ಅಳವಡಿಸಿಕೊಂಡಿದೆ. ಈಗ 6 ಕೋಟಿ ಪರೀಕ್ಷೆಗಳ ಮೂಲಕ ಕೋವಿಡ್ ಹೋರಾಟದಲ್ಲಿ ಮುಂಚೂಣಿಯಲ್ಲಿದೆ ಎಂಬುದನ್ನು ಮತ್ತೆ ಸಾಬೀತುಪಡಿಸಿದೆ. ಹೆಚ್ಚು ಕೋವಿಡ್ ಪರೀಕ್ಷೆ ನಡೆಸಿದ ರಾಜ್ಯಗಳಲ್ಲಿ ರಾಜ್ಯವು ಇಡೀ ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ಇದನ್ನು ಸಾಧ್ಯವಾಗಿಸಿದ ಎಲ್ಲಾ ಜಿಲ್ಲಾಡಳಿತ ಹಾಗೂ ಆರೋಗ್ಯ ಸಿಬ್ಬಂದಿಗೆ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ.ಕೆ.ಸುಧಾಕರ್ ಅವರು ಅಭಿನಂದನೆ ಸಲ್ಲಿಸಿದ್ದಾರೆ.

**ಸಾಮರ್ಥ್ಯ ಹೆಚ್ಚಳ:**

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಗಳು ಆರಂಭದಿಂದಲೇ 5 ಟಿ ವಿಧಾನ (ಟೆಸ್ಟ್, ಟ್ರ್ಯಾಕ್, ಟ್ರೇಸಿಂಗ್, ಟ್ರಯಾಜಿಂಗ್, ಟೆಕ್ನಾಲಜಿ) ಅನುಸರಿಸಿದ್ದವು. 20,000 ಜನಸಂಖ್ಯೆಗೆ ಅನುಗುಣವಾಗಿ, ಒಟ್ಟು 3,678 (ಸರ್ಕಾರಿ 3,102, ಖಾಸಗಿ 666) ಮಾದರಿ ಸಂಗ್ರಹ ಕೇಂದ್ರಗಳನ್ನು ಆರಂಭಿಸಲಾಯಿತು. ಜೊತೆಗೆ ಸರ್ಕಾರಿ ಆಸ್ಪತ್ರೆ, ಮೆಡಿಕಲ್ ಕಾಲೇಜು, ಖಾಸಗಿ ಆಸ್ಪತ್ರೆ, ಲ್ಯಾಬ್‌ಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ ಆರಂಭಿಸಲಾಯಿತು. ಒಟ್ಟು 63 ವೈದ್ಯಕೀಯ ಕಾಲೇಜುಗಳಲ್ಲಿ ಆರ್‌ಟಿಪಿಸಿಆರ್ ಪರೀಕ್ಷೆ ಆರಂಭವಾದವು. ಆರಂಭದಲ್ಲಿ 10–12 ಸರ್ಕಾರಿ ಪ್ರಯೋಗಾಲಯಗಳಲ್ಲಿ ಮಾತ್ರ ಆರ್‌ಟಿಪಿಸಿಆರ್ ಪರೀಕ್ಷಾ ವ್ಯವಸ್ಥೆ ಇದ್ದು, ಈಗ ಆ ಸಂಖ್ಯೆ 57 ಕ್ಕೇರಿದೆ. 108 ಆರ್‌ಎನ್‌ಎ ಎಕ್ಸ್‌ಟ್ರ್ಯಾಕ್ಟರ್, 139 ಆರ್‌ಟಿಪಿಸಿಆರ್ ಯಂತ್ರ ಹಾಗೂ ಒಂದು ಪೂರ್ಣ ಪ್ರಮಾಣದ ಯಂತ್ರದ ಮೂಲಕ ದಿನದ ಪರೀಕ್ಷಾ ಸಾಮರ್ಥ್ಯವನ್ನು 1,20,800 ಕ್ಕೆ ಏರಿಸಲಾಗಿದೆ.

ದಕ್ಷಿಣ ಆಫ್ರಿಕಾದಲ್ಲಿ ಓಮಿಕ್ರಾನ್ ವೈರಾಣು ಪ್ರಕರಣ ಪತ್ತೆಯಾದ ಬಳಿಕ, ರಾಜ್ಯದ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರಲ್ಲಿ ಶೇ.2 ರಷ್ಟು ಪರೀಕ್ಷೆಗೊಳಪಡಿಸುವ ಕ್ರಮ ಜಾರಿ ಮಾಡಲಾಯಿತು. ನಂತರ ಡಿಸೆಂಬರ್‌ನಿಂದ ಪರೀಕ್ಷಾ ಗುರಿಯನ್ನು 80,000 ದಿಂದ 1 ಲಕ್ಷಕ್ಕೆ ಹೆಚ್ಚಿಸಲಾಯಿತು.

**ಮಕ್ಕಳ ಪರೀಕ್ಷೆ:**

ಕೋವಿಡ್ 3 ನೇ ಅಲೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವ ಅಭಿಪ್ರಾಯದ ಹಿನ್ನೆಲೆಯಲ್ಲಿ, ಒಟ್ಟು ಪರೀಕ್ಷೆಯಲ್ಲಿ ಕಡ್ಡಾಯವಾಗಿ ಶೇ.2 ರಷ್ಟು ಪರೀಕ್ಷೆಯನ್ನು ಮಕ್ಕಳಿಗೆ ನಡೆಸುವ ಕ್ರಮ ತರಲಾಯಿತು. ಡಿಸೆಂಬರ್ 1 ರಿಂದ ಜನವರಿ 20 ರ ಅವಧಿಯಲ್ಲಿ ನಡೆಸಲಾದ ಒಟ್ಟು ಪರೀಕ್ಷೆಯಲ್ಲಿ, 29% ರಷ್ಟು ಮಕ್ಕಳಿಗೆ ಪರೀಕ್ಷೆ ನಡೆಸಲಾಗಿದೆ. ಜೊತೆಗೆ 15 ದಿನಕ್ಕೊಮ್ಮೆ ಕಾಲೇಜು, ಪ್ರೌಢಶಾಲೆ, ಹೋಟೆಲ್, ರೆಸ್ಟೋರೆಂಟ್, ಅಡುಗೆ ಸಿಬ್ಬಂದಿ ಮೊದಲಾದವರಿಗೂ ರಾಂಡಮ್ ಪರೀಕ್ಷೆ ಮಾಡಲಾಗುತ್ತಿದೆ.

ಕೋವಿಡ್ ಮೂರನೇ ಅಲೆ ನಿರ್ವಹಣೆಗಾಗಿ ಜನವರಿ 18 ರಿಂದ ದಿನದ ಪರೀಕ್ಷಾ ಗುರಿ 2 ಲಕ್ಷಕ್ಕೆ ನಿಗದಿ ಪಡಿಸಲಾಗಿದ್ದು, ಪ್ರಾಥಮಿಕ ಸಂಪರ್ಕ ಹಾಗೂ ರೋಗಲಕ್ಷಣ ಇರುವವರಿಗೆ ಪರೀಕ್ಷೆಗೆ ಒತ್ತು ನೀಡಲಾಗಿದೆ. RAT ಪರೀಕ್ಷೆಯಲ್ಲಿ ನೆಗಟಿವ್ ವರದಿ ಬಂದರೂ, ರೋಗ ಲಕ್ಷಣವಿದ್ದರೆ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಆಶಾ ಕಾರ್ಯಕರ್ತೆಯರಿಂದ ಮನೆಮನೆಗೆ ಭೇಟಿ ನೀಡಿ ಪರೀಕ್ಷೆ ನಡೆಸಲಾಗಿದ್ದರೆ, ಸಂಚಾರಿ ತಂಡಗಳನ್ನು ಬಳಸಿಕೊಂಡು ಮಾನಸಿಕ ಅಸ್ವಸ್ಥರು, ಅಂಗವಿಕಲರ ಮನೆಗೆ ಭೇಟಿ ನೀಡಿ ಪರೀಕ್ಷೆ ನಡೆಸಲಾಗಿದೆ. ಹಾಗಾಗಿ ತಳಮಟ್ಟದಿಂದಲೂ ಕೋವಿಡ್ ಪರೀಕ್ಷೆಗೆ ರಾಜ್ಯ ಸರ್ಕಾರವು ಹೆಚ್ಚಿನ ಒತ್ತು ನೀಡಿದ ಪರಿಣಾಮವೇ ರಾಜ್ಯವು ಕೋವಿಡ್ ಪರೀಕ್ಷೆ ನಡೆಸುವುದಲ್ಲಿ ಮೂರನೇ ಸ್ಥಾನ ಹೊಂದಲು ಸಾಧ್ಯವಾಗಿದೆ.

### ತರಬೇತಿಗೆ ತಂತ್ರಜ್ಞಾನ ಬಳಕೆ

ಆರೋಗ್ಯ ಸಿಬ್ಬಂದಿಗೆ ಹೊಸ ವೈರಾಣು ಕುರಿತು ತರಬೇತಿ ನೀಡಲು ಲಾಕ್‌ಡೌನ್ ಮೊದಲಾದ ಅಡಚಣೆಗಳು ಬಂದರೂ ಕೂಡ, ರಾಜ್ಯ ಸರ್ಕಾರವು ರಾಜೀವ್ ಗಾಂಧಿ ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಸಂಸ್ಥೆಗಳ ನೆರವಿನಲ್ಲಿ ತಂತ್ರಜ್ಞಾನ ಬಳಸಿ 2.5 ಲಕ್ಷ ಸಿಬ್ಬಂದಿಗೆ ತರಬೇತಿ ನೀಡಲಾಗಿರುವುದನ್ನು ಕೇಂದ್ರ ಸರ್ಕಾರವು ಗುರುತಿಸಿದೆ.



Downloaded From: www.kpscvaani.com

# ಲೋಕಾರ್ಪಣೆಗೊಂಡ ನವೀಕೃತ
# ಸರ್ಕಾರಿ ವೈಮಾನಿಕ ತರಬೇತಿ ಶಾಲೆ

**ಪಾರಂಪರಿಕ ಹಿನ್ನೆಲೆಯಿರುವ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ನವೀಕರಣಗೊಳಿಸಿ ಸುಭಾಷ್ ಚಂದ್ರ ಬೋಸ್ ಅವರ ಜನ್ಮ ದಿನಾಚರಣೆಯಂದು ಸರ್ಕಾರವು ಲೋಕಾರ್ಪಣೆ ಮಾಡಿದೆ.**

ಶಾರ್ವಿ

ಬೆಂಗಳೂರಿನ ಜಕ್ಕೂರಿನಲ್ಲಿರುವ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಸುಮಾರು 70 ವರ್ಷಕ್ಕೂ ಮೇಲ್ಪಟ್ಟ ಪಾರಂಪರಿಕ ಹಿನ್ನೆಲೆಯಿರುವ ಅಪರೂಪದ ಸಂಸ್ಥೆ. ಅಂದಿನ ಮೈಸೂರು ಮಹಾರಾಜರು ಸುಮಾರು 214 ಎಕರೆ ಜಮೀನನ್ನು ವಿಮಾನ ನಿಲ್ದಾಣಕ್ಕಾಗಿ ನೀಡಿದ್ದರು. ಇದರಿಂದಾಗಿ 1949ರಲ್ಲಿ ಜಕ್ಕೂರು ವಿಮಾನ ನಿಲ್ದಾಣದಲ್ಲಿ ಸರ್ಕಾರಿ ವೈಮಾನಿಕ ಶಾಲೆ ಸ್ಥಾಪಿತವಾಯಿತು. ಅಂದಿನ ಪ್ರಧಾನಿ ಜವಹರಲಾಲ್ ನೆಹರೂ ಶಾಲೆಯನ್ನು ಉದ್ಘಾಟಿಸಿದ್ದರು.

ಇದು ರಾಜ್ಯದಲ್ಲಿ ಇರುವ ಏಕೈಕ ಸರ್ಕಾರಿ ಹಾರಾಟ ತರಬೇತಿ ಕೇಂದ್ರ. ಇದು ರಾಷ್ಟ್ರಮಟ್ಟದಲ್ಲಿ ಒಂದು ಹೆಮ್ಮೆಯ ಪ್ರತೀಕ. ಇಂತಹ ಪ್ರತಿಷ್ಠಿತ ಶಾಲೆ ಗತ ವೈಭವವನ್ನು ಮರಳಿ ಪಡೆದಿದೆ. ಇದಕ್ಕೆ ಪ್ರಮುಖ ಕಾರಣ ರಾಜ್ಯ ಸರ್ಕಾರದ ಆಸಕ್ತಿ. ಸುಸಜ್ಜಿತವಾಗಿ ನವೀಕರಣಗೊಂಡಿರುವ ಜಕ್ಕೂರು ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ಇತ್ತೀಚೆಗಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲೋಕಾರ್ಪಣೆಗೊಳಿಸಿದರು. ಕ್ರೀಡಾ ಸಚಿವರಾದ ಡಾ.ನಾರಾಯಣಗೌಡ ಅವರು ಜಿಎಫ್‌ಟಿಎಸ್ ಲೋಗೋ ಅನಾವರಣಗೊಳಿಸಿದರು.

ನವೀಕೃತ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಜೊತೆಗೆ, ಟ್ವಿನ್ ಎಂಜಿನ್ ವಿಮಾನ ಲೋಕಾರ್ಪಣೆ, ಸಿದ್ದಿ ಜನಾಂಗದ ಕ್ರೀಡಾಪಟುಗಳ ತರಬೇತಿಗೂ ಸಹ ಚಾಲನೆ ನೀಡಲಾಗಿದೆ. ಯುವ









Downloaded From: www.kpscvaani.com

**ಎರಡು ಕೋಟಿ ವೆಚ್ಚದಲ್ಲಿ ರನ್ ವೇ ನಿರ್ಮಾಣ:**

ಎರಡು ಕೋಟಿ ವೆಚ್ಚದಲ್ಲಿ 874 ಮೀಟರ್ ರನ್‌ವೇ ಉನ್ನತಿಕರಿಸಲಾಗಿದೆ. ಶಾಲೆಯಲ್ಲಿದ್ದ ಐದು ಸಿಂಗಲ್ ಎಂಜಿನ್ ವಿಮಾನಗಳನ್ನು ದುರಸ್ಥಿಗೊಳಿಸಿ, ತರಬೇತಿಗೆ ಸಿದ್ಧಪಡಿಸಲಾಗಿದೆ. ಅಲ್ಲದೇ, 5 ಕೋಟಿ ವೆಚ್ಚದಲ್ಲಿ ಟ್ವಿನ್ ಎಂಜಿನ್ ಖರೀದಿಸಲಾಗಿದೆ. ಇದರಿಂದ ಕರ್ನಾಟಕದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ.

ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯವೈಖರಿಗೆ ಮುಖ್ಯಮಂತ್ರಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಹಿಂದೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇದೆಯೋ ಇಲ್ಲವೋ ಅನ್ನೋ ರೀತಿಯಲ್ಲಿತ್ತು. ಹೆಚ್ಚಿನ ರೀತಿಯಲ್ಲಿ ಗಮನ ಸೆಳೆದಿರಲಿಲ್ಲ. ಪ್ರಸ್ತುತ ದಿನಗಳಲ್ಲಿ ಇಲಾಖೆ ಹಲವು ಯೋಜನೆಗಳನ್ನು ರೂಪಿಸಿದೆ. ಅಮೃತ ಕ್ರೀಡಾ ದತ್ತು ಯೋಜನೆ, ಯುವ ಜನೋತ್ಸವ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಸ್ವಂತ ಶಕ್ತಿಯಿಂದ ಮಾಡಿದೆ. ಅದೆಲ್ಲದಕ್ಕೂ ಕಿರೀಟಪ್ರಾಯದ ರೀತಿಯಲ್ಲಿ ವೈಮಾನಿಕ ತರಬೇತಿ ಶಾಲೆಯನ್ನು ಆರಂಭ ಮಾಡಲಾಗಿದೆ. ರನ್‌ವೇ ವಿಸ್ತರಿಸುವುದಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಅವರು ಭರವಸೆ ನೀಡಿದ್ದಾರೆ.

**ಕನಸು ನನಸು**

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವ್ಯಾಪ್ತಿಗೆ ಬರುವ ಈ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ನಾನಾ ಕಾರಣಗಳಿಂದ ಸ್ಥಗಿತಗೊಂಡಿತ್ತು. ಆದರೆ ಸರ್ಕಾರದ ಆಸಕ್ತಿಯಿಂದಾಗಿ ಬೇಗ ಪುನಾರಂಭಿಸಲು ಕಾರಣ ಆಗಿದೆ. ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಆರಂಭಿಸುವುದರಿಂದ ಗ್ರಾಮೀಣ ಪ್ರತಿಭೆಗಳಿಗೆ ಹೆಚ್ಚಿನ ಅನುಕೂಲ ಆಗಲಿದೆ.

**ತರಬೇತಿ ಆರಂಭ**

ಜಕ್ಕೂರು ವೈಮಾನಿಕ ಶಾಲೆಯಲ್ಲಿ ತರಬೇತಿ ಪಡೆಯಲು ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಜಕ್ಕೂರು ವೈಮಾನಿಕ ತರಬೇತಿ ಶಾಲೆಯಲ್ಲಿ ಈಗಾಗಲೇ 40 ವಿದ್ಯಾರ್ಥಿಗಳಿದ್ದು, ಹೊಸ ಬ್ಯಾಚ್‌ಗೆ 35 ಅರ್ಜಿಗಳು ಬಂದಿದ್ದು, ಇನ್ನು ಕೆಲವೇ ದಿನಗಳಿಂದ ಇಲ್ಲಿ ತರಬೇತಿ ತರಗತಿಗಳು ಆರಂಭವಾಗಲಿದೆ.

ಅಧಿಕಾರಿಗಳ ಸತತ ಪರಿಶ್ರಮದಿಂದ ಆರು ತಿಂಗಳಲ್ಲೇ ಎಲ್ಲಾ ಕಾಮಗಾರಿ ಪೂರ್ಣಗೊಂಡು ಕಾರ್ಯಾರಂಭ ಮಾಡಿದೆ. ಪ್ರತಿ ವರ್ಷ ನೂರು ಪೈಲಟ್‌ಗಳ ತರಬೇತಿ ಹೊಂದಿದ್ದು, ತರಗತಿಗಳು ಆರಂಭವಾಗಲಿವೆ. ಈ ಮೂಲಕ ಐತಿಹಾಸಿಕವಾದ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಗತ ವೈಭವ ಮರಳಲಿದೆ.

ಮುಖ್ಯ ವಿಮಾನ ಚಾಲನಾ ಬೋಧಕರ ಅಲಭ್ಯತೆ ಕಾರಣ ಮೂರು ವರ್ಷದಿಂದ ಶಾಲೆಯಲ್ಲಿ ತರಬೇತಿ ಹಾರಾಟ ಚಟುಟಿಕೆ ಸ್ಥಗಿತವಾಗಿತ್ತು. ಪ್ರಸ್ತುತ ಶಾಲೆಯಲ್ಲಿ ಮುಖ್ಯ ವಿಮಾನ ಚಾಲನಾ ಬೋಧಕರು, ಸಹಾಯ ಬೋಧಕರು ಹಾಗೂ ಇತರ ಅಗತ್ಯ ಸಿಬ್ಬಂದಿ ನೇಮಕವನ್ನು ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ಮಾಡಲಾಗಿದೆ. ಇದು ವಿದ್ಯಾರ್ಥಿಗಳಿಗೆ ನೆರವಾಗಲಿದೆ.

ಈ ವರ್ಷದಲ್ಲಿ ಸರಿಸುಮಾರು 75 ವಿದ್ಯಾರ್ಥಿಗಳು ತರಬೇತಿ ಪಡೆಯಲಿದ್ದಾರೆ. ಖಾಸಗಿ ವಿಮಾನ ಹಾರಾಟ ವ್ಯವಸ್ಥೆಗೆ ಸಹ ಅವಕಾಶ ಕಲ್ಪಿಸುವ ಆಲೋಚನೆ ಸರ್ಕಾರದ್ದಾಗಿದೆ. ಮತ್ತೊಂದು ಮಹತ್ವದ ಹೆಜ್ಜೆ ಪ್ರವಾಸೋದ್ಯಮ ಇಲಾಖೆ ಜತೆ ಸೇರಿ ಹೆಲಿ ಪ್ರವಾಸೋದ್ಯಮ ಸಹ ಆರಂಭಿಸಲಾಗಿದೆ. ಸಧ್ಯದಲ್ಲೇ ಏರೋಸ್ಪೇಸ್ ಗ್ರಂಥಾಲಯ, ವಸ್ತು ಸಂಗ್ರಹಾಲಯ, ದ್ರೋಣ್ ತರಬೇತಿ ಸೌಲಭ್ಯವನ್ನು ಸಹ ಕಲ್ಪಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸಾಹಸ ಕ್ರೀಡಾ ಆಸಕ್ತರಿಗಾಗಿ ಪಾರಾ ಮೋಟಾರಿಂಗ್ ಹಾಗೂ ಪಾರಾ ಸೈಕಲಿಂಗ್ ಅನ್ನು ಈಗಾಗಲೇ ಪರಿಚಯಿಸಲಾಗಿದ್ದು ಅದು ಜನಪ್ರಿಯತೆ ಗಳಿಸುವ ಹಾದಿಯಲ್ಲಿ ಸಾಗಿದೆ.



**ಮೂಲಸೌಕರ್ಯ ಕಾಮಗಾರಿಗಳಿಗೆ ಶಂಕುಸ್ಥಾಪನೆ**

ಜಕ್ಕೂರಿನ ನವೀಕೃತ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಪುರಾರಂಭಕ್ಕೆ ಚಾಲನೆ ನೀಡುವ ಜೊತೆಗೆ ಹತ್ತು ಕೋಟಿ ರೂ ವೆಚ್ಚದಲ್ಲಿ ಹೆಲಿಪ್ಯಾಡ್, ಲೌಂಜ್ ಮತ್ತಿತರ ಮೂಲಸೌಕರ್ಯ ಕಾಮಗಾರಿಗಳಿಗೆ ಶಂಕುಸ್ಥಾಪನೆಯನ್ನು ಮಾಡಲಾಗಿದೆ.

ನಾನಾ ಕಾರಣಗಳಿಂದ ಸ್ಥಗಿತಕೊಂಡಿದ್ದ ಈ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯನ್ನು ರಾಜ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಕೇವಲ 6 ತಿಂಗಳಿನಲ್ಲಿ ನವೀಕರಣಗೊಳಿಸಿ ಆರಂಭಿಸಿದೆ. ಇದರಿಂದ ಯುವ ಜನರ ವಿಮಾನ ಚಾಲನೆಯ ಕನಸು ನನಸಾಗಲಿದೆ. ■



Downloaded From: www.kpscvaani.com

ಬ್ರಿಟೀಷರು ಜಾರಿಗೆ ತಂದ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ಕಾನೂನಿನ ವಿರುದ್ಧ ಹೋರಾಡಿದವರಲ್ಲಿ ನರಗುಂದದ ಬಾಬಾ ಸಾಹೇಬರು ಒಬ್ಬರು.

ಎನ್. ಜಗನ್ನಾಥ ಪ್ರಕಾಶ್

ಇಡೀ ಭಾರತವನ್ನು ತಮ್ಮ ಹತೋಟಿಗೆ ಪಡೆಯಲು ಆಗ ಬ್ರಿಟಿಷರು ಮಾಡದೇ ಇದ್ದ ಪ್ರಯತ್ನಗಳೇ ಇರಲಿಲ್ಲ. ಇದ್ದ ಸಣ್ಣಪುಟ್ಟ ಸಂಸ್ಥಾನಗಳು ಸ್ವಾತಂತ್ರ್ಯವಾಗಿ ಆಡಳಿತ ನಡೆಸಲು ಹೆಜ್ಜೆ ಹೆಜ್ಜೆಗೂ ಬ್ರಿಟಿಷರು ಪ್ರಯತ್ನಿಸುತ್ತಲೇ ಇದ್ದರು. ತಮಗೆ ಬೇಕಾದಂತೆ ಕಾನೂನುಗಳನ್ನು ಜಾರಿಗೆ ತಂದು ಭಾರತೀಯರ ಮೇಲೆ  ಬಲವಂತವಾಗಿ ಹೇರುವುದು ಬ್ರಿಟಿಷರಿಗೆ ಸಾಮಾನ್ಯವಾಗಿ ಹೋಗಿತ್ತು. ಅಂತಹ ಕಾನೂನುಗಳಲ್ಲಿ ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬುದೂ ಒಂದು. ಆ ಕಾನೂನಿನ ಅನ್ವಯ ಯಾವ ರಾಜನಾದರೂ ಮಕ್ಕಳಿಲ್ಲದೆ ಮೃತಪಟ್ಟರೆ ಅವನ ದತ್ತು ಮಗನಿಗೆ ರಾಜ್ಯ ಹಸ್ತಾಂತರವಾಗುವಂತ್ತಿರಲಿಲ್ಲ. ಇದು ನರಗುಂದಕ್ಕೂ ಅನ್ವಯವಾಯಿತು.

ನರಗುಂದ ಆಗ ಧಾರವಾಡ ಜಿಲ್ಲೆಯ ಒಂದು ತಾಲೂಕು. ಅದೊಂದು ಸಂಸ್ಥಾನದ ಕೇಂದ್ರ ಸ್ಥಳವೂ ಹೌದು. ಬಾಬಾ ಸಾಹೇಬ್ ಅಲ್ಲಿ ಆಡಳಿತ ನಡೆಸುತ್ತಿದ್ದ. ಆತನಿಗೆ ಮಕ್ಕಳಿರಲಿಲ್ಲ. ಭಾರತೀಯ ಪದ್ಧತಿಯಂತೆ ದತ್ತು ತೆಗೆದುಕೊಳ್ಳಲು ಬ್ರಿಟಿಷರಿಗೆ ಅನುಮತಿ ಕೋರಿ ಪತ್ರ ಬರೆದ. ತಮ್ಮ ಕಾನೂನಿನಂತೆ ಬ್ರಿಟಿಷರು ಇದಕ್ಕೆ ಅನುಮತಿ ನಿರಾಕರಿಸಿದರು. ಬಾಬಾ ಸಾಹೇಬ್ ಬರೆದಿದ್ದ ಪತ್ರವನ್ನು ಬ್ರಿಟಿಷ್ ಅಧಿಕಾರಿ ಮ್ಯಾನ್‌ಸನ್ ಹರಿದು ಚೂರು ಚೂರು ಮಾಡಿದ್ದೂ ಬಾಬಾ ಸಾಹೇಬನ ಗಮನಕ್ಕೆ ಬಂತು.

# ಬಿಳಿಯರ ವಿರುದ್ಧ ಸೆಣಸಿದ ನರಗುಂದದ ಬಾಬಾ ಸಾಹೇಬ






Downloaded From: www.kpscvaani.com

ಸಂಸ್ಥಾನಿಕರ ಸಭೆಯಲ್ಲಿ ಬಿಳಿಯ ಅಧಿಕಾರಿಗಳು ಉದ್ಧಟತನದಿಂದ ವರ್ತಿಸಿದ್ದನ್ನು ಬಾಬಾ ಸಾಹೇಬ ಬಹಿರಂಗವಾಗಿಯೇ ಪ್ರತಿಭಟಿಸಿ ಸಭೆಯಿಂದ ಹೊರಬಂದಿದ್ದ ವಿಷಯವನ್ನೇ ಮನಸ್ಸಿನಲ್ಲಿಟ್ಟುಕೊಂಡು ಸಮಯಕ್ಕಾಗಿ ಕಾಯುತ್ತಿದ್ದ ಮ್ಯಾನ್‌ಸನ್ ಬಾಬಾ ಸಾಹೇಬ ಪತ್ರ ಬರೆದಾಗ ಅದನ್ನು ಹರಿದು ತನ್ನ ಕೋಪ ತೋರ್ಪಡಿಸಿದ.

ಬಾಬಾ ಸಾಹೇಬ ಆಗಿನ್ನೂ ಬಿಸಿರಕ್ತದ ತರುಣ. ಬಿಳಿಯರ ಅಟ್ಟಹಾಸವನ್ನು ಕೇಳಿದ್ದ. ಆದರೆ ಆಗ ತಾನೇ ಅನುಭವಿಸಬೇಕಾಗಿ ಬಂದಿದ್ದರಿಂದ ಕೋಪಗೊಂಡಿದ್ದ ಬಾಬಾ ಸಾಹೇಬ, ಬ್ರಿಟಿಷರನ್ನು ಎದುರಿಸಲು ನಿರ್ಧಾರ ಮಾಡಿಕೊಂಡ. ಅಕ್ಕಪಕ್ಕದ ಸಂಸ್ಥಾನಿಕರಿಂದ ಶಸ್ತ್ರಗಳನ್ನು ಸಂಗ್ರಹಿಸಿ ಇಡತೊಡಗಿದ. ಇದು ಬ್ರಿಟಿಷರಿಗೆ ಗೊತ್ತಾಗದ ವಿಷಯವಾಗಿರಲಿಲ್ಲ. ಶಸ್ತ್ರಾಸ್ತ್ರಗಳನ್ನು ತಮಗೆ ಒಪ್ಪಿಸಿ ಬಿಡಿ. ನಿಮ್ಮ ರಕ್ಷಣೆ ನಮ್ಮ ಹೊಣೆ ಎಂದು ದರ್ಪ ತೋರಿದರು. ಇದರ ಉಸ್ತುವಾರಿಯಲ್ಲಿ ಅಧಿಕಾರಿ ಮ್ಯಾನ್‌ಸನ್ ಮುಂಚೂಣಿಯಲ್ಲಿದ್ದ.

ಶಸ್ತ್ರಾಸ್ತ್ರಗಳನ್ನು ಹಿಂತಿರುಗಿಸಿದ್ದ ಬಾಬಾ ಸಾಹೇಬ ಅದನ್ನು ಬ್ರಿಟಿಷರು ಗಾಡಿಯಲ್ಲಿ ತುಂಬಿಕೊಂಡು ಹೋಗುತ್ತಿದ್ದಾಗ ಆಕ್ರಮಣ ಮಾಡಿ ಕಿತ್ತುಕೊಂಡು ನರಗುಂದಕ್ಕೆ ಸಾಗಿಸಿ ಬಚ್ಚಿಟ್ಟ. ಅದಕ್ಕೆ ಪ್ರತಿರೋಧ ತೋರಿದ ಬಿಳಿಯರು ಬಾಬಾ ಸಾಹೇಬನ ಮೇಲೆ ದೇಶದ್ರೋಹದ ಆರೋಪ ಹೊರಿಸಿ ಬಂಧಿಸಲು ಮುಂದಾದರು. ಬ್ರಿಟಿಷರು ನರಗುಂದದ ಮೇಲೆ ದಾಳಿ ನಡೆಸಲು ಹವಣಿಸುತ್ತಿದ್ದಾಗ ಅವರು ತಂಗಿದ್ದ ಶಿಬಿರದ ಮೇಲೆ ತನ್ನ ಪಡೆಯೊಡನೆ ದಾಳಿ ಇಟ್ಟ ಬಾಬಾ ಸಾಹೇಬ ಬ್ರಿಟಿಷ್ ಅಧಿಕಾರಿ ಮ್ಯಾನ್‌ಸನ್‌ನ ತಲೆಕಡಿದು ಅದನ್ನು ಊರ ಬಾಗಿಲಿಗೆ ನೇತು ಹಾಕಿದ.

ಬ್ರಿಟಿಷರು ಅಪಾರ ಸೈನ್ಯ, ಶಸ್ತ್ರಗಳೊಂದಿಗೆ ನರಗುಂದದ ಸೈನ್ಯದ ಮೇಲೆ ದಾಳಿ ನಡೆಸಿ ಸೈನ್ಯವನ್ನು ಮಣಿಸಿದರು. ಬಾಬಾ ಸಾಹೇಬ ನರಗುಂದದ ಕೋಟೆಯಿಂದಲೇ ವೀರಾವೇಶವಾಗಿ ಕಾದಾಡಿದ. ಯಾವ ಸಹಾಯವೂ ಆತನಿಗೆ ನೆರೆಹೊರೆ




ಸಂಸ್ಥಾನಿಕರಿಂದ ಸಿಗಲಿಲ್ಲ. ಬ್ರಿಟಿಷರ ಕೈ ಮೇಲಾಯಿತು. ಬಾಬಾ ಸಾಹೇಬ ತಪ್ಪಿಸಿಕೊಂಡು ಅರಣ್ಯದಲ್ಲಿ ತಲೆಮರೆಸಿಕೊಂಡನಾದರೂ ವಿದ್ರೋಹಿಗಳು ಸುಳಿವು ಬಿಟ್ಟು ಕೊಟ್ಟ ಕಾರಣ ಬಾಬಾ ಸಾಹೇಬ ಬ್ರಿಟಿಷರ ಕೈಗೆ ಸೆರೆ ಸಿಕ್ಕಿಬಿದ್ದ.

ಬಾಬಾ ಸಾಹೇಬರ ಕುಟುಂಬ, ತಾಯಿ, ಮಡದಿ ನದಿಯಲ್ಲಿ ಪ್ರಾಣತ್ಯಾಗ ಮಾಡಿದರು. ಸೆರೆಸಿಕ್ಕಿದ ಬಾಬಾ ಸಾಹೇಬನನ್ನು ಬೆಳಗಾವಿ ಸೆರೆಯಲ್ಲಿ ಇರಿಸಲಾಯಿತು. ಕನ್ನಡ ನಾಡಿನ ಅನೇಕ ಸಂಸ್ಥಾನಿಕರು ಬ್ರಿಟಿಷರ ವಿರುದ್ಧ ಹೋರಾಟ ರೂಪಿಸಿದ್ದರೂ ಸಂಪರ್ಕದ ಹಾಗೂ ಸಂಪನ್ಮೂಲ ಕೊರತೆಯಿಂದ ಅದು ಸಾಧ್ಯವಾಗಲಿಲ್ಲ. ತಮ್ಮ ವಿರುದ್ಧ ಸೆಡ್ಡು ಹೊಡೆದವರನ್ನು ಸದೆ ಬಡಿಯಲು ಬ್ರಿಟಿಷರು ಬಾಬಾ ಸಾಹೇಬರಿಂದ ಬಾಯಿಬಿಡಿಸಲು ಪ್ರಯತ್ನಿಸಿದರು. ಆದರೆ ಬಾಬಾ ಸಾಹೇಬ ಯಾವುದೇ ಗುಟ್ಟು ಬಿಟ್ಟುಕೊಡಲಿಲ್ಲ. ತಮ್ಮ ಕುಟುಂಬ ಪ್ರಾಣಾರ್ಪಣೆ ಮಾಡಿಕೊಂಡಿದ್ದು, ಬ್ರಿಟಿಷರು ನರಗುಂದವನ್ನು ದೋಚಿ ಊರನ್ನು ಹಾಳುಗೆಡವಿದ್ದು ಬಾಬಾ ಸಾಹೇಬರಿಗೆ ತಿಳಿದು ದುಃಖವಾಯಿತಾದರೂ ಅವರು ಅಸಹಾಯಕರಾಗಿದ್ದರು.

> ಸಂಸ್ಥಾನಿಕರ ಸಭೆಯಲ್ಲಿ ಬಿಳಿಯ ಅಧಿಕಾರಿಗಳು ಉದ್ಧಟತನದಿಂದ ವರ್ತಿಸಿದ್ದನ್ನು ಬಿಸಿ ರಕ್ತದ ತರುಣ ಬಾಬಾ ಸಾಹೇಬ ಬಹಿರಂಗವಾಗಿಯೇ ಪ್ರತಿಭಟಿಸಿ ಸಭೆಯಿಂದ ಹೊರಬಂದಿದ್ದರು.

ಧಾರವಾಡ, ಬೆಳಗಾವಿ ಪ್ರಾಂತ್ಯದಲ್ಲಿ ಬ್ರಿಟಿಷರ ವಿರುದ್ಧ ಗಟ್ಟಿದನಿ ಎತ್ತಿದ ಬಾಬಾ ಸಾಹೇಬರನ್ನು ಬ್ರಿಟಿಷರು ಬೆಳಗಾವಿ ಜೈಲಿನಲ್ಲಿಟ್ಟು, ಅಲ್ಲಿಯೇ ವಿಚಾರಣೆ ನಾಟಕ ಮಾಡಿ ಗಲ್ಲು ಶಿಕ್ಷೆ ವಿಧಿಸಿದರು. ಜನರ ಮನದಲ್ಲಿ ಸ್ವಾತಂತ್ರ್ಯ ವೀರನಾಗಿ ಇಂದಿಗೂ ಉಳಿದಿರುವ ನರಗುಂದದ ಬಾಬಾ ಸಾಹೇಬರನ್ನು 1858ರ ಜೂನ್ 12ರಂದು ಬೆಳಗಾವಿ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

ಕನ್ನಡ ನಾಡಿನಲ್ಲಿ ಬ್ರಿಟಿಷರ ದಬ್ಬಾಳಿಕೆ ವಿರುದ್ಧ ಸಶಸ್ತ್ರ ಹೋರಾಟ ನಡೆಸಿ ಜನರಲ್ಲಿ ವಿಶ್ವಾಸ ತುಂಬಿದ ನರಗುಂದದ ಬಾಬಾ ಸಾಹೇಬ ಇಂದಿಗೂ ಚಿರಸ್ಥಾಯಿ.



Downloaded From: www.kpscvaani.com



# ಕೆ.ಟಿ.ಪಿ.ಪಿ. ಕಾಯಿದೆ ನಿಬಂಧನೆ ವಿನಾಯಿತಿಯಿಂದ ನವೋದ್ಯಮಗಳಿಗೆ ಅವಕಾಶ

–ಬಿ.ಎಸ್.ವೆಂಕಟೇಶ ಪ್ರಸಾದ್

**ನವೋದ್ಯಮದ ಮಹತ್ತ್ವವನ್ನು ಮನಗಂಡ ರಾಜ್ಯ ಸರ್ಕಾರವು ರಾಜ್ಯದಲ್ಲಿ ಉದ್ಯಮಶೀಲತೆಯ ವಾತಾವರಣವನ್ನು ನಿರ್ಮಿಸುವ ಉದ್ದೇಶದಿಂದ ಕೆ.ಟಿ.ಪಿ.ಪಿ ಕಾಯಿದೆಯಲ್ಲಿ ತಿದ್ದುಪಡಿಯನ್ನು ತರುವ ಮೂಲಕ ನವೋದ್ಯಮದಲ್ಲಿ ತೊಡುಗುವವರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.**

ಇದು ನವೋದ್ಯಮಗಳ (ಸ್ಟಾರ್ಟ್‌ಅಪ್‌ಗಳ) ಕಾಲ. ಇಡೀ ಜಗತ್ತು ಆರ್ಥಿಕತೆಯ ಬೆಳವಣಿಗೆಗಾಗಿ ನವೋದ್ಯಮತಗಳತ್ತ ಎದುರು ನೋಡುತ್ತಿದೆ. ಭಾರತದ ಮಟ್ಟಿಗೆ ಹೇಳುವುದಾದರೆ ಕರ್ನಾಟಕವು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂಚಿನಿಂದಲೂ ಮುಂಚೂಣಿಯಲ್ಲಿದ್ದು, ಅದರಂತೆ ನವೋದ್ಯಮಗಳ ಸ್ಥಾಪನೆಯಲ್ಲೂ ದಾಪುಗಾಲಿಟ್ಟು ಮುನ್ನಡೆಯುತ್ತಿದೆ.

ದೇಶದಲ್ಲೆಡೆ ಕಳೆದ ಕೆಲವು ವರ್ಷಗಳಿಂದ ನವೋದ್ಯಮಗಳ ಸ್ಥಾಪನೆ ವೇಗ ಪಡೆದುಕೊಂಡಿದೆ. ಕೈಗಾರಿಕಾ ಉತ್ತೇಜನ ಮತ್ತು ದೇಶೀಯ ವಾಣಿಜ್ಯ ಇಲಾಖೆಯ (ಡಿಪಿಐಐಟಿ) ಪ್ರಕಾರ, ಈಗ ಇಡೀ ದೇಶದಲ್ಲಿ ಸುಮಾರು 61,400 ನೋಂದಾಯಿತ ನವೋದ್ಯಮಗಳಿದ್ದು, ಆ ಪೈಕಿ ಸುಮಾರು ಶೇ 30ರಷ್ಟು ಕಂಪನಿಗಳಿಗೆ ಕರ್ನಾಟಕವು ನೆಲೆಯಾಗಿದೆ. ಇವು ಸುಮಾರು 55 ವಿವಿಧ ವಲಯಗಳಲ್ಲಿ ಹರಡಿಕೊಂಡಿದ್ದು, ಈ ಪೈಕಿ ಶೇ 45ರಷ್ಟು 2ನೇ ಶ್ರೇಣಿ ಹಾಗೂ 3ನೇ ಶ್ರೇಣಿಯ ನಗರಗಳಲ್ಲಿವೆ. ಬಂಡವಾಳದ ದೃಷ್ಟಿಯಿಂದ, 2021–22ನೇ ಹಣಕಾಸು ಸಾಲಿನಲ್ಲಿ ದೇಶದಲ್ಲಿನ ಸ್ಟಾರ್ಟ್‌ಅಪ್‌ಗಳು ಜನವರಿವರೆಗೆ 350 ಕೋಟಿ ಡಾಲರ್‌ಗಳಷ್ಟು (ಸುಮಾರು 26,000 ಕೋಟಿ ರೂಪಾಯಿಗಳು) ಬಂಡವಾಳ ಆಕರ್ಷಿಸಿದ್ದು, ಇದರಲ್ಲಿ ರಾಜ್ಯದ ಪಾಲು ಶೇ 50ಕ್ಕೂ ಹೆಚ್ಚಾಗಿದೆ. ದೇಶದ 625 ಜಿಲ್ಲೆಗಳಲ್ಲಿ ಕನಿಷ್ಠ ಒಂದು ನವೋದ್ಯಮ ಇರುವುದು ಇವು ಎಲ್ಲೆಡೆ ವ್ಯಾಪಿಸುತ್ತಿರುವುದಕ್ಕೆ ನಿದರ್ಶನವಾಗಿದೆ.

ನವೋದ್ಯಮಗಳ ಮಹತ್ವವನ್ನು ಕೇಂದ್ರ ಸರ್ಕಾರ ಮನಗಂಡಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರತಿ ವರ್ಷದ ಜನವರಿ 16ನೇ ದಿನಾಂಕವನ್ನು 'ನವೋದ್ಯಮ ದಿನ' ಎಂದು ಘೋಷಿಸಿದ್ದಾರೆ. ಈ ಕರೆಗೆ ಅನುಸಾರವಾಗಿ, ಇದೇ ಮೊದಲ ಬಾರಿಗೆ ಜನವರಿ 16ರಂದು 'ನವೋದ್ಯಮ ದಿನ'ವನ್ನು ರಾಷ್ಟ್ರದಾದ್ಯಂತ ಆಚರಿಸಲಾಗಿದೆ. ಇದೇ ಸಂದರ್ಭದಲ್ಲಿ (ಜನವರಿ 15ರಂದು) ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಆಯ್ದ 150 ಸ್ಟಾರ್ಟ್‌ಅಪ್‌ಗಳ ಪ್ರತಿನಿಧಿಗಳೊಂದಿಗೆ ಸಂವಾದ ನಡೆಸಿದರು.

ಕೇಂದ್ರ ಸರ್ಕಾರದ ಈ ಆದ್ಯತೆಯು 2022–23ನೇ ಹಣಕಾಸು ಸಾಲಿಗೆ ಮಂಡನೆಯಾದ ಬಜೆಟ್‌ನಲ್ಲೂ ಪ್ರತಿಫಲಿಸಿದೆ. ಡಿಜಿಟಲ್ ವಿಶ್ವವಿದ್ಯಾಲಯದ ಪ್ರಸ್ತಾಪ, ನವೋದ್ಯಮಗಳಿಗೆ ಒಂದು ವರ್ಷದ ಅವಧಿಗೆ ತೆರಿಗೆ ವಿಸ್ತರಣೆ, ಡಿಜಿಟಲ್ ರೂಪಾಯಿ ಜಾರಿಗೊಳಿಸುವ ಪ್ರಸ್ತಾವ, ಇತ್ಯಾದಿ ಸ್ಟಾರ್ಟ್‌ಅಪ್‌ಗಳಿಗೆ ಪೂರಕವಾಗಿದೆ. ನಮ್ಮ ನವೋದ್ಯಮಿಗಳು ದೇಶದಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಮೂಲಕವೇ ಜಗತ್ತಿನ ಬೇರೆ ಬೇರೆ ದೇಶಗಳ ಸಮಸ್ಯೆಗಳಿಗೂ ಪರಿಹಾರ ಕಂಡುಹಿಡಿಯಬಹುದು. ಇದು ಸ್ಥಳೀಯತೆಯನ್ನು ಜಾಗತಿಕತೆಯೊಂದಿಗೆ ಬೆಸೆಯಲು (ಟೇಕಿಂಗ್ ಲೋಕಲ್ ಟು ಗ್ಲೋಬಲ್) ಸಾಧ್ಯವಾಗಿಸುವುದರ ಜೊತೆಗೆ 'ಆತ್ಮನಿರ್ಭರ ಭಾರತ'ದ ಸಂಕಲ್ಪವನ್ನೂ ಸಾಕಾರಗೊಳಿಸಲು ಸಹಕಾರಿ ಎಂದು ವಿಶ್ಲೇಷಿಸಲಾಗಿದೆ.

ಇನ್ನು, ಈಗ ನಮ್ಮ ಭಾರತ ದೇಶವು ಪ್ರಪಂಚದಲ್ಲೇ ಮೂರನೇ ಅತಿದೊಡ್ಡ ಸ್ಟಾರ್ಟ್‌ಅಪ್ ಪರಿಸರವುಳ್ಳ ದೇಶವಾಗಿದೆ, ಅಮೆರಿಕಾ ಮತ್ತು ಚೀನಾ ನಂತರದ ಸ್ಥಾನದಲ್ಲಿರುವ ಭಾರತದಲ್ಲಿ 2021ನೇ ಹಣಕಾಸು ವರ್ಷದಲ್ಲಿ 44



Downloaded From: www.kpscvaani.com



ನವೋದ್ಯಮಗಳು ಯೂನಿಕಾರ್ನ್‌ಗಳಾಗಿ, ಅಂದರೆ 100 ಕೋಟಿ ಡಾಲರ್‌ಗಳಿಗೂ ಹೆಚ್ಚು ಮಾರುಕಟ್ಟೆ ಮೌಲ್ಯದ (ಸುಮಾರು ರೂ 7500 ಕೋಟಿ) ಕಂಪನಿಗಳಾಗಿ ಹೊರ ಹೊಮ್ಮಿವೆ. ಇದರೊಂದಿಗೆ ದೇಶದಲ್ಲಿನ ಒಟ್ಟು ಯೂನಿಕಾರ್ನ್‌ಗಳ ಸಂಖ್ಯೆ 83ಕ್ಕೆ ಏರಿದೆ. ಹೆಚ್ಚಿನ ಸ್ಟಾರ್ಟ್‌ಅಪ್‌ಗಳು ಕೃಷಿ, ಆರೋಗ್ಯ (ಮಾನಸಿಕ ಆರೋಗ್ಯವನ್ನೂ ಒಳಗೊಂಡಂತೆ), ಪ್ರವಾಸೋದ್ಯಮ, ಶಿಕ್ಷಣ ತಂತ್ರಜ್ಞಾನ (ಎಡ್– ಟೆಕ್), ಹಣಕಾಸು ತಾಂತ್ರಿಕತೆ (ಫಿನ್‌ಟೆಕ್), ಬಾಹ್ಯಾಕಾಶ, ಚಿಲ್ಲರೆ ಮಾರುಕಟ್ಟೆ ವಲಯದಲ್ಲಿ ಡಿಜಿಟಲ್ ಕಾಮರ್ಸ್, ತಯಾರಕಾ ವಲಯದಲ್ಲಿ ದಕ್ಷತೆ ಹೆಚ್ಚಿಸುವುದು, ಪರಿಸರ ಸ್ನೇಹಿ ಸುಸ್ಥಿರ ಉತ್ಪನ್ನಗಳು, ಸುಸ್ಥಿರ ಸಂಚಾರ ಇತ್ಯಾದಿ ವಲಯಗಳಿಗೆ ಒತ್ತು ಕೊಟ್ಟು ಕಾರ್ಯನಿರತವಾಗಿವೆ.

ದೇಶದಲ್ಲಿ ಸ್ಟಾಟ್‌ಅಪ್‌ಗಳು ಬೆಳೆಯುತ್ತಿರುವ ರೀತಿಯನ್ನು ಮನವರಿಕೆ ಮಾಡಿಕೊಳ್ಳಲು ಕೆಲವೇ ವರ್ಷಗಳ ಹಿಂದಿನ ಅಂಕಿಅಂಶದೊಂದಿಗೆ ಹೋಲಿಕೆ ಮಾಡಿದರೆ ಸಾಕಾಗುತ್ತದೆ. ವರ್ಷ 2013–14ರಲ್ಲಿ 4,000 ಪೇಟೆಂಟ್‌ಗಳು ಅನುಮೋದನೆಗೊಂಡರೆ, 2020–21ರಲ್ಲಿ ಇದು 28,000 ಸಾವಿರ ದಾಟಿದೆ. ಆಗ 70,000 ಟ್ರೇಡ್ ಮಾರ್ಕ್‌ಗಳನ್ನು ಕೊಡಲಾಗಿದ್ದರೆ ಈಗ ಅದು 2.5 ಲಕ್ಷವನ್ನು ಮೀರಿದೆ. ಹಾಗೆಯೇ ಆಗ 4,000 ಹಕ್ಕುಸ್ವಾಮ್ಯಗಳನ್ನು ಕೊಡಲಾಗಿದ್ದರೆ, ಈಗ ಅದು 16,000ಕ್ಕೂ ಅಧಿಕವಾಗಿದೆ. ಹಾಗೆಯೇ ಜಾಗತಿಕ ನಾವೀನ್ಯತಾ ಸೂಚ್ಯಂಕದಲ್ಲಿ ಭಾರತದ ಸ್ಥಾನವು 81 ರಿಂದ 46ಕ್ಕೆ ಏರಿದೆ. ಐದಾರು ವರ್ಷಗಳ ಹಿಂದೆ ಸುಮಾರು 500ರಷ್ಟಿದ್ದ ನವೋದ್ಯಮಗಳ ಸಂಖ್ಯೆ ಈ ಅವಧಿಯಲ್ಲಿ ಶರವೇಗದಲ್ಲಿ ಬೆಳೆದು 61,000 ದಾಟಿದೆ.

ರಾಜ್ಯ ಸರ್ಕಾರವು 2015ರಲ್ಲೇ ನವೋದ್ಯಮದ ಮಹತ್ವವನ್ನು ಮನಗಂಡು ಅದಕ್ಕಾಗಿ ಕಾರ್ಯನೀತಿಯನ್ನು ಜಾರಿಗೊಳಿಸಿತು. ಇದರ ಜೊತೆಗೆ, ರಾಜ್ಯ ನವೋದ್ಯಮ ದೂರದರ್ಶಿತ್ವ ಸಮಿತಿಯನ್ನು ಕೂಡ ರಚಿಸಲಾಗಿದ್ದು, ಅದು ಸ್ಟಾರ್ಟ್‌ಅಪ್‌ಗಳ ಬೆಳವಣಿಗೆಗೆ ಪೂರಕವಾಗಿದೆ. ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸಂಸ್ಥೆಯು (ಕಿಟ್ಸ್) ನವೋದ್ಯಮಗಳ ಬೆಳವಣಿಗೆಯನ್ನು ಗಮನದಲ್ಲಿರಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದು, ಎಲಿವೇಟ್, ಎಲಿವೇಟ್ ಉನ್ನತಿ ಇತ್ಯಾದಿ ಕಾರ್ಯಕ್ರಮಗಳನ್ನು ಪ್ರತಿವರ್ಷ ನಡೆಸಿಕೊಂಡು ಬರಲಾಗುತ್ತಿದೆ. ಹಲವಾರು ಪ್ರೋತ್ಸಾಹಕ ಭತ್ಯೆಗಳು, ರಿಯಾಯಿತಿಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿ ನಾವೀನ್ಯತಾ ಉದ್ಯಮಶೀಲತೆಗೆ ಒತ್ತಾಸೆ ಒದಗಿಸಲಾಗುತ್ತಿದೆ. ಇದರ ಜೊತೆಗೆ, 'ಬಿಯಾಂಡ್ ಬೆಂಗಳೂರು', ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಕೆಡಿಇಎಂ, ಎಂಜಿನಿಯರಿಂಗ್ ಸಂಶೋಧನೆ ಹಾಗೂ ಅಭಿವೃದ್ಧಿ ನೀತಿ, ನೈನ್ (ನ್ಯೂ ಏಜ್ ಇನ್ನೊವೇಷನ್ ನೆಟ್ವರ್ಕ್), ಎವಿಜಿಸಿ ಕಾರ್ಯನೀತಿ ಇತ್ಯಾದಿಗಳು ನವೋದ್ಯಮ ಬೆಳವಣಿಗೆಗೆ ಪೂರಕವಾಗಿವೆ. ಶಿಕ್ಷಣ ವಲಯ ಹಾಗೂ ಉದ್ಯಮ ವಲಯಗಳನ್ನು ಪರಸ್ಪರ ಬೆಸೆಯುವ ಮೂಲಕ ಇದಕ್ಕೆ ಪ್ರಸ್ತುತತೆಯನ್ನು ತರಲಾಗುತ್ತಿದೆ. ಒಟ್ಟಾರೆ ಉದ್ಯಮಶೀಲತೆಯ ವಾತಾವರಣವನ್ನು ನಿರ್ಮಿಸುವುದು ಸರ್ಕಾರದ ಧ್ಯೇಯವಾಗಿದೆ.

**2021–22ನೇ ಹಣಕಾಸು ಸಾಲಿನಲ್ಲಿ ದೇಶದಲ್ಲಿನ ಸ್ಟಾರ್ಟ್‌ಅಪ್‌ಗಳು ಜನವರಿವರೆಗೆ 350 ಕೋಟಿ ಡಾಲರ್‌ಗಳಷ್ಟು (ಸುಮಾರು 26,000 ಕೋಟಿ ರೂಪಾಯಿಗಳು) ಬಂಡವಾಳ ಆಕರ್ಷಿಸಿದ್ದು, ಇದರಲ್ಲಿ ರಾಜ್ಯದ ಪಾಲು ಶೇ 50ಕ್ಕೂ ಹೆಚ್ಚಾಗಿದೆ. ದೇಶದ 625 ಜಿಲ್ಲೆಗಳಲ್ಲಿ ಕನಿಷ್ಠ ಒಂದು ನವೋದ್ಯಮ ಇರುವುದು ಇವು ಎಲ್ಲೆಡೆ ವ್ಯಾಪಿಸುತ್ತಿರುವುದಕ್ಕೆ ನಿದರ್ಶನವಾಗಿದೆ.**

ಬೆಂಗಳೂರು ಸ್ಟಾರ್ಟ್‌ಅಪ್ ಜೀನೋಮ್ಸ್ ದಿ ಗ್ಲೋಬಲ್ ಸ್ಟಾರ್ಟ್‌ಅಪ್ ಇಕೊ ಸಿಸ್ಟಮ್ ರಿಪೋರ್ಟ್ 2021ರ ಪ್ರಕಾರ 23ನೇ ಸ್ಥಾನದಲ್ಲಿದೆ. ಪ್ರಪಂಚದ ಅಗ್ರ 30 ನಗರಗಳೊಳಗಿನ ಪಟ್ಟಿಯಲ್ಲಿನ ದೇಶದ ಏಕೈಕ ನಗರ ಬೆಂಗಳೂರಾಗಿದೆ. ಇದನ್ನು ಹೊರತುಪಡಿಸಿ ದೆಹಲಿ ಈ ಪಟ್ಟಿಯಲ್ಲಿ 36ನೇ ಸ್ಥಾನದಲ್ಲಿದೆ. ಪ್ರಸಕ್ತ 2021–22ನೇ ಹಣಕಾಸು ಸಾಲಿನಲ್ಲಿ ಜನವರಿಯವರೆಗೆ ದೇಶದಲ್ಲಿನ ಸ್ಟಾರ್ಟ್‌ಅಪ್‌ಗಳು 350 ಕೋಟಿಡಾಲರ್‌ಗಳಿಗೂ ಹೆಚ್ಚಿನ ಬಂಡವಾಳ ಆಕರ್ಷಿಸಿದ್ದು, ಇದರಲ್ಲಿ ಶೇ 50ಕ್ಕೂ ಹೆಚ್ಚು ಕರ್ನಾಟಕದತ್ತ ಹರಿದುಬಂದಿರುವುದು ಗಮನಾರ್ಹ ಅಂಶವಾಗಿದೆ.

### ನಿಬಂಧನೆ ವಿನಾಯಿತಿಗಳು:

ಟೆಂಡರ್ ಸಲ್ಲಿಕೆಯ ಕೊನೆಯ ದಿನದ ಪ್ರಕಾರ ಸ್ಟಾರ್ಟ್‌ಅಪ್ ಕಂಪನಿಯು ಸ್ಥಾಪನೆಯಾಗಿ ಇನ್ನೂ 3 ವರ್ಷವಾಗದೆ ಖರೀದಿ ಮೊತ್ತವು 20 ಲಕ್ಷ



Downloaded From: www.kpscvaani.com

ರೂಪಾಯಿಗಳನ್ನು ಮೀರದಿದ್ದ ಪ್ರಕರಣಗಳಲ್ಲಿ ಅಂತಹ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಪೂರ್ವಭಾವಿ ವಹಿವಾಟು ಮತ್ತು ಪೂರ್ವಾನುಭವದ ನಿಬಂಧನೆಗಳಿಂದ ವಿನಾಯಿತಿ ಕೊಡಲಾಗಿದೆ.

ಒಂದೊಮ್ಮೆ, ಖರೀದಿ ಮೊತ್ತವು 20 ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿದ್ದರೆ, ಅಂತಹ ಸಂದರ್ಭದಲ್ಲಿ ಕಂಪನಿಯು ಹಿಂದಿನ ಎರಡು ಆರ್ಥಿಕ ವರ್ಷಗಳ ಪೈಕಿ ಯಾವುದಾದರೂ ಒಂದು ಸಾಲಿನಲ್ಲಿ ಪೂರ್ವಭಾವಿ ವಹಿವಾಟು ಮತ್ತು ಪೂರ್ವಾನುಭವದ ಅಪೇಕ್ಷಿತ ಅರ್ಹತೆಗಳ ಪೈಕಿ ಶೇ 50ರಷ್ಟನ್ನು ಪೂರೈಸಬೇಕು.

ಈ ವಿನಾಯಿತಿಗಳು ನವೋದ್ಯಮಗಳಿಂದ ತಾಂತ್ರಿಕ ಉತ್ಪನ್ನಗಳು/ಸರಕುಗಳ/ಪರಿಹಾರಗಳನ್ನು ಕೊಂಡುಕೊಳ್ಳುವುದಕ್ಕೆ ಮಾತ್ರ ಅನ್ವಯವಾಗುತ್ತವೆ ಹಾಗೂ ಇವುಗಳ ಗುಣಮಟ್ಟವು ಸಂಗ್ರಹಣಾ ಏಜೆನ್ಸಿಯು ನಿಗದಿಗೊಳಿಸುವ ಪ್ರಕಾರ ಇರಬೇಕು ಎಂದು ಸ್ಪಷ್ಟಪಡಿಸಲಾಗಿದೆ.

ಈ ವಿನಾಯಿತಿಗಳನ್ನು ಟೆಂಡರ್ ದಾಖಲಾತಿಗಳಲ್ಲಿ ಸೂಕ್ತ ಪರಿಚ್ಛೇದಗಳಡಿ ಸೇರಿಸಬೇಕು ಎಂದು ಸಂಗ್ರಹಣಾ ಏಜೆನ್ಸಿಗಳಿಗೆ ಸರ್ಕಾರ ನಿರ್ದೇಶನವನ್ನೂ ನೀಡಿದೆ. ಒಟ್ಟಿನಲ್ಲಿ ನವೋದ್ಯಮ ವಲಯದಲ್ಲಿ ತೊಡಗಿಕೊಳ್ಳಲು ಆಸಕ್ತರಾಗಿರುವ ಯುವ ಉದ್ಯಮಿಗಳಿಗೆ ಈ ವಿನಾಯಿತಿಗಳಿಂದ ಅನುಕೂಲವಾಗಲಿದೆ.

**ಕೆಟಿಪಿಪಿ ಕಾಯಿದೆ ನಿಬಂಧನೆಗಳಲ್ಲಿ ವಿನಾಯಿತಿ:**

ದೇಶದಲ್ಲಿ ಮಾಹಿತಿ ತಂತ್ರಜ್ಞಾನ, ಎಲೆಕ್ಟ್ರಾನಿಕ್ಸ್ ತಯಾರಿಕೆ, ಜೈವಿಕ ತಂತ್ರಜ್ಞಾನ, ಆನಿಮೇಷನ್ ಹಾಗೂ ಇನ್ನಿತರ ಜ್ಞಾನಾಧಾರಿತ ಉದ್ದಿಮೆಗಳ ಬೆಳವಣಿಗೆಗೆ ಕರ್ನಾಟಕವು ಅತ್ಯಂತ ಹೆಚ್ಚಿನ ಕೊಡುಗೆ ನೀಡುತ್ತಿರುವ ರಾಜ್ಯವಾಗಿದೆ. ರಾಜ್ಯದ ಆರ್ಥಿಕ ಪ್ರಗತಿ ಮತ್ತು ಏಳ್ಗೆಯನ್ನು ಗಮನದಲ್ಲಿರಿಸಿಕೊಂಡು ಕರ್ನಾಟಕವು 2015ರಲ್ಲೇ ನವೋದ್ಯಮ ಕಾರ್ಯನೀತಿಯನ್ನು ಜಾರಿಗೊಳಿಸಿತು. ಇದೀಗ ಅದೇ ನಿಟ್ಟಿನಲ್ಲಿ ಮುಂದುವರಿದು ನಾವೀನ್ಯತೆಯಿಂದ ಕೂಡಿದ ಉದ್ದಿಮೆಗಳನ್ನು ಪ್ರೋತ್ಸಾಹಿಸುವ ಉದ್ದೇಶದಿಂದ 'ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣಾಕಾಯ್ದೆ, 1999ರಲ್ಲಿನ ತಿದ್ದುಪಡಿ ಮಾಡಿ ಕೆಲವು ನಿಬಂಧನೆಗಳಿಗೆ ವಿನಾಯಿತಿ ಕೊಡಲಾಗಿದೆ. ಇದು ಸಂಗ್ರಹಣಾ ಏಜೆನ್ಸಿಗಳು ಖರೀದಿಸುವ ತಾಂತ್ರಿಕ ಉತ್ಪನ್ನಗಳು/ಸರಕುಗಳು/ಪರಿಹಾರಗಳಿಗೆ ಅನ್ವಯವಾಗುತ್ತದೆ. ಅದಕ್ಕೆ ಸಂಬಂಧಿಸಿದಂತೆ ಆದೇಶ ಹೊರಡಿಸಲಾಗಿದೆ.

ಆ ಪ್ರಕಾರವಾಗಿ, ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸಂಸ್ಥೆ (ಕಿಟ್ಸ್)ಯಲ್ಲಿ ನೋಂದಣಿಗೊಂಡು ಎಲೆಕ್ಟ್ರಾನಿಕ್ಸ್, ಐಟಿ/ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಿದ್ಧಪಡಿಸುವ ಪಟ್ಟಿಗೆ ಸೇರಿರುವ ಕಂಪನಿಗಳಿಗೆ ಪೂರ್ವಭಾವಿ ವಹಿವಾಟು ಮತ್ತು ಪೂರ್ವಾನುಭವಗಳಿಗೆ ಸಂಬಂಧಿಸಿದಂತೆ ಈ ಮುಂದೆ ತಿಳಿಸಿರುವಂತೆ ವಿನಾಯಿತಿಗಳನ್ನು ಕೊಡಲಾಗಿದೆ.

**ಈ ವಿನಾಯಿತಿಯಿಂದ ಯಾವ್ಯಾವ ಸ್ಟಾರ್ಟ್‌ಅಪ್‌ಗಳಿಗೆ ಪ್ರಯೋಜನ?**

ಕೆಟಿಪಿಪಿ ಕಾಯಿದೆಗೆ ಮಾಡಲಾಗಿರುವ ತಿದ್ದುಪಡಿಗಳಿಂದಾಗಿ ಈ ಕೆಳಕಂಡ ವಲಯದಲ್ಲಿ ತೊಡಗಿರುವ ಸ್ಟಾರ್ಟ್‌ಅಪ್‌ಗಳಿಗೆ ಪ್ರಯೋಜನವಾಗುತ್ತದೆ.

- **ಆರೋಗ್ಯಸೇವೆ:** ಡಯಾಗ್ನೋಸ್ಟಿಕ್ ಸಾಧನಗಳು, ಸಂಚಾರಿ ಪರೀಕ್ಷಾ ಪ್ರಯೋಗಾಲಯಗಳು/ಕಿಟ್‌ಗಳು ಇತ್ಯಾದಿ, ಸ್ವಯಂ–ಸುಧಾರಣಾ ಹಾಗೂ ಉಪಶಾಮಕ ಸಾಧನಗಳು, ಸಂಸ್ಕರಿತ ಹಾಗೂ ರೋಗ ಪ್ರತಿರೋಧ ಹೆಚ್ಚಿಸುವ ಆಹಾರಗಳು.
- **ಕೃಷಿ:** ಮಾನವರಹಿತ ವೈಮಾಂತರಿಕ್ಷ ವಾಹನಗಳು (ಯುಎವಿ), ಡ್ರೋನ್‌ಗಳು, ಕೃಷಿ ಮ್ಯಾಪಿಂಗ್ ಮತ್ತು ಸೀಡ್ ಬಾಂಬಿಂಗ್. ಅಗ್ರಿಗೇಷನ್ ವೇದಿಕೆಗಳು– ಒಳಪೂರಣ, ಹೊರಪೂರಣ ಸೇವೆಗಳು, ರೈತ ಉತ್ಪನ್ನ ಸಂಘಗಳ ಮೂಲಕ ಕೃಷಿ ಸೇವೆಗಳು, ನಿಖರ ಕೃಷಿ ಉಪಕರಣಗಳು, ಹತ್ತಿ ಕಟಾವು,



ಬೆಂಗಳೂರು ಸ್ಟಾರ್ಟ್‌ಅಪ್ ಜೀನೋಮ್ಸ್ ದಿ ಗ್ಲೋಬಲ್ ಸ್ಟಾರ್ಟ್‌ಅಪ್ ಇಕೊ ಸಿಸ್ಟಮ್ ರಿಪೋರ್ಟ್ 2021ರ ಪ್ರಕಾರ 23ನೇ ಸ್ಥಾನದಲ್ಲಿದೆ. ಪ್ರಪಂಚದ ಅಗ್ರ 30 ನಗರಗಳೊಳಗಿನ ಪಟ್ಟಿಯಲ್ಲಿನ ದೇಶದ ಏಕೈಕ ನಗರ ಬೆಂಗಳೂರಾಗಿದೆ. ಇದನ್ನು ಹೊರತುಪಡಿಸಿ ದೆಹಲಿ ಈ ಪಟ್ಟಿಯಲ್ಲಿ 36ನೇ ಸ್ಥಾನದಲ್ಲಿದೆ. ಪ್ರಸಕ್ತ 2021–22ನೇ ಹಣಕಾಸು ಸಾಲಿನಲ್ಲಿ ಜನವರಿಯವರೆಗೆ ದೇಶದಲ್ಲಿನ ಸ್ಟಾರ್ಟ್‌ಅಪ್‌ಗಳು 350 ಕೋಟಿಡಾಲರ್‌ಗಳಿಗೂ ಹೆಚ್ಚಿನ ಬಂಡವಾಳ ಆಕರ್ಷಿಸಿದ್ದು, ಇದರಲ್ಲಿ ಶೇ 50ಕ್ಕೂ ಹೆಚ್ಚು ಕರ್ನಾಟಕದತ್ತ ಹರಿದುಬಂದಿರುವುದು ಗಮನಾರ್ಹ ಅಂಶವಾಗಿದೆ.



Downloaded From: www.kpscvaani.com

ಕ್ರಿಮಿನಾಶಕ ಸಿಂಪಡಣೆ ಉಪಕರಣಗಳು ಇತ್ಯಾದಿ.

- **ತಯಾರಿಕಾ ವಲಯ:** ರೋಬೋ–ಟಿಕ್ಸ್, ಕೈಗಾರಿಕಾ ಸ್ವಯಂಚಾಲನೆ.
- **ಕ್ಲೀನ್‌ಟೆಕ್:** ಪರಿಸರ ವಿಚಕ್ಷಣೆ, ಗಾಳಿ ಗುಣಮಟ್ಟ ವಿಚಕ್ಷಣೆ, ತ್ಯಾಜ್ಯ ನಿರ್ವಹಣೆ ಗುರುತಿಸುವುದು ಹಾಗೂ ಮರುಬಳಕೆ.
- **ಮಾರ್ಕೆಟಿಂಗ್:** ನಾವೀನ್ಯತಾ ಮಾಧ್ಯಮ/ವೇದಿಕೆ ಮೂಲಕ ದೊಡ್ಡ ಮಟ್ಟದಲ್ಲಿ ಗುರಿ ಕೇಂದ್ರಿತ ಮಾರುಕಟ್ಟೆಯನ್ನು ತಲುಪಲು ನೆರವಾಗುವ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳು.

  ವಿಶಿಷ್ಟ ವ್ಯಾಪಾರ ಮಾದರಿಗಳ ಮೂಲಕ ಮುದ್ರಣ, ರೇಡಿಯೊ, ಟಿ.ವಿ., ಡಿಜಿಟಲ್, ಒ.ಟಿ.ಟಿ. ವೇದಿಕೆಗಳು, ಇತ್ಯಾದಿಗಳಲ್ಲಿ ಜಾಹಿರಾತಿನ ಹೊಸ ಸ್ವರೂಪಗಳು.

  ವಿವಿಧ ಚಾನೆಲ್‌ಗಳು/ ಮಾಧ್ಯಮಗಳಿಗಾಗಿ ಗ್ರಾಫಿಕ್ಸ್‌ನೊಂದಿಗೆ ಕ್ರಿಯಾಶೀಲತೆಯಿಂದ ಕೂಡಿದ ಅನಿಮೇಷನ್/ಜನರನ್ನು ಬಳಸಿ ರೂಪಿಸಲಾದ ಪ್ರೊಮೋಷನಲ್ ವಿಡಿಯೊಗಳು.

  ಎಸ್.ಇ.ಒ.,/ ಕ್ರಾಲರ್ಸ್ ಮತ್ತಿತರ ನಾವೀನ್ಯತಾ ಎಂಜಿನ್‌ಗಳನ್ನು ಬಳಸಿ ಸರ್ಕಾರದ ಯೋಜನೆಗಳ ಕುರಿತ ಮಾಹಿತಿಯನ್ನು ಹಾಗೂ ಸುದ್ದಿಗಳನ್ನು ಕಲೆಹಾಕುವುದು ಹಾಗೂ ಅವುಗಳನ್ನು ಡಿಜಿಟಲ್ ಮಾಧ್ಯಮ, ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಪ್ರಸಾರ ಮಾಡುವುದು.

  ಸೋರ್ಸ್/ಐ.ಎಸ್.ಪಿ.ಯಲ್ಲಿ ತಾಂತ್ರಿಕತೆ ಬಳಸಿ ನಕಲಿ ಸುದ್ದಿ ಪತ್ತೆ, ತಡೆಗಟ್ಟುವಿಕೆ, ನಿರ್ಮೂಲನೆ ಸೇವೆಗಳು.
- **ಹಣಕಾಸು:** ಸರ್ಕಾರದ ಯೋಜನೆಗಳಿಗೆ ಸಂಬಂಧಿಸಿದಂತೆ ಹಣಕಾಸು ವಹಿವಾಟಿಗೆ ಅನುವು ಮಾಡಿಕೊಡುವ ಡಿಜಿಟಲ್ ಪರಿಹಾರಗಳು/ ವೇದಿಕೆಗಳು ಮತ್ತು ಯುಪಿಐ ಆಧರಿಸಿದ ಸೇವೆಗಳು ಇತ್ಯಾದಿ. ದಾಖಲೀಕರಣ ಮತ್ತು ಕಾಂಪ್ಯುಟೇಷನ್ ಪ್ರಕ್ರಿಯೆಯನ್ನು ಸುಲಭಗೊಳಿಸುವ ಲೆಕ್ಕಪತ್ರ ನಿರ್ವಹಣೆ/ ಲೆಕ್ಕ ಪರಿಶೋಧನೆ/ ತೆರಿಗೆ ಕ್ಷೇತ್ರಕ್ಕೆ ಸಂಬಂಧಿಸಿದ ನಾವೀನ್ಯತಾ ಪರಿಹಾರಗಳು.
- **ಮಾನವ ಸಂಪನ್ಮೂಲ:** ನಿರ್ದಿಷ್ಟ ಕ್ಷೇತ್ರದಲ್ಲಿನ ತರಬೇತಿ/ಕೌಶಲ ತರಬೇತಿಗಾಗಿ ರೂಪಿಸಲಾದ ನಾವೀನ್ಯತೆ ಹಾಗೂ ಆತ್ಮಪ್ರಜ್ಞೆಯಿಂದ ಕೂಡಿದ ಬೌದ್ಧಿಕ ಸ್ವತ್ತಿನ ಪಠ್ಯಕ್ರಮ. ಗುರಿಕೇಂದ್ರಿತ ಕಟ್ಟಕಡೆಯ ವ್ಯಕ್ತಿಯನ್ನು ತಲುಪಲು ನೆರವಾಗುವ ವಿಶಿಷ್ಟತೆ ಹಾಗೂ ನಾವೀನ್ಯತೆಯಿಂದ ಕೂಡಿದ ಡಿಜಿಟಲ್ ವೇದಿಕೆ ಆಧಾರಿತ ತರಬೇತಿ/ ಕೌಶಲ ತರಬೇತಿ. ಹೆಚ್ಚು ಅಭ್ಯರ್ಥಿಗಳಿಗೆ ಆನ್‌ಲೈನ್ ಕಲಿಕೆಗೆ ಅನುವು ಮಾಡಿಕೊಡುವ ನಾವೀನ್ಯತಾ ವೇದಿಕೆಗಳು ಅಥವಾ ಕಲಿಕಾ ನಿರ್ವಹಣಾ ವ್ಯವಸ್ಥೆಗಳ ಬಳಕೆ.
- **ಇಂಧನ:** ವಿದ್ಯುತ್ ಚಾಲಿತ ವಾಹನಗಳಿಗೆ ಸಂಬಂಧಿಸಿದ ನಾವೀನ್ಯತಾ ಉತ್ಪನ್ನಗಳು/ಪರಿಹಾರಗಳು. ವಿವಿಧ ಪ್ರಕಾರಗಳ ಬರಿದಾಗದ ಶಕ್ತಿಮೂಲಗಳ ಉತ್ಪಾದನೆ, ದಾಸ್ತಾನು ಮತ್ತು ಬಳಕೆಗೆ ಸಂಬಂಧಿಸಿದ ಉತ್ಪನ್ನಗಳು/ ಪರಿಹಾರಗಳು. ವಿದ್ಯುತ್ ಜಾಲ ನಿರ್ವಹಣೆ ಇತ್ಯಾದಿಗೆ ಸಂಬಂಧಿಸಿದ ಪರಿಹಾರಗಳು.
- **ಕಾರ್ಯಾಚರಣೆಗಳು:** ಸ್ವತ್ತುಗಳ ಪರಿಶೀಲನೆಯನ್ನು ದೂರದಿಂದಲೇ ನಿಯಂತ್ರಿಸುವುದು ಹಾಗೂ ನಿರ್ವಹಣಾ ಸಾಧನಗಳು/ಪರಿಹಾರಗಳು. ಸಂಚಾರ, ವಾಹನಗಳ ಮತ್ತು ಪ್ರಯಾಣಿಕರ ನಿರ್ವಹಣೆ. ಜಿಯೋ ಫೆನ್ಸಿಂಗ್, ಜನರು ಮತ್ತು ಸಾಮಗ್ರಿಗಳ ಟ್ಯಾಗಿಂಗ್ ಹಾಗೂ ಮ್ಯಾಪಿಂಗ್. ಒಪ್ಪಂದಗಳು/ ಅಡಮಾನ/ದಾಖಲೆಗಳು ಇತ್ಯಾದಿಗಳ ತಪಾಸಣೆ ಮತ್ತು ದೃಢೀಕರಣಕ್ಕೆ ಸಂಬಂಧಿಸಿದ ಸ್ವಯಂಚಾಲಿತ ಪರಿಹಾರಗಳು. ಕೈಗಾರಿಕಾ ಸ್ವಯಂಚಾಲನೆ/ ರೋಬೋಟಿಕ್ಸ್ ಪರಿಹಾರಗಳು. ಐಒಟಿ ಆಧಾರಿತ ನಾವೀನ್ಯತಾ ಉತ್ಪನ್ನಗಳು/ ಪರಿಹಾರಗಳು.
- **ಸ್ಮಾರ್ಟ್ ಸಿಟಿ:** ಬೀದಿ ದೀಪ, ವಾಹನ ನಿಲುಗಡೆ, ನೀರು ನಿರ್ವಹಣೆ, ತ್ಯಾಜ್ಯ ನಿರ್ವಹಣೆ, ಸಂಚಾರ ನಿರ್ವಹಣೆ, ಸ್ವತ್ತು ನಿರ್ವಹಣೆ, ಇಂಧನ, ನೈರ್ಮಲ್ಯ, ಮೊಬಿಲಿಟಿ, ಸಂಪರ್ಕ ಇತ್ಯಾದಿಗೆ ಸಂಬಂಧಿಸಿದ ಉತ್ಪನ್ನಗಳು/ ಪರಿಹಾರಗಳು.
- ನವೀಕೃತ ಮತ್ತು ವರ್ತುಲ ಆರ್ಥಿಕತೆ: ಸೌರಶಕ್ತಿ ಮತ್ತು ಪವನಶಕ್ತಿ, ಪೆಟ್ರೋಲ್ ಹಾಗೂ ಲೀಥಿಯಂ ಬ್ಯಾಟರಿ ಇತ್ಯಾದಿ ಸಂಯೋಜಿತ ಇಂಧನ ಪರಿಹಾರಗಳು. ಜೈವಿಕ ತ್ಯಾಜ್ಯದಿಂದ ಬ್ರಿಕೆಟ್‌ಗಳು, ಕೈಗಾರಿಕಾ ಮಡ್ಡಿ ಬಳಸಿ ಮಾಡುವ ಇಟ್ಟಿಗೆ, ಹಾರುಬೂದಿ ಬಳಸಿ ತಯಾರಿಸುವ ಇಟ್ಟಿಗೆ, ತೆಂಗಿನ ಗರಿ ಬಳಸಿ ತಯಾರಿಸುವ ಸ್ಟ್ರಾ, ಸ್ವಯಂ ವಿಘಟನೆಗೊಳ್ಳುವ ಹಾಗೂ ಕರಗುವ ಸ್ಯಾನಿಟರಿ ಪ್ಯಾಡ್‌ಗಳು ಇತ್ಯಾದಿಯಂತಹ ಪುನರ್ ಬಳಕೆ ಮಾಡಬಹುದಾದ ಮತ್ತು ಜೈವಿಕವಾಗಿ ವಿಘಟಿತಗೊಳ್ಳುವ ಉತ್ಪನ್ನಗಳು, ಅಲ್ಟ್ರಾ ಲೋ–ವಾಟರ್ ಅಬ್ಸಾರ್ಬೆಂಟ್, ರಿಪೆಲೆಂಟ್ ಮಟೀರಿಯಲ್ಸ್ ಇತ್ಯಾದಿ ಕಾಂಪೊಸಿಟ್ ಮತ್ತು ಕಂಡೆನ್ಸ್ಡ್ ಸಾಮಗ್ರಿಗಳು, ಅತ್ಯಾಧುನಿಕ ಸಾಮಗ್ರಿಗಳನ್ನು ಬಳಸಿ ತಯಾರಿಸಿದ ಅತ್ಯಂತ ಹಗುರ ಸಾಮಗ್ರಿಗಳು.
- ಖರೀದಿಗೆ ಪರಿಗಣಿಸಬಹುದಾದ ಬೇರೆ ಹೊಸ ತಾಂತ್ರಿಕತೆಗಳ ನಾವೀನ್ಯತಾ ಉತ್ಪನ್ನಗಳು/ ಪರಿಹಾರಗಳು, ಕಾಯಿಲೆಗಳನ್ನು ಪತ್ತೆಹಚ್ಚಲು, ಪರೀಕ್ಷೆ ಮಾಡಲು, ರೋಗ ದೃಢೀಕರಣಗೊಳಿಸಲು ಹಾಗೂ ಉಪಶಮನಗೊಳಿಸಲು ಬಳಸಬಹುದಾದ ಇಮೇಜಿಂಗ್/ ಥರ್ಮಲ್ ಇಮೇಜಿಂಗ್ ಉತ್ಪನ್ನಗಳು/ ಪರಿಹಾರಗಳು, ಬ್ಲಾಕ್‌ಚೈನ್ ಪರಿಹಾರಗಳು. ಇಂಟರ್‌ನೆಟ್ ಆಫ್ ಥಿಂಗ್ಸ್– ಐಒಟಿ.
- ಲೆಕ್ಕಪತ್ರ ನಿರ್ವಹಣೆ/ ಕಾರ್ಯಾಚರಣೆಗಳು, ತಯಾರಿಕೆ ಇತ್ಯಾದಿಯಲ್ಲಿ ಎಸ್ ಎಂ ಎಸ್ ಆಧಾರಿತ ಪರಿಹಾರಗಳು, ಸೇವೆಗಳನ್ನು ಸಂಯೋಜಿಸಲು ಮೊಬೈಲ್ ಆಪ್ ಆಧಾರಿತ ಪರಿಹಾರಗಳು, ಆಗ್ಮೆಂಟೆಡ್ ರಿಯಾಲಿಟಿ/ ವರ್ಚುಯಲ್ ರಿಯಾಲಿಟಿ ಆಧಾರಿತ ಉತ್ಪನ್ನಗಳು/ ಪರಿಹಾರಗಳು, ಬಿಗ್‌ಡ್ಯಾಟಾ ಮತ್ತು ದತ್ತಾಂಶ ವಿಶ್ಲೇಷಣೆ ಅಧ್ಯಯನ, ಕೃತಕ ಬುದ್ಧಿಮತ್ತೆ/ ಮಷೀನ್ ಲರ್ನಿಂಗ್, ನ್ಯಾನೊ ತಂತ್ರಜ್ಞಾನ, ಎಡ್ಜ್‌ಕಂಪ್ಯೂಟಿಂಗ್, ಕ್ಲೌಡ್‌ಕಂಪ್ಯೂಟಿಂಗ್, ಸೈಬರ್ ಸುರಕ್ಷತೆ, ಅಂಗಾಂಶ ಸಂಸ್ಕರಣೆ, 3ಡಿ ಮುದ್ರಣ.



Downloaded From: www.kpscvaani.com

# ಕಾಂಡ್ಲಾವನದೊಳಗೆ ಕಯಾಕಿಂಗ್ ಸಾಹಸ ಯಾನ



**ರಾಜ್ಯದಲ್ಲಿ ಹಿನ್ನೀರು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡುವ ಉದ್ದೇಶದಿಂದ ಉಡುಪಿಯ ಕಾಂಡ್ಲಾವನದಲ್ಲಿ ಕಯಾಕಿಂಗ್ ಸಾಹಸ ಯಾನವನ್ನು ಆರಂಭಿಸಲಾಗಿದೆ.**

ಡಾ.ಪಿ.ವಿ. ರಾವ್

ಉಡುಪಿ ಎಂದಾಕ್ಷಣ ಅಷ್ಟಮಠಗಳು ಹಾಗೂ ಕನಕದಾಸರಿಗೆ ಕಿಂಡಿಯ ಮೂಲಕ ದರ್ಶನ ನೀಡಿದ ಶ್ರೀಕೃಷ್ಣನ ದೇವಾಲಯ ಸೇರಿದಂತೆ ಐತಿಹಾಸಿಕ ಧಾರ್ಮಿಕ ಯಾತ್ರಾಸ್ಥಳ ಜನರ ಮನದಲ್ಲಿ ಸುಳಿದಾಡುವುದುಂಟು. ಜೊತೆಗೆ ಉಡುಪಿ ಜಿಲ್ಲೆಗೆ ಹೊಂದಿಕೊಂಡಿರುವ ಬಂದರುಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಇದರ ನಡುವೆಯೇ ಸೀತಾನದಿಯ ಹಿನ್ನೀರಿನ ಕಾಂಡ್ಲಾವನದಲ್ಲಿ ಕಯಾಕಿಂಗ್ ಚಟುವಟಿಕೆಗಳು ನಡೆಯುತ್ತಿರುವುದು ಬಹುತೇಕರಿಗೆ ತಿಳಿದಿಲ್ಲ.

ಇಲ್ಲಿನ ಜಲ, ಅರಣ್ಯ ಸಂಪತ್ತನ್ನು ನೋಡುವುದೇ ಒಂದು ಭಾಗ್ಯ ಎಂದರೂ ತಪ್ಪಾಗಲಾರದು. ಸೀತಾನದಿಯ ಹಿನ್ನೀರಿನಲ್ಲಿ ದೋಣಿಯಲ್ಲಿ ಕುಳಿದು ಕಯಾಕಿಂಗ್ ಮಾಡುವುದೇ ಅದ್ಭುತ ಅನುಭವ. ನದಿ ನೀರಿನ ಮಧ್ಯೆ ದ್ವೀಪಗಳು ಸೃಷ್ಟಿಯಾಗಿದ್ದು, ದೋಣಿಯಲ್ಲಿ ದ್ವೀಪಗಳ ಮಧ್ಯೆ ಹಾಗೂ ಅವುಗಳ ಸುತ್ತಾ ಸುತ್ತುತ್ತಾ ಪ್ರಕೃತಿಯ ಸೊಬಗನ್ನು ಸವಿಯುವುದು ಪ್ರಕೃತಿ ಪ್ರಿಯರಿಗೆ ರೋಮಾಂಚನ ಉಂಟು ಮಾಡುತ್ತದೆ. ಇದೀಗ ಪ್ರವಾಸೋದ್ಯಮಕ್ಕೆ ಇಂಬು ನೀಡುವಂತೆ ಸೀತಾನದಿಯ ಹಿನ್ನೀರಿನ ಕಾಂಡ್ಲಾವನದಲ್ಲಿ ಕಯಾಕಿಂಗ್ ಚಟುವಟಿಕೆಗಳು ಆರಂಭಗೊಂಡಿದೆ.

ಕಯಾಕಿಂಗ್ ಜಲಸಾಹಸಿಗರ ಫೇವರೇಟ್ ಸ್ಪೋರ್ಟ್ಸ್. ಕಯಾಕ್ ಅನ್ನು ಜಾಣ್ಮೆಯಿಂದ ಬಳಸುತ್ತಾ, ಸುತ್ತಲ ಪ್ರಕೃತಿ ಸವಿಯುತ್ತಾ ನೀರಿನ ಮೇಲೆ ಸಾಗುವ ಸೊಬಗೇ ಸೊಬಗು. ಲೋಕೇಶ್ ಮತ್ತು ಮಿಥುನ್ ಎಂಬ ಇಬ್ಬರು ಯುವಕರು ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಹಾಗೂ ಸರಕಾರದ ಸಹಾಯದಿಂದ ಪ್ರವಾಸಿಗರಿಗಾಗಿ ಒಂದು ಹೊಸ



Downloaded From: www.kpscvaani.com

ಯೋಜನೆಯನ್ನು ಆರಂಭಿಸಿದ್ದಾರೆ. ಕಯಾಕ್ ಅನ್ನು ಈ ಹಿನ್ನೀರಿನಲ್ಲಿ ಪ್ರಾರಂಭಿಸಿದ್ದಾರೆ. ಆ ಮೂಲಕ ರಾಜ್ಯ ಪ್ರವಾಸೋದ್ಯಮ ಇಲಾಖೆಯು ಹಿನ್ನೀರು ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ನೀಡುತ್ತಿದೆ.

ಕಯಾಕಿಂಗ್ ಗೀಳು ಈಗೀಗ ಭಾರತೀಯರಲ್ಲೂ ಹೆಚ್ಚುತ್ತಿದೆ. ಸಾಹಸೀ ಪ್ರವೃತ್ತಿಯವರ ನೆಚ್ಚಿನ ವಾಟರ್ ಸ್ಪೋರ್ಟ್ಸ್ ಆಗಿ ಜನಪ್ರಿಯತೆ ಪಡೆಯುತ್ತಿರುವ ಕಯಾಕಿಂಗ್‌ನ ಮಜವೇನೆಂದರೆ ನದಿ, ಸರೋವರ, ಸಮುದ್ರ, ಕೆರೆ ಎಲ್ಲಿ ಬೇಕಿದ್ದರೂ ಪಡ್ಲಿಂಗ್ ಮಾಡಬಹುದು. ಅಲ್ಲದೆ, ಈ ಕ್ರೀಡೆಯಲ್ಲಿ ರಿಸ್ಕ್ ಕಡಿಮೆ. ನೀವು ಈ ಕ್ರೀಡೆಯ ಮಜಾ ಸವಿಯಬೇಕೆಂದರೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಸಾಲಿಗ್ರಾಮ ಸಮೀಪದ ಪಾರಂಪಳ್ಳಿ ಬಳಿಯ ಸೀತಾನದಿಯ ಹಿನ್ನೀರಿಗೆ ಹೋಗಬೇಕು. ಅಲ್ಲಿ ದಟ್ಟವಾದ ಮ್ಯಾಂಗ್ರೋವ್‌ಗಳ ನಡುವೆ ಕಯಾಕಿಂಗ್ ಅನ್ನು ಸಹ ನೀವು ಆನಂದಿಸಬಹುದು.

ಸೀತಾನದಿಯ ಹಿನ್ನೀರನ್ನು ನೋಡುವುದೇ ಸೋಜಿಗ. ಅದರಲ್ಲೂ ದೋಣಿಯಲ್ಲಿ ಸಾಗುವುದೆಂದರೆ ಎಂಥವರಲ್ಲೂ ರೋಮಾಂಚನಕಾರಿ ಅನುಭವ ಉಂಟು ಮಾಡಲಿದೆ. ಕಯಾಕಿಂಗ್ ಮಾಡುವವರು ಜೀವರಕ್ಷಕ ಜಾಕೆಟ್‌ಗಳನ್ನು ತೊಟ್ಟು, ತಾವೇ ಹುಟ್ಟು ಹಾಕುತ್ತಾ ಸಾಗುತ್ತಿದ್ದರೆ ವಿದೇಶಗಳಲ್ಲಿನ ಯಾವುದೇ ಜಲ ಕ್ರೀಡೆಗಳಿಗೆ ಕಡಿಮೆ ಇಲ್ಲ ಎಂಬ ಮನೋಭಾವ ಸಾಹಸಿಗರಲ್ಲಿ ಮೂಡುತ್ತದೆ.

ಕಣ್ಣಿಗೆ ಕಾಣುವಷ್ಟು ದೂರ ಹಿನ್ನೀರು, ಅದರ ನಡುವೆ ದ್ವೀಪಗಳಲ್ಲಿ ದಟ್ಟವಾಗಿ ಬೆಳೆದಿರುವ ತೋಪುಗಳು, ಆ ತೋಪುಗಳ ಸಂದಿಗೊಂದಿಯಲ್ಲಿ ದೋಣಿಯಲ್ಲಿ ಸಾಗುವುದು ಮನಸ್ಸಿಗೆ ಮುದನೀಡುತ್ತದೆ. ಸಂಜೆ ಹಾಗೂ ಬೆಳಗಿನ ಹೊತ್ತು ಕಯಾಕಿಂಗ್‌ಗೆ ಬಂದರೆ ಕಾಂಡ್ಲಾವನದೊಳಗೆ ಗೂಡು ಕಟ್ಟಿಕೊಂಡಿರುವ ಹಕ್ಕಿಗಳ ಚಿಲಿಪಿಲಿ ಸದ್ದನ್ನು ಆಲಿಸಬಹುದು. ಮನಸ್ಸಿಗೆ ಬಹಳ ಮುದ ನೀಡುವ, ಆಹ್ಲಾದಕರ ವಾತಾವರಣದ ಹಿತವನ್ನೂ ಅನುಭವಿಸಬಹುದು. ತೀರಾ ಆಳ ಇಲ್ಲ ಎಂಬ ವಿಶ್ವಾಸ ಮೂಡಿದರೂ, ಮಧ್ಯೆ ಸಾಗುತ್ತಿದ್ದರೆ, ಜೀವವನ್ನು ಕೈಯಲ್ಲಿಡಿದು ಮುಂದೆ ಸಾಗುವಂತಹ ಆತಂಕದ ಜೊತೆಗೆ ಸಾಹಸದ ಅನುಭವವೂ

> **ಸಾಲಿಗ್ರಾಮ ಎಂಬ ಊರಿನಲ್ಲಿರುವ ಈ ಕಾಂಡ್ಲಾವನವು ಉಡುಪಿಯಿಂದ 18 ಕಿ.ಮೀ ಅಂತರದಲ್ಲಿದೆ. ಉಡುಪಿಯಿಂದ ಕುಂದಾಪುರಕ್ಕೆ ಹೋಗುವ ಎಲ್ಲಾ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ಸಾಲಿಗ್ರಾಮದ ಮುಖಾಂತರವೇ ಹಾದುಹೋಗುತ್ತವೆ. ಸಾಲಿಗ್ರಾಮ ಬಸ್ ನಿಲ್ದಾಣದಿಂದ 1.5 ಕಿ.ಮೀ ದೂರದಲ್ಲಿರುವ ಕಾಂಡ್ಲಾವನಕ್ಕೆ ಹೋಗಲು ಆಟೋಗಳು ಸಿಗುತ್ತವೆ.**

ಜೊತೆಗೂಡುವುದರಿಂದ ದೋಣಿ ವಿಹಾರ ಕೈಗೊಂಡಿದ್ದು ಸಾರ್ಥಕ ಎಂಬ ಭಾವನೆ ಮೂಡುತ್ತದೆ.

ದೂರದಿಂದ ಬಂದಂತಹ ಪ್ರವಾಸಿಗರು ಈ ಸಾಹಸ ಕ್ರೀಡೆಯಲ್ಲಿ ಭಾಗಿಯಾಗುವ ಮೂಲಕ ಹಿಂದೆಂದೂ ಕಾಣದಂತಹ ಮನೋಲ್ಲಾಸ ಅನುಭವಿಸುತ್ತಾರೆ. ಕಯಾಕಿಂಗ್‌ಗಾಗಿ ಇಲ್ಲಿ ಒಟ್ಟು 8 ದೋಣಿಗಳಿದ್ದು, ಒಂದು ದೋಣಿಗೆ ಇಬ್ಬರಂತೆ, ಒಂದೇ ಸಮಯದಲ್ಲಿ ಒಟ್ಟು 12 ಜನರು ಈ ಸಾಹಸ ಕ್ರೀಡೆಯಲ್ಲಿ ಭಾಗವಹಿಸಬಹುದಾಗಿದೆ. ಸುಂದರ ಶಾಂತ ಪ್ರಕೃತಿಯನ್ನು ಸವಿಯುವ ಡ್ರೀಮ್‌ಲ್ಯಾಂಡ್‌ನ ಅನುಭವ ಇಲ್ಲಿ ದೊರೆಯುತ್ತದೆ. ಜೊತೆಗೆ ಕೇವಲ ಹಿನ್ನೀರಿನ ನೀರಿನ ಮೂಲಕ ಮಾತ್ರ ತಲುಪಬಹುದಾದ ಪುಟಾಣಿ ಹಳ್ಳಿಗಳೂ ಕೈಬೀಸಿ ಕರೆಯುತ್ತವೆ. ಇಲ್ಲಿ ಹೌಸ್ ಬೋಟ್‌ನಲ್ಲಿ ಉಳಿಯುವ ವ್ಯವಸ್ಥೆ ಮಾಡಿಕೊಂಡರೆ ನಿಮ್ಮ ಕಯಾಕ್ ಪ್ರವಾಸಕ್ಕೆ ಮತ್ತಷ್ಟು ನೆನಪುಗಳು ಸೇರಿಕೊಳ್ಳುತ್ತವೆ.

ಇಲ್ಲಿಗೆ ಬರುವವರಿಗೆ ಕಯಾಕಿಂಗ್ ಮಾಡುವ ಅನುಭವವಿಲ್ಲವೆಂದು ಯೋಚಿಸುವ ಅಗತ್ಯವೇ ಇಲ್ಲ. ಇಲ್ಲಿ ನುರಿತ ತರಬೇತುದಾರರು ಪ್ರವಾಸಿಗರಿಗೆ ದೋಣಿ ಹುಟ್ಟು ಹಾಕುವ ಮಾರ್ಗದರ್ಶನವನ್ನು ನೀಡುತ್ತಾರೆ.

ಸಂಸ್ಥೆಯ ಮುಖ್ಯಸ್ಥ ಲೋಕೇಶ್, ಹಿನ್ನೀರಿನ ಸೌಂದರ್ಯ ಸವಿಯಲು ರಾಜ್ಯದ ಪ್ರವಾಸಿಗರು ಹೆಚ್ಚಾಗಿ ಗೋವಾ, ಕೇರಳಕ್ಕೆ ಹೋಗುತ್ತಾರೆ. ಅಂಥವರನ್ನು ದೃಷ್ಟಿಯಲ್ಲಿಟ್ಟುಕೊಂಡು ಕರಾವಳಿಯಲ್ಲಿ ಕಯಾಕಿಂಗ್ ಆರಂಭಿಸಲಾಗಿದೆ. ಕಯಾಕಿಂಗ್‌ಗೆ ಪ್ರವಾಸಿಗರಿಂದ ನಿರೀಕ್ಷೆಗೂ ಮೀರಿ ಸ್ಪಂದನೆ ಸಿಕ್ಕಿದ್ದು, ಈ ನದಿ ಹೆಚ್ಚು ಆಳ ಇಲ್ಲದಿರುವುದರಿಂದ ಕಯಾಕಿಂಗ್ ಮಾಡಲು ಸೂಕ್ತವಾಗಿದೆ. ದೋಣಿ ಚಾಲನೆ ಬಗ್ಗೆ ತರಬೇತಿ ನೀಡಲಾಗುವುದಲ್ಲದೆ, ಸುರಕ್ಷತೆಗೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡು ಈ ಸಾಹಸ ಕ್ರೀಡೆಯನ್ನು ಆರಂಭಿಸಲಾಗಿದೆ ಎಂದು ಈ ಕ್ರೀಡೆಯನ್ನು ನಡೆಸುತ್ತಿರುವ ಲೋಕೇಶ್ ಅವರು ಹೇಳುತ್ತಾರೆ. ಜಲ ಕ್ರೀಡೆಯಲ್ಲಿ ಆಸಕ್ತಿ ಇರುವವರು ಇನ್ನು ಮುಂದೆ ಕಯಾಕಿಂಗ್ ಮಾಡಲು ಉಡುಪಿಗೆ ತೆರಳಬಹುದು.



Downloaded From: www.kpscvaani.com

# ನಿರಂತರ ಆದಾಯ ನೀಡಲಿರುವ

# ಕುಕ್ಕುಟ ಉದ್ಯಮ

**ರೈತರು ಉಪ ಕಸುಬಾಗಿ ಕೋಳಿ ಸಾಕಾಣಿಕೆಯನ್ನು ಮತ್ತು ಯುವಕರು ಕುಕ್ಕುಟ ಉದ್ಯಮವನ್ನು ಹೊಂದುವ ಮೂಲಕ ನಿರಂತರವಾಗಿ ಆದಾಯವನ್ನು ಪಡೆಯಬಹುದಾಗಿದೆ.**

● ಮಂಜುನಾಥ್ ನಾಯ್ಕ್

**ಪ**ಶುಸಂಗೋಪನೆಯಲ್ಲಿ ರೈತರಿಗೆ ಉಪ ಕಸುಬಿನಿಂದ ನಿರಂತರವಾಗಿ ಆದಾಯ ದೊರಕುವ ಇನ್ನೊಂದು ಕ್ಷೇತ್ರವೆಂದರೆ ಅದುವೇ ಕುಕ್ಕುಟ ಉದ್ಯಮ. ಕರ್ನಾಟಕ ಕುಕ್ಕುಟ ಸಹಕಾರ ಮಂಡಳಿಯ ರಾಜ್ಯಾಧ್ಯಕ್ಷರಾದ ಡಿ.ಕೆ.ಕಾಂತರಾಜು ಅವರು ಈ ಲೇಖನದಲ್ಲಿ ರಾಜ್ಯದ ಕುಕ್ಕುಟ ಉದ್ಯಮದ ಕುರಿತು ಸಂಕ್ಷಿಪ್ತ ಚಿತ್ರಣವನ್ನು ನೀಡಿದ್ದಾರೆ.

ಮಾಂಸಹಾರಿಗಳಿಗೆ ಪ್ರಮುಖ ಆಹಾರ ಮೂಲವಾದ ಕೋಳಿ ಸಾಕಾಣಿಕೆ ಇಂದು ರಾಜ್ಯದಲ್ಲಿ ಬೃಹತ್ ಉದ್ಯಮವಾಗಿ ಬೆಳೆದಿದ್ದು, ಲಕ್ಷಾಂತರ ಮಂದಿ ಈ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ. ವಾರ್ಷಿಕವಾಗಿ ಸಾವಿರಾರು ಕೋಟಿ ರೂಪಾಯಿ ವ್ಯವಹಾರ ಕುಕ್ಕುಟ ಉದ್ಯಮದಲ್ಲಿ ನಡೆಯುತ್ತದೆ.

ಕೋಳಿ ಸಾಕಾಣಿಕೆ ರಾಜ್ಯದಲ್ಲಿ ಅತಿ ಹೆಚ್ಚು ಮಂದಿಗೆ ಉದ್ಯೋಗ ನೀಡುವ ಬೃಹತ್ ಉದ್ಯಮವಾಗಿ ಬೆಳೆದಿದ್ದು, ರೈತರಿಗೆ ಹಾಲು ಮಾರಾಟದಂತೆಯೇ ಮೊಟ್ಟೆ ಹಾಗೂ ಕೋಳಿ ಮಾಂಸ ಮಾರಾಟ ನಿರಂತರ ಆದಾಯ ನೀಡುವ ಪ್ರಮುಖ ಕ್ಷೇತ್ರವಾಗಿದೆ. ರಾಜ್ಯದಲ್ಲಿ ಐದು ಲಕ್ಷಕ್ಕೂ ಅಧಿಕ ಮಂದಿ ಕುಕ್ಕುಟ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದು, ವಾರ್ಷಿಕವಾಗಿ 20 ಸಾವಿರ ಕೋಟಿ ರೂಪಾಯಿಗೂ ಅಧಿಕ ಮೊತ್ತದ ವ್ಯವಹಾರ ನಡೆಯುವ ಬೃಹತ್ ಉದ್ಯಮವಾಗಿ ಕೋಳಿ ಸಾಕಾಣಿಕೆ ಉದ್ಯಮ ಬೆಳೆದಿದೆ.

ರಾಜ್ಯದಲ್ಲಿ ದಿನಕ್ಕೆ 3 ಕೋಟಿ ಮಾಂಸದ ಕೋಳಿ ಹಾಗೂ ಒಂದೂವರೆ ಕೋಟಿ ಮೊಟ್ಟೆ ಕೋಳಿ ಉತ್ಪಾದನೆಯಾಗುತ್ತವೆ. ಈ ಮೊಟ್ಟೆ ಕೋಳಿಯಿಂದ ಉತ್ಪಾದನೆಯಾಗುವ ಒಂದುವರೆ ಕೋಟಿ ಮೊಟ್ಟೆಗಳಲ್ಲಿ ಬೆಂಗಳೂರು ಮಹಾನಗರ ಒಂದರಲ್ಲಿಯೇ ಪ್ರತಿದಿನ 50 ಲಕ್ಷ ಮೊಟ್ಟೆಗಳು ಹಾಗೂ ಒಂದೂವರೆ ಕೋಟಿ ಮಾಂಸದ ಕೋಳಿಗಳ ವ್ಯಾಪಾರವಾಗುತ್ತದೆ.



Downloaded From: www.kpscvaani.com

ರಾಜ್ಯದಲ್ಲಿ ಗೋ ಹತ್ಯೆ ನಿಷೇಧ ಕಾನೂನು ಜಾರಿಗೆ ಬಂದ ನಂತರ ಕೋಳಿ ಮಾಂಸ ಹಾಗೂ ಮೊಟ್ಟೆಗಳಿಗೆ ಬೇಡಿಕೆ ಹೆಚ್ಚಾಗಿದ್ದು, ಬೆಲೆಯಲ್ಲೂ ಏರಿಕೆಯಾಗಿದೆ. ಉತ್ಪಾದನಾ ವೆಚ್ಚ ತೆಗೆದರೆ ರೈತರಿಗೆ ಪ್ರತಿ ಕೋಳಿಯಿಂದ ಸರಾಸರಿ 10–20 ರೂಪಾಯಿ ಲಾಭ ಸಿಗುತ್ತದೆ. ರೈತರು ಕಾರ್ಪೊರೇಟ್ ಕಂಪನಿಗಳಿಗೆ ಕೋಳಿ ಸಾಕಾಣಿಕೆ ಮಾಡಿಕೊಟ್ಟರೆ ಅವರು ಪ್ರತಿ ಕೋಳಿಗೆ ಆರುವರೆ ರೂಪಾಯಿ ರೈತರಿಗೆ ಪಾವತಿಸುತ್ತಾರೆ. ಇದರಲ್ಲಿ ಕೋಳಿ ಮರಿ ಹಾಗೂ ಅದಕ್ಕೆ ಬೇಕಾದ ಆಹಾರ, ಆರೈಕೆ ಮತ್ತು ಚಿಕಿತ್ಸಾ ವೆಚ್ಚವನ್ನು ಕಾರ್ಪೊರೇಟ್ ಕಂಪನಿಗಳೇ ಬರಿಸುತ್ತವೆ. ರೈತರಿಗೆ ಕೋಳಿ ಸಾಕಾಣಿಕೆ ಮಾಡುವ ಜವಾಬ್ದಾರಿ ಮಾತ್ರ ಇರುತ್ತದೆ. ಈ ಪ್ರಕ್ರಿಯೆಯಲ್ಲಿ ರೈತರು ಯಾವುದೆ ರೀತಿಯಲ್ಲಿ ಬಂಡವಾಳ ಹೂಡುವ ಅಗತ್ಯವಿರುವುದಿಲ್ಲ.

ಆರರಿಂದ ಏಳು ವಾರಗಳ ಕಾಲ ಮಿತಿಯೊಳಗೆ ಮಾಂಸದ ಕೋಳಿ ಸಾಕಾಣಿಕೆ ಮಾಡಿ ಕಾರ್ಪೊರೇಟ್ ಕಂಪನಿಗಳಿಗೆ ಹಸ್ತಾಂತರಿಸಬೇಕು ಅಷ್ಟೆ. ರಾಜ್ಯದ ಮೈಸೂರು, ದಾವಣಗೆರೆ, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮಾಂಸದ ಕೋಳಿ ಹಾಗೂ ಮೊಟ್ಟೆಗಳು ಉತ್ಪಾದನೆಯಾಗುತ್ತವೆ.

**ಕುಕ್ಕುಟ ಉದ್ಯಮ ಆರಂಭಿಸುವುದು ಹೇಗೆ?**

ಹೊಸದಾಗಿ ಕುಕ್ಕುಟ ಉದ್ಯಮ ಆರಂಭಿಸಲು ಆಸಕ್ತಿ ಇರುವ ಹತ್ತೊಂಬತ್ತು ವರ್ಷ ಮೇಲ್ಪಟ್ಟ ನಿರುದ್ಯೋಗಿ ಯುವಕ–ಯುವತಿಯರು ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿಯಿಂದ ವಸತಿ ಸಹಿತ ಉಚಿತ ತರಬೇತಿ ನೀಡಲಾಗುತ್ತದೆ. ಈ ಸಂದರ್ಭದಲ್ಲಿ ಆಹಾರ ಮತ್ತು ಶಿಷ್ಯವೇತನ ಸೌಲಭ್ಯ ಒದಗಿಸಲಾಗುತ್ತದೆ. ಬೆಂಗಳೂರು, ಬೆಳಗಾವಿ ಸಹಿತ ರಾಜ್ಯದ ನಾಲ್ಕು ಕಂದಾಯ ವಿಭಾಗದಲ್ಲಿ ಪ್ರತಿವರ್ಷ ಒಂದು ಸಾವಿರ ಮಂದಿಗೆ ಕೋಳಿ ಸಾಕಾಣಿಕೆ ಬಗ್ಗೆ ತರಬೇತಿ ನೀಡಲಾಗುತ್ತದೆ.

ತರಬೇತಿ ಪಡೆದ ಅರ್ಹ ಅಭ್ಯರ್ಥಿಗಳು ಕೋಳಿ ಸಾಕಾಣಿಕೆ ಉದ್ಯಮ ಆರಂಭಿಸಲು ಡಿಸಿಸಿ ಬ್ಯಾಂಕ್ ಹಾಗೂ ಸಹಕಾರಿ ಬ್ಯಾಂಕುಗಳ ಮೂಲಕ ವಾರ್ಷಿಕ ಶೇಕಡಾ 3% ಬಡ್ಡಿ ದರದಲ್ಲಿ 10 ಲಕ್ಷ ರೂಪಾಯಿ ಸಾಲ ನೀಡಲಾಗುತ್ತದೆ. ಅಲ್ಲದೆ ಅವರಿಗೆ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳಿಯಿಂದ ಹಾಗೂ ಸರ್ಕಾರದಿಂದ ಎಲ್ಲಾ ರೀತಿಯ ಅಗತ್ಯ ನೆರವು ನೀಡಲಾಗುತ್ತದೆ.

**ಮಧ್ಯಾಹ್ನ ಬಿಸಿಯೂಟಕ್ಕೆ ಮೊಟ್ಟೆ**

ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಮೊಟ್ಟೆ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿರುವುದರಿಂದ ಮೊಟ್ಟೆಗಳಿಗೆ ಇನ್ನೂ ಹೆಚ್ಚು ಬೇಡಿಕೆ ಬರಲಿದೆ. ನಿರುದ್ಯೋಗಿ ಯುವಕ–ಯುವತಿಯರು ಕುಕ್ಕುಟ ಉದ್ಯಮದಲ್ಲಿ ತಮನ್ನು ತೊಡಗಿಸಿಕೊಳ್ಳುವುದರಿಂದ ಕೈತುಂಬಾ ಆದಾಯಗಳಿಸುವುದರ ಜೊತೆಗೆ ಸ್ವಾವಲಂಬಿ ಹಾಗೂ ಸ್ವಾಭಿಮಾನದ ಜೀವನ ಸಾಗಿಸಬಹುದು.



**ನಾಟಿ ಕೋಳಿ ಮಾರಾಟಕ್ಕೆ ಉತ್ತೇಜನ:**


ರೈತರು ತಮ್ಮ ಮನೆಯ ಹಿತ್ತಲಿನಲ್ಲಿಯೇ ನಾಟಿ ಕೋಳಿ ಸಾಕಾಣಿಕೆ ಮಾಡಿ ಮಾರಾಟ ಮಾಡಲು ಉತ್ತೇಜನ ನೀಡಲು ಹೊಸ ಯೋಜನೆ ರೂಪಿಸಿದ್ದು, ಆ ಪ್ರಕಾರ ಪ್ರತಿ ರೈತರಿಗೆ ಸಾಕಾಣಿಕೆ ಮಾಡಲು 500 ಕೋಳಿ ನೀಡಲಾಗುತ್ತದೆ. ಇದರಿಂದ ಬರುವ ಮೊಟ್ಟೆಯನ್ನು ಸ್ಥಳೀಯ ಅಂಗನವಾಡಿಗಳಿಗೆ ಮಾರಾಟ ಮಾಡುವ ವ್ಯವಸ್ಥೆಯನ್ನು ಒದಗಿಸಲಾಗುತ್ತದೆ. ಅಲ್ಲದೆ ರೈತರು ಸಾಕಿದ ನಾಟಿ ಕೋಳಿ ಮಾರಾಟ ಮಾಡಲು ಬೆಂಗಳೂರು, ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ 20 ಮಾರಾಟ ಮಳಿಗೆ ಆರಂಭಿಸಲಾಗುತ್ತಿದೆ. ಈ ಯೋಜನೆಯಲ್ಲಿ ಪ್ರತಿ ರೈತರಿಗೆ 35 ಸಾವಿರ ರೂಪಾಯಿ ತನಕ ಸಹಾಯ ಧನ ಸಿಗುತ್ತದೆ.

ಅತ್ಯಂತ ಕಡಿಮೆ ಬಂಡವಾಳ ಹೂಡಿ ಮನೆಯಲ್ಲಿಯೇ ಮಾಂಸದ ಹಾಗೂ ಮೊಟ್ಟೆ ಕೋಳಿ ಸಾಕಾಣಿಕೆ ಮಾಡುವುದರಿಂದ ಹೈನುಗಾರಿಕೆಯಂತೆ ಇದು ಕುಟುಂಬಕ್ಕೆ ಉಪ ಉತ್ಪನ್ನದ ಮೂಲವಾಗುತ್ತದೆ. ಸಾಕಿದ ಕೋಳಿ ಹಾಗೂ ಮೊಟ್ಟೆಗಳನ್ನು ತಮ್ಮ ಊರಿನಲ್ಲಿಯೇ ಮಾರಾಟ ಮಾಡಿದರೂ ಹೆಚ್ಚಿನ ಲಾಭಗಳಿಸಬಹುದು.

ಇನ್ನು ಹೆಚ್ಚಿನ ಮಾಹಿತಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಹಕಾರಿ ಕುಕ್ಕುಟ ಮಹಾ ಮಂಡಳ ನಿಯಮಿತ, ನಂ 52, ದಂಡು ಪ್ರದೇಶ, ರೈಲ್ವೆ ನಿಲ್ದಾಣ ರಸ್ತೆ, (ಕ್ವೀನ್ಸ್ ರಸ್ತೆ), ಪಶು ಆಸ್ಪತ್ರೆ ಆವರಣ, ಬೆಂಗಳೂರು–560052, ಈ ಕಚೇರಿಗೆ ಖುದ್ದು ಭೇಟಿ ನೀಡಬಹುದು. ಅಥವಾ ದೂರವಾಣಿ ಸಂಖ್ಯೆ 080–22282218, 22282230 ಗೆ ಕರೆ ಮಾಡಬಹುದು.

Downloaded From: www.kpscvaani.com

# ಪದಬಂಧ-28




ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

4. ಮರಳ ಹತ್ತಿರ ಹುಚ್ಚ ನಿಂತಿದ್ದಾನಲ್ಲಾ!
6. ಮುಚ್ಚುಮರೆ ಅಥವಾ ಗುಟ್ಟು (4)
7. ಲತಾಮಂಗೇಶ್ಕರ್ ಅವರ ಮೂಲ ಹೆಸರು (6)
9. ಪ್ರೇಮಿಗಳ ಹುಸಿ ಜಗಳ (6)
14. ದೊಡ್ಡ ಹಾರೆ ಇಲ್ಲಿದೆ (3)
15. ಒತ್ತಾಯವನ್ನು ಹೀಗೆನ್ನಿ (4)

**ಮೇಲಿಂದ ಕೆಳಕ್ಕೆ**

1. ಗ್ರಾಮೀಣ ಜನರ ಸೇವೆ ನೀಡುವ ಕೇಂದ್ರ (4)
2. ಬುರುಗು ಇಲ್ಲಿದೆ (2)
3. ಪ್ರಾಯಕ್ಕೊಂದು ಪರ್ಯಾಯ ಪದ (3)
5. ಯಥೇಚ್ಛವಾದುದು ಉಲ್ಟಾ ಕಾಣುತ್ತಿದೆ (3)
6. ಹಾಡಿಸಿಕೊಳ್ಳುವ ಯೋಗ್ಯತೆ ತಿರುವುಮುರುವಾಗಿದೆ (3)
8. ಕೂಪದಲ್ಲಿರುವ ಕಪ್ಪೆ! (3)
10. ಮಗನಿಲ್ಲಿ ತಿರುಗಿದ್ದಾನಲ್ಲಾ! (3)
11. ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
12. ಪದದಲ್ಲಿಯೇ ಪುಸ್ತಕದ ಸರ್ಗವಿದೆ! (4)
13. ಹೆಣ್ಣುಮಕ್ಕಳಿಗೆ ಸರ್ಕಾರ ಆಯೋಜಿಸಿರುವ ತರಬೇತಿಗೆ ಈವೀರ ವನಿತೆಯ ಹೆಸರಿದೆ (3)
16. ಪೀಳಿಗೆಯನ್ನು ಹೀಗೆನ್ನಿ (2)

**ಉತ್ತರ**

**ಮೇಲಿಂದ ಕೆಳಕ್ಕೆ**

1. ಗ್ರಾಮಒನ್ 2. ನೊರೆ 3. ಹರೆಯ 5. ಳರಹೇ 6. ತೆಯಗೇ 8. ಮಂಡೂಕ 10.ಯನತ 11. ಹಗಲು 12. ಪರಿಚ್ಛೇದ 13. ಓಬವ್ವ 16.ವಂಶ

**ಎಡದಿಂದ ಬಲಕ್ಕೆ**

4. ಮರುಳ 6. ತೆರೆಮರೆ 7.ಹೇಮಾಮಂಗೇಶ್ಕರ್ 9. ಪ್ರಣಯಕಲಹ 14. ಗಡಾರಿ 15. ಬಲವಂತ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Downloaded From: www.kpscvaani.com

ಜನವರಿ 27 ರಂದು ಮುಖ್ಯಮಂತ್ರಿ ಅವರು 13 ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಲೋಗೋವನ್ನು ಬಿಡುಗಡೆ ಮಾಡಿದರು.
ಈ ಸಂದರ್ಭದಲ್ಲಿ ತೋಟಗಾರಿಕೆ ಸಚಿವರಾದ ಮುನಿರತ್ನ, ಅಕಾಡೆಮಿಯ ಅಧ್ಯಕ್ಷರಾದ ಸುನೀಲ್ ಪುರಾಣಿಕ್,
ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾದ ಜಯರಾಂ, ನಟಿ ಸುಧಾರಾಣಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ
ಎನ್. ಮಂಜುನಾಥ್ ಪ್ರಸಾದ್, ಆಯುಕ್ತರಾದ ಡಾ|| ಪಿ.ಎಸ್.ಹರ್ಷ ಅವರು ಸೇರಿದಂತೆ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಫೆಬ್ರವರಿ 13 ರಂದು ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಹಿರೇ ಬೆಂಡಗೇರಿ ಗ್ರಾಮದಲ್ಲಿ ತುಂಬಿರುವ ದೊಡ್ಡಕೆರೆಗೆ
ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಾಗಿನ ಅರ್ಪಿಸಿದರು. ಈ ಸಂದರ್ಭದಲ್ಲಿ ಕಾರ್ಮಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ
ಅರಬೈಲ್ ಶಿವರಾಮ ಹೆಬ್ಬಾರ್, ಜಲಸಂಪನ್ಮೂಲ ಸಚಿವರಾದ ಗೋವಿಂದ ಕಾರಜೋಳ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

Downloaded From: www.kpscvaani.com

RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

Downloaded From: www.kpscvaani.com